


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 11 ಭಾನುವಾರ 2025

ಸಂಪುಟ: 46 | ಸಂಚಿಕೆ: 25 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಭಾರತ–ಪಾಕ್ ಕದನ ವಿರಾಮ

ನಾಳೆ ಅಮೆರಿಕಾ ಮಧ್ಯಸ್ಥಿಕೆಯಲ್ಲಿ ಉಭಯ ದೇಶಗಳ ಮಾತುಕತೆ





ನರೇಂದ್ರ ಮೋದಿ ಡೊನಾಲ್ಡ್ ಟ್ರಂಪ್ ಶೆಹಬಾಜ್ ಷರೀಫ್


ನವದೆಹಲಿ, ಮೇ 10– ಭಾರತ ಹಾಗೂ ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾಗಿದೆ. ಇದನ್ನು ಉಭಯ ದೇಶಗಳ ವಿದೇಶಾಂಗ ಸಚಿವಾಲಯಗಳೂ ಖಚಿತಪಡಿಸಿವೆ.

ಪಾಕಿಸ್ತಾನ ಸೇನೆಯ ಕಾರ್ಯಾಚರಣೆಗಳ ಮಹಾನಿರ್ದೇಶಕರು (ಡಿಜಿಎಂಓ) ಭಾರತದ ಮಹಾನಿರ್ದೇಶಕರಿಗೆ ಇಂದು ಮಧ್ಯಾಹ್ನ 3.35ಕ್ಕೆ ಕರೆ ಮಾಡಿ ಮಾತನಾಡಿದ್ದು, ಇಬ್ಬರು ಎಲ್ಲಾ ರೀತಿಯ ದಾಳಿ ಹಾಗೂ ಸೇನಾ ಕಾರ್ಯಾಚರಣೆಯನ್ನು ನಿಲ್ಲಿಸಲು ಒಪ್ಪಿಕೊಂಡಿದ್ದಾರೆ. ಸಂಜೆ 5 ಗಂಟೆಯಿಂದಲೇ ಭೂಮಿ, ವಾಯು ಮತ್ತು ಸಾಗರದ ಮೂಲಕ ಯಾವುದೇ ದಾಳಿ ನಡೆಸದಿರಲು ಉಭಯ ದೇಶಗಳು ಒಪ್ಪಿಕೊಂಡಿವೆ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮಾಹಿತಿ ನೀಡಿದರು.

ಭಾರತ ಮತ್ತು ಪಾಕಿಸ್ತಾನ ಪರಸ್ಪರ ಒಪ್ಪಿಗೆ ಮೇರೆಗೆ ಶನಿವಾರ ಸಂಜೆ 5ರಿಂದಲೇ ಎಲ್ಲಾ ರೀತಿಯ ದಾಳಿಗಳನ್ನು ಸ್ಥಗಿತಗೊಳಿಸುತ್ತಿದ್ದೇವೆ. ಈ ಸಂಬಂಧ ಉಭಯ ದೇಶಗಳ ನಡುವೆ ಮೇ 12 (ಸೋಮವಾರ) ಮಾತುಕತೆ ನಿಗದಿಯಾಗಿದೆ. ಈ ಸಭೆಗೆ ಅಮೆರಿಕಾ ಮಧ್ಯಸ್ಥಿಕೆ ವಹಿಸಲಿದೆ ಎಂದು ವಿಕ್ರಮ್ ಮಿಸ್ರಿ ■6ನೇ ಪುಟಕ್ಕೆ

ಪಾಕ್‌ನಿಂದ ಕೆಲಕಾಲ ಕದನ ವಿರಾಮ ಉಲ್ಲಂಘನೆ

- ಭಾರತದೆಡೆಗೆ ಹಾರಿಸಲ್ಪಟ್ಟ 28 ಡ್ರೋನ್‌ಗಳನ್ನು ಉಡಾಯಿಸಿದ ಸೇನಾಪಡೆ
- ರಾತ್ರಿ 10.30ರ ಸುಮಾರಿಗೆ ಪಾಕ್ ದಾಳಿ ಸ್ಥಗಿತ
- ಸದ್ಯ ಸಹಜ ಸ್ಥಿತಿ ಮರಳಿರುವುದಾಗಿ ಭಾರತೀಯ ಸೇನೆ ಪ್ರಕಟ



ನವದೆಹಲಿ: ಕಳೆದ ರಾತ್ರಿಯಿಡೀ ಭಾರತ ಮತ್ತು ಪಾಕಿಸ್ತಾನದ ನಡುವೆ ಅಮೇರಿಕಾ ನಡೆಸಿದ ಮಾತುಕತೆಯ ಫಲವಾಗಿ ಶನಿವಾರ ಸಂಜೆ ಉಭಯ ದೇಶಗಳೂ ಕದನ ವಿರಾಮ ಘೋಷಿಸಿದವು. ಅದೇ ವೇಳೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಭಾರತ ಮತ್ತು ಪಾಕ್ ಕದನ ವಿರಾಮಕ್ಕೆ ಒಪ್ಪಿವೆ ಎಂದು ಹರ್ಷ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದರು.

ಆದರೆ ಕದನ ವಿರಾಮ ಘೋಷಣೆಯಾದ ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನವು ಜಮ್ಮು–ಕಾಶ್ಮೀರ, ಅಮೃತಸರ, ಗುಜರಾತ್, ಪಂಜಾಬ್ ರಾಜ್ಯಗಳ ಗಡಿಯಲ್ಲಿ ಡ್ರೋನ್ ಹಾರಾಟ ನಡೆಸಿ, ಕದನ ವಿರಾಮ ಉಲ್ಲಂಘಿಸುವ ಮೂಲಕ ಉದ್ಧಟತನ ಮೆರೆದಿತ್ತು. ಪಾಕ್‌ನ ಈ ವರ್ತನೆಗೆ ■6ನೇ ಪುಟಕ್ಕೆ

ಇಂದು ಸಂಜೆ 5 ಗಂಟೆಗೆ ಪಾಕಿಸ್ತಾನ ಮತ್ತು ಭಾರತದಿಂದ ಕದನ ವಿರಾಮಕ್ಕೆ ಒಪ್ಪಿಗೆ ನೀಡಲಾಗಿತ್ತು. ಆದರೆ ಕೆಲವು ಗಂಟೆಗಳಿಂದ ಪಾಕಿಸ್ತಾನ ಅತ್ಯಂತ ಘೋರವಾದ ಕದನ ವಿರಾಮ ಉಲ್ಲಂಘನೆ ಮಾಡುತ್ತಿದೆ. ಪಾಕಿಸ್ತಾನದ ಈ ನಡೆಗೆ ಭಾರತೀಯ ಸೇನೆ ಸಮರ್ಥವಾಗಿ ತಿರುಗೇಟು ಕೊಟ್ಟಿದೆ. ಪಾಕ್ ದಾಳಿ ನಡೆಸಿದರೆ ಪ್ರತ್ಯುತ್ತರ ನೀಡಲು ಭಾರತೀಯ ಸೇನೆಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಇಂದಿನ ಕದನ ವಿರಾಮ ಉಲ್ಲಂಘನೆಗೆ ಪಾಕಿಸ್ತಾನ ನೇರ ಜವಾಬ್ದಾರಿಯಾಗುತ್ತದೆ. ತಕ್ಷಣವೇ ಇಂತಹ ಉಲ್ಲಂಘನೆಯನ್ನು ನಿಲ್ಲಿಸುವುದು ಪಾಕ್‌ನ ಹೊಣೆಯಾಗುತ್ತದೆ.



– ವಿಕ್ರಂ ಮಿಸ್ರಿ,
ವಿದೇಶಾಂಗ ಇಲಾಖೆ ಕಾರ್ಯದರ್ಶಿ

ಕಣ್ಮರೆಯಾಗಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕೃಷಿ ವಿಜ್ಞಾನಿ ಡಾ.ಸುಬ್ಬಣ್ಣ ಅಯ್ಯಪ್ಪನ್ ಅವರ ಮೃತದೇಹ ಶ್ರೀರಂಗಪಟ್ಟಣ ಬಳಿ ಕಾವೇರಿ ನದಿಯಲ್ಲಿ ಪತ್ತೆ



ಡಾ.ಸುಬ್ಬಣ್ಣ ಅಯ್ಯಪ್ಪನ್

ಭಾನುವಾರ ಬೆಳಗ್ಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ

ಮೈಸೂರು,ಮೇ10 (ಆರ್‌ಕೆ)–ಕೇಂದ್ರದ ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ ನಿವೃತ್ತ ಕಾರ್ಯದರ್ಶಿಗಳೂ ಆದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಸುಬ್ಬಣ್ಣ ಅಯ್ಯಪ್ಪನ್ (69) ಅವರು ಮೃತಪಟ್ಟಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನ ಸಂಕಲ್ಪ ಅಪಾರ್ಟ್‌ಮೆಂಟ್‌ನಲ್ಲಿ ಪತ್ನಿ ಶ್ರೀಮತಿ ಉಮಾ ಅವರೊಂದಿಗೆ ವಾಸವಾಗಿದ್ದ ಕರ್ನಾಟಕದ ಹೆಸರಾಂತ ಕೃಷಿ ವಿಜ್ಞಾನಿ ಡಾ.ಅಯ್ಯಪ್ಪನ್ ಅವರು ಮೇ 7ರಂದು ಮನೆಯಿಂದ ಟಿವಿಎಸ್ ಜುಪಿಟರ್ ಸ್ಕೂಟರ್‌ನಲ್ಲಿ ಹೊರಗೆ ಹೋದವರು ಹಿಂದಿರುಗಿರಲಿಲ್ಲ. ಈ ಸಂಬಂಧ ಮೇ 9ರಂದು ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಇಂದು ಮಧ್ಯಾಹ್ನ 2 ಗಂಟೆ ವೇಳೆಗೆ ಅವರ ಮೃತದೇಹವು ಶ್ರೀರಂಗಪಟ್ಟಣ ಸಮೀಪ ಮೈಸೂರು–ಬೆಂಗಳೂರು ರಸ್ತೆಯ ಸತ್ಯಸಾಯಿ ಆಶ್ರಮದ ಬಳಿ ಕಾವೇರಿ ನದಿಯಲ್ಲಿ ಪತ್ತೆಯಾಗಿದೆ ಎಂದು ಶ್ರೀರಂಗಪಟ್ಟಣ ಟೌನ್ ಠಾಣೆ ಇನ್ಸ್‌ಪೆಕ್ಟರ್ ಪ್ರಕಾಶ್ ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮಹಜರು ನಡೆಸಿದಾಗ ಮೃತದೇಹ ಪತ್ತೆಯಾದ ಸ್ಥಳದಲ್ಲಿ ಡಾ.ಅಯ್ಯಪ್ಪನ್ ಅವರ ಜುಪಿಟರ್ ದ್ವಿಚಕ್ರ ವಾಹನ ಪತ್ತೆಯಾಗಿದ್ದು, ಮೈಸೂರಿನಿಂದ ಬಂದು ಸತ್ಯಸಾಯಿ ಆಶ್ರಮದ ಬಳಿ ಕಾವೇರಿ ನದಿ ದಡದಲ್ಲಿ ಧ್ಯಾನ ಮಾಡುತ್ತಿರುವಾಗ ಆಯತಪ್ಪಿ ನೀರಿಗೆ ಬಿದ್ದು ಮುಳುಗಿ ಸಾವನ್ನಪ್ಪಿರಬಹುದೆಂದು ಶಂಕಿಸಲಾಗಿದೆ.

ಮೃತದೇಹವನ್ನು ಮೈಸೂರಿನ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿರಿಸಲಾಗಿದ್ದು, ಮರಣೋತ್ತರ ಪರೀಕ್ಷೆ ಬಳಿಕ ನಾಳೆ (ಮೇ 11) ಬೆಳಗ್ಗೆ 10.30 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಡಾ.ಅಯ್ಯಪ್ಪನ್‌ರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಸಂಬಂಧಿ ಶ್ರೀನಿಧಿ ಪ್ರಭಾಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಅವರು, ಇತ್ತೀಚಿನ ವರ್ಷಗಳಲ್ಲಿ ಆಧ್ಯಾತ್ಮದತ್ತ ವಾಲಿದ್ದು, ನಿತ್ಯ ಧ್ಯಾನ, ಪ್ರಾರ್ಥನೆಯಲ್ಲಿ ನಿರತರಾಗಿರುತ್ತಿದ್ದರು. ಇಬ್ಬರು ಪುತ್ರಿಯರ ಪೈಕಿ ಚಿನ್ಮಯ ಬೆಂಗಳೂರಲ್ಲಿದ್ದು, ಕಿರಿಯ ಪುತ್ರಿ ತನ್ಮಯಿ ಅಮೇರಿಕದಲ್ಲಿ ನೆಲೆಸಿದ್ದಾರೆ ಎಂದು ತಿಳಿಸಿದ್ದಾರೆ. ಈ ಮೊದಲೇ ನಿಗದಿಯಂತೆ ತನ್ಮಯಿ ನಿನ್ನೆ (ಶುಕ್ರವಾರ)ಯಷ್ಟೇ ಮೈಸೂರಿಗೆ ಬಂದಿದ್ದರು. ಅಷ್ಟರಲ್ಲಿ ತಂದೆ ಮನೆಯಿಂದ ಕಣ್ಮರೆಯಾಗಿದ್ದರು ಎಂದು ಪ್ರಭಾಕರ್ ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರೀಸರ್ಚ್ (ICAR)ನಲ್ಲಿ ಮಹಾ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಡಾ.ಅಯ್ಯಪ್ಪನ್ ಅವರು ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರ್ ರೀಸರ್ಚ್ ಅಂಡ್ ಎಜುಕೇಷನ್ (DARE) ಕಾರ್ಯದರ್ಶಿಯಾಗಿ ನಿವೃತ್ತರಾಗಿದ್ದರು. ಅವರ ಅವಿರತ ಸೇವೆ ಹಾಗೂ ಕೃಷಿ ಸಂಶೋಧನೆ ಪರಿಗಣಿಸಿ ಕೇಂದ್ರ ಸರ್ಕಾರವು ಜಲ ಕೃಷಿ ಮತ್ತು ನೀಲಿ ಕ್ರಾಂತಿಗೆ ಡಾ.ಅಯ್ಯಪ್ಪನ್ ಅವರಿಗೆ 2022ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು.

ಭವಿಷ್ಯದ ಉಗ್ರರ ದಾಳಿಯನ್ನ ಯುದ್ಧವೆಂದೇ ಪರಿಗಣಿಸುತ್ತೇವೆ

ನವದೆಹಲಿ, ಮೇ 10– ಪಾಕಿಸ್ತಾನದೊಂದಿಗೆ ಸೇನಾ ಸಂಘರ್ಷದ ಹಿನ್ನೆಲೆಯಲ್ಲಿ ಭಾರತದ ಭದ್ರತಾ ಪರಿಸ್ಥಿತಿ ಅವಲೋಕಿಸಲು ಪ್ರಧಾನಿ ನರೇಂದ್ರ ಮೋದಿ ರಕ್ಷಣಾ ಸಿಬ್ಬಂದಿಯೊಂದಿಗೆ ಶನಿವಾರ ಬೆಳಗ್ಗೆ ಉನ್ನತ ಮಟ್ಟದ ಸಭೆ ನಡೆಸಿದ್ದು, ಈ ವೇಳೆ ಹಲವು ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಭದ್ರತಾ ಸನ್ನಿವೇಶವನ್ನು ಪರಿಶೀಲಿಸಲು ಮತ್ತು ಭವಿಷ್ಯದ ಕ್ರಮಕ್ಕಾಗಿ ಕಾರ್ಯತಂತ್ರಗಳನ್ನು ರೂಪಿಸಲು ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಮೂರೂ ಪಡೆಗಳ ಮುಖ್ಯಸ್ಥರ, ಸೇನಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್ ಅವರೊಂದಿಗೆ ಮೋದಿ ಚರ್ಚೆ ನಡೆಸಿದ್ದಾರೆ. ಭಾರತದ ನೆಲೆಗಳ ಮೇಲೆ ದಾಳಿ ನಡೆಸುತ್ತಿರುವ ಪಾಕಿಸ್ತಾನಕ್ಕೆ, ಭದ್ರತಾ ಪಡೆಗಳು ಪ್ರಮಾಣಾನುಗುಣವಾಗಿ ಮತ್ತು ಸಮರ್ಪಕವಾಗಿ ತಿರುಗೇಟು ನೀಡುತ್ತಿವೆ. ಉಭಯ ರಾಷ್ಟ್ರಗಳ ನಡುವೆ ದ್ವೇಷಮಯ ವಾತಾವರಣ ಇದೆ. ಭಾರತದ ಮುಂಚೂಣಿ ನೆಲೆಗಳತ್ತ ಪಾಕಿಸ್ತಾನ ತನ್ನ ಸೇನೆಯನ್ನು ಕಳುಹಿಸುತ್ತಿದೆ ಎಂದು ಭಾರತ ಹೇಳಿದೆ. ಉಭಯ ರಾಷ್ಟ್ರಗಳು ಸೇನಾ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿವೆ. ಭಾರತದಲ್ಲಿ ಭವಿಷ್ಯದಲ್ಲಿ ನಡೆಯುವ ಯಾವುದೇ ಭಯೋತ್ಪಾದಕ ಕೃತ್ಯವನ್ನು ದೇಶದ ವಿರುದ್ಧದ 'ಯುದ್ಧ ಕೃತ್ಯ' ಎಂದು ಪರಿಗಣಿಸಲಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲಾಗುತ್ತದೆ ಎಂದು ಸರ್ಕಾರದ ಉನ್ನತ ಮೂಲಗಳು ಶನಿವಾರ ಬೆಳಗ್ಗೆ ತಿಳಿಸಿವೆ.

ಪಾಕಿಸ್ತಾನ ಮತ್ತೆ ಬಾಲ ಬಿಚ್ಚಿದರೆ ಸುಮ್ಮನಿರಲ್ಲ

ಕದನ ವಿರಾಮ ಬೆನ್ನಲ್ಲೆ ಭಾರತ ಸೇನೆ ಖಡಕ್ ಎಚ್ಚರಿಕೆ



ಪತ್ರಿಕಾಗೋಷ್ಠಿಯಲ್ಲಿ ಸೋಫಿಯಾ ಖುರೇಷಿ, ರಘು ನಾಯರ್, ವ್ಯೋಮಿಕಾ ಸಿಂಗ್.

ನವದೆಹಲಿ: ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು ಒಪ್ಪಿಕೊಂಡಿರುವ ಕದನ ವಿರಾಮಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ, ನಾವು ಯಾವಾಗಲೂ ಯುದ್ಧಕ್ಕೆ ಸಿದ್ಧರಿರುತ್ತೇವೆ, ಬಾಲ ಬಿಚ್ಚಿದರೆ ಸುಮ್ಮನಿರಲ್ಲ ಎಂದು ಭಾರತೀಯ ಸಶಸ್ತ್ರ ಪಡೆಯು ಪಾಕಿಸ್ತಾನಕ್ಕೆ ಖಡಕ್ ಎಚ್ಚರಿಕೆ ನೀಡಿದೆ.

ಭಾರತೀಯ ಸೇನಾಪಡೆಗಳು ಮಸೀದಿಗಳನ್ನು ಹಾನಿಗೊಳಿಸಿವೆ ಎಂದು ಪಾಕಿಸ್ತಾನ ಆರೋಪಿಸಿದೆ. ಇದು ದಾರಿ ತಪ್ಪಿಸುವ ಮತ್ತು ಆಧಾರರಹಿತ. ಭಾರತವು ಜಾತ್ಯತೀತ ರಾಷ್ಟ್ರ ಮತ್ತು ನಮ್ಮ ಪಡೆಗಳು ನಮ್ಮ ಸಾಂವಿಧಾನಿಕ ಮೌಲ್ಯಗಳನ್ನು ಪ್ರತಿ ಬಿಂಬಿಸುತ್ತವೆ. ಧಾರ್ಮಿಕ ಸಂಸ್ಥೆಗಳ ಮೇಲೆ ಉದ್ದೇಶಪೂರ್ವಕ ದಾಳಿ ಮಾಡಿಲ್ಲ. **–ಸೋಫಿಯಾ ಖುರೇಷಿ**

ಉಭಯ ದೇಶಗಳ ನಡುವೆ ಕದನ ವಿರಾಮದ ಬಳಿಕ ನಡೆದ ವಿಶೇಷ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ನೌಕಾಪಡೆಯ ಹಿರಿಯ ಅಧಿಕಾರಿ (ಕಮೋಡೋರ್) ರಘು ಆರ್.ನಾಯರ್, ನಾವು ಕದನ ವಿರಾಮ ■6ನೇ ಪುಟಕ್ಕೆ



ಸುಮ್ಮನಿದ್ದ ಭಾರತವನ್ನ ಕೆದಕಿ ತದುಕಿಸಿಕೊಂಡ ಪಾಕ್!





ಆಪರೇಷನ್ ಸಿಂಧೂರ್


ನವದೆಹಲಿ: ಕಳೆದ ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಬೆಂಬಲಿತ ಉಗ್ರರು ನಡೆಸಿದ ಭಯೋತ್ಪಾದಕ ದಾಳಿಯಲ್ಲಿ 26 ಅಮಾಯಕ ನಾಗರಿಕರು ಕೊಲ್ಲಲ್ಪಟ್ಟರು. ಇದೇ ಕಾರಣಕ್ಕೆ ಉಗ್ರರನ್ನು ಸದೆ ಬಡಿಯುವುದಾಗಿ ಭಾರತ ಶಪಥ ಮಾಡಿತ್ತು. ಈ ಉಗ್ರರನ್ನು ಪೋಷಿಸುತ್ತಿರುವ ಪಾಕಿಸ್ತಾನಕ್ಕೂ ಬುದ್ಧಿ ಕಲಿಸಲು ಭಾರತ ಸಜ್ಜಾಗಿತ್ತು. ಇದೇ ಕಾರಣಕ್ಕೆ ಭಾರತವು 2025ರ ಮೇ 7ರಂದು 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯನ್ನು ಆರಂಭಿಸಿತು

ಮೇ 7ರಂದು ಆಪರೇಷನ್ ಸಿಂಧೂರ್ ನಡೆಸಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) 9 ಉಗ್ರರ ನೆಲೆಗಳ ಮೇಲೆ ನಿಖರವಾದ ವೈಮಾನಿಕ ಮತ್ತು ಕ್ಷಿಪಣಿ ದಾಳಿಗಳನ್ನು ಭಾರತ ನಡೆಸಿತು. ಭಾರತದ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯು ಜಂಟಿಯಾಗಿ ಈ ಕಾರ್ಯಾಚರಣೆ ಕೈಗೊಂಡಿತ್ತು. ಇದು 1971ರ ಯುದ್ಧದ ನಂತರ ಮೊದಲ ಬಾರಿಗೆ ಎಲ್ಲ ಮೂರು ಸೇನೆಗಳನ್ನು ಒಟ್ಟಿಗೆ ಬಳಸಿದ್ದು, ಉಗ್ರರ ನೆಲೆ ಉಡೀಸ್ ಮಾಡಲಾಯಿತು. ಇವುಗಳಲ್ಲಿ ಬಹವಾಲ್ಪುರ್‌ನ ಜೆಇಎಂ ಉಗ್ರ ಸಂಘಟನೆಯ ಪ್ರಧಾನ ಕಚೇರಿ ಮತ್ತು ಮುರಿಡ್ಕೆಯ ಎಲ್‌ಇಟಿ ಕೇಂದ್ರವೂ ಸೇರಿದ್ದವು.

100ಕ್ಕೂ ಹೆಚ್ಚು ಉಗ್ರರ ಹತ್ಯೆ: ಈ ಕಾರ್ಯಾಚರಣೆಯಲ್ಲಿ 100ಕ್ಕೂ ಹೆಚ್ಚು ಉಗ್ರರನ್ನು ಕೊಲ್ಲಲಾಯಿತು ಎಂದು ಸರ್ವಪಕ್ಷ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದರು. ಜೆಇಎಂ ಮುಖ್ಯಸ್ಥ ಮಸೂದ್ ಅಜರ್‌ನ ಕುಟುಂಬದ 10 ಮಂದಿ ಹತ್ಯೆಗೀಡಾದರು. ಭಾರತ ಮಸೀದಿಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ ಎಂದು ಪಾಕಿಸ್ತಾನ ಆರೋಪಿಸಿತು. ಆದರೆ ಭಾರತವು ಯಾವುದೇ ಪಾಕಿಸ್ತಾನದ ಸೇನಾ ನೆಲೆಗಳು, ಪ್ರಾರ್ಥನಾ ಮಂದಿರಗಳು ಹಾಗೂ ಯಾವುದೇ ನಾಗರಿಕರ ಮೇಲೆ ದಾಳಿ ನಡೆಸಲಿಲ್ಲ. ನಮ್ಮ ಗುರಿ ಕೇವಲ ಉಗ್ರರು ಮಾತ್ರ ಎಂದು ಭಾರತ ಹೇಳಿತ್ತು.

ಪಾಕಿಸ್ತಾನದಿಂದ ನಿರಂತರ ದಾಳಿ: ಪಾಕಿಸ್ತಾನವು ಜಮ್ಮು–ಕಾಶ್ಮೀರದ ಕುಪ್ವಾರಾ, ಬಾರಾಮುಲ್ಲಾ, ಉರಿ, ಮತ್ತು ಅಖ್ನೂರ್ ಪ್ರದೇಶಗಳಲ್ಲಿ ನಿಯಂತ್ರಣ ರೇಖೆ ಉದ್ದಕ್ಕೂ ಫಿರಂಗಿ ಗುಂಡಿನ ದಾಳಿಯನ್ನು ಆರಂಭಿಸಿತು, ಇದರಿಂದ 3 ನಾಗರಿಕರು ಸಾವನ್ನಪ್ಪಿದರು. ಭಾರತವು ಈ ದಾಳಿಗಳಿಗೆ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸಿತು. ಮೇ 8ರಂದು, ಪಾಕಿಸ್ತಾನವು ಜಮ್ಮು, ಪಠಾಣ್‌ಕೋಟ್, ಉದಂಪುರ್, ರಾಜಸ್ಥಾನದ ಕೆಲವು ಸ್ಥಳಗಳಲ್ಲಿ ಭಾರತೀಯ ಸೇನಾ ನೆಲೆಗಳ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಲು ಪ್ರಯತ್ನಿಸಿತು. ■6ನೇ ಪುಟಕ್ಕೆ







ಮೈಸೂರು ಮಿತ್ರ

ಭಾನುವಾರ 11 ಮೇ 2025

ನಾಳೆ ಮೈಸೂರಲ್ಲಿ ಬುದ್ಧ ಜಯಂತಿ ಆಚರಣೆ



ಮೈಸೂರು, ಮೇ10(ಜಿಎ)–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಭಗವಾನ್ ಬುದ್ಧ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಮೇ 12ರಂದು ನಗರದ ಕಲಾಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ಬುದ್ಧ ಜಯಂತಿ, ಸಂಜೆ 6ಕ್ಕೆ ಅಶೋಕ ವೃತ್ತದ ವಿಶ್ವ ಮೈತ್ರಿ ಬುದ್ಧ ವಿಹಾರದಲ್ಲಿ ಬುದ್ಧರ ಜನ್ಮ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಸಂಜೆ ಬುದ್ಧ ವಿಹಾರದಲ್ಲಿ ಬುದ್ಧ ಜನ್ಮದಿನ ಆಚರಣೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8.30ಕ್ಕೆ ಪುರಭವನದ ಆವರಣದಿಂದ ಮೆರವಣಿಗೆ ಹೊರಡಲಿದ್ದು, 10.30ಕ್ಕೆ ಕಲಾಮಂದಿರದಲ್ಲಿ ಪದ್ಮಪಾಣಿ ಲಲಿತ ಕಲಾ ಅಕಾಡೆಮಿಯಿಂದ ಬುದ್ಧ ಗೀತೆ ಗಾಯನ ನಡೆಯಲಿದೆ ಎಂದು ಹೇಳಿದರು.

11.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಡಾ.ಕಲ್ಯಾಣ ಸಿರಿ ಭಂತೇಜಿ ಸಾನ್ನಿಧ್ಯ ವಹಿಸುವರು. ಡಾ.ರಹಮತ್ ತರೀಕೆರೆ ಮುಖ್ಯ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಸಂಜೆ 6ಕ್ಕೆ ವಿಶ್ವ ಮೈತ್ರಿ ಬುದ್ಧ ವಿಹಾರದಲ್ಲಿ ಬುದ್ಧರ ಜನ್ಮ ದಿನಾಚರಣೆ ನಡೆಯಲಿದೆ. ಡಾ. ಕಲ್ಯಾಣಸಿರಿ ಭಂತೇಜಿ ಸಾನ್ನಿಧ್ಯ ವಹಿಸುವರು. ಡಾ.ಹೆಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಶಾಸಕರಾದ ಟಿ.ಎಸ್. ಶ್ರೀವತ್ಸ, ದರ್ಶನ್ ಧ್ರುವನಾರಾಯಣ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಜಾತಿ ಗಣತಿ ಸಮೀಕ್ಷೆ ವೇಳೆ ಗೊಂದಲ ವುಂಟಾಗುತ್ತಿದೆ. ಅಧಿಕಾರಿಗಳಿಗೆ ಸರಿಯಾಗಿ ತರಬೇತಿ ನೀಡುತ್ತಿಲ್ಲ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಮಹೇಶ್, ಮಂಜುನಾಥ್, ಪುಟ್ಟರಾಜು, ರಮೇಶ್ ಉಪಸ್ಥಿತರಿದ್ದರು.

ಜಿಲ್ಲಾಡಳಿತದಿಂದ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಭಾರತೀಯ ಮಹಿಳೆಯರಿಗೆ ಆದರ್ಶವಾಗಿರುವ ಮಲ್ಲಮ್ಮ: ಎಡಿಸಿ ಡಾ.ಶಿವರಾಜು



ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶನಿವಾರ ಕರ್ನಾಟಕ ಕಲಾಮಂದಿರ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಲಾಯಿತು.

ಮೈಸೂರು, ಮೇ10(ಜಿಎ)–ಹೇಮರೆಡ್ಡಿ ಮಲ್ಲಮ ಅವರ ವ್ಯಕ್ತಿತ್ವ ಎಂದಿಗೂ ಸಹ ಭಾರತೀಯ ಮಹಿಳೆಯರಿಗೆ ಆದರ್ಶವಾಗಿ ನಿಲ್ಲುತ್ತದೆ. ಹೇಮರೆಡ್ಡಿ ಅವರ ಆದರ್ಶಗಳು ನಮಗೆ ದಾರಿದೀಪವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶನಿವಾರ ಕಲಾಮಂದಿರ ಆವರಣದಲ್ಲಿರುವ ಕಿರುರಂಗ ಮಂದಿರಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿವ ಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಉದ್ಘಾಟಿಸಿ, ಮಾತನಾಡಿದರು.

ಮಲ್ಲಮ್ಮ ತಮ್ಮ ನಡತೆಯ ಮೂಲಕ ತಮ್ಮ ಕುಟುಂಬದ ಸಂಪೂರ್ಣ ಚಿತ್ರಣವನ್ನೇ ಬದಲಾಯಿಸಿದವರು. ಕನ್ನಡದಲ್ಲಿ ಸರ್ವಜ್ಞ ಹೇಗೋ ಹಾಗೆಯೇ ತೆಲುಗಿನಲ್ಲಿ ವೇಮನನ್ನು ಗುರುತಿಸಲಾಗುತ್ತದೆ. ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನೇ ಸೃಷ್ಟಿ ಮಾಡಿದವರು ಮಲ್ಲಮ್ಮನವರು ಎಂದರು.

ಕುಟುಂಬದಲ್ಲಿ ಮಾತ್ರ ಅಲ್ಲದೇ ಸಮಾಜದಲ್ಲಿ ಎಲ್ಲರಿಗೂ ಮಾರ್ಗದರ್ಶಕರಾಗಿ ಚೈತನ್ಯವನ್ನು ಬಿತ್ತುತ್ತಾ ಇದ್ದರು. ಇಂತಹವರು ಭಾರತ ದೇಶದಲ್ಲಿ ಹುಟ್ಟಿರುವುದು ನಮ್ಮೆಲ್ಲರಿಗೂ ಪುಣ್ಯದಾಯಕವಾದಂತಹ ವಿಷಯವಾಗಿದೆ ಎಂದು ಹೇಳಿದರು.

ಸಮುದಾಯಿಕವಾಗಿ, ಸಾಮಾಜಿಕವಾಗಿ ಎಲ್ಲಾ ರೀತಿಯಲ್ಲೂ ಆದರ್ಶ ಪ್ರಿಯರಾಗಿದ್ದವರು ಮಲ್ಲಮ್ಮ. ಒಂದು ಸಮುದಾಯಕ್ಕೆ ಮಾತ್ರವಲ್ಲದೆ ಇಡೀ ಮಾನವ ಸಮುದಾಯಕ್ಕೆ ಆದರ್ಶ ಪ್ರಿಯವಾದಂತಹ ಜೀವನವನ್ನು ಕಟ್ಟಿಸಿಕೊಟ್ಟಿದ್ದಾರೆ. ಇಂತಹವರ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಹುಣಸೂರು ತಾಲೂಕಿನ ಗಾವಡಗೆರೆಯ ಓಂ ಶ್ರೀ ಗುರುಲಿಂಗ ಜಂಗಮ ದೇವರ ಮಠ ಶ್ರೀ ನಟರಾಜ ಮಹಾಸ್ವಾಮಿಗಳು ಮಾತನಾಡಿ, ತನ್ನ ಜೀವನದಲ್ಲಿ ಹೇಳಲು ಆಗದಷ್ಟು ಕಷ್ಟಗಳನ್ನು ಅನುಭವಿಸಿದರು ಸಹ ಅವುಗಳನ್ನು ಸಂತೋಷವಾಗಿ ಸ್ವೀಕರಿಸಿ ಸಮಾಜಕ್ಕೆ ಮಾದರಿಯ ಜೀವನ ನಡೆಸಿದರು ಎಂದು ಹೇಳಿದರು.

ಹೃದಯ ಸಂಬಂಧವನ್ನು ಹೊಂದಿದ್ದ ಹೇಮರೆಡ್ಡಿ ಮಲ್ಲಮ್ಮ ತನ್ನ ನೋವುಗಳನ್ನೆಲ್ಲಾ ತನ್ನ ಹೃದಯಲ್ಲಿ ಇಟ್ಟುಕೊಂಡು ನಿಜವಾದ ವಿಚಾರಗಳನ್ನು ಜಗತ್ತಿಗೆ ಕೊಟ್ಟ ಮಹಾತಾಯಿ ಎಂದು ಹೇಳುವುದಕ್ಕೆ ತುಂಬಾ ಸಂತೋಷವಾಗುತ್ತದೆ ಎಂದು ಹೇಳಿದರು.

ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ದೇವರಾಜು ಪಿ.ಚಿಕ್ಕಹಳ್ಳಿ (ದೇಚಿ) ಮಾತನಾಡಿ, ಬಸವಣ್ಣನವರ ತತ್ವಗಳನ್ನು ಮೈಗೂಡಿಸಿಕೊಂಡು ಆ ಪರಂಪರೆಯಲ್ಲಿ ನಡೆದುಕೊಂಡು ಬಂದವರು ಹೇಮರೆಡ್ಡಿ ಮಲ್ಲಮ್ಮನವರು ಎಂದು ಹೇಳಿದರು.

ಇವರು ಚೆನ್ನಮಲ್ಲಿಕಾರ್ಜುನ ಪ್ರಸಾದದಿಂದ ಹುಟ್ಟಿದ್ದರಿಂದ ಇವರಿಗೆ ಮಲ್ಲಮ್ಮ ಎಂದು ಹೆಸರಿಡಲಾಯಿತು. ಇವರ ಬದುಕಿನುದ್ದಕ್ಕೂ ಸಾಧನೆ ಮಾಡಿಕೊಂಡು ಬಂದವರು ಎಂದು ತಿಳಿಸಿದರು.

ತಮ್ಮ ತತ್ವ ಆದರ್ಶಗಳನ್ನು ನಾಡಿನ ಉದ್ದಗಲಕ್ಕೂ ಬಿತ್ತುತ್ತಾ ಬಂದಿದ್ದರು. ಇವರು ಮೊದಲು ತಮ್ಮ ಸಂಸಾರವನ್ನು ತಿದ್ದಿ ಇಡೀ ಸಮಾಜವನ್ನು ತಿದ್ದುವ ಕಾರ್ಯವನ್ನು ಮಾಡಿದರು. ಪವಾಡ ಮಲ್ಲಮ್ಮ, ಬೆಂಕಿ ಮಲಮ್ಮ ಎಂಬ ಇನ್ನೂ ಅನೇಕ ಹೆಸರಿನಲ್ಲಿ ಕರೆಯಲಾಗುತ್ತದೆ ಎಂದರು.

ಇಡೀ ಸಮಾಜವನ್ನೆಲ್ಲಾ ಮಕ್ಕಳೆಂದು ಭಾವಿಸಿದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ. ಇಂತಹ ಮಹಾನ್ ವ್ಯಕ್ತಿಯ ಜಯಂತಿಯನ್ನು ಆಚರಣೆ ಮಾಡುತ್ತಾ ಇರುವುದು ನಿಜವಾಗಿಯೂ ಬಹಳ ಸಂತೋಷದ ವಿಷಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಬಳಗದ ಉಪಾಧ್ಯಕ್ಷರಾದ ಶಿವಲಿಂಗಸ್ವಾಮಿ, ಮಹಾಂತೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಾಹಿತಿ ಪ್ರೊ.ನಂಜರಾಜ ಅರಸ್‌ರ ಕೃತಿಯಲ್ಲಿ ಮಾರನಾಯಕರಿಗೆ ಅಪಮಾನ

ಡಿಸಿ, ಪೊಲೀಸರಿಗೆ ದೂರು ನೀಡುವುದರೊಂದಿಗೆ ಕಾನೂನು ಹೋರಾಟಕ್ಕೆ ಸಿದ್ಧತೆ

ಮೈಸೂರು, ಮೇ10(ಜಿಎ)–ಹಿರಿಯ ಸಾಹಿತಿ ಹಾಗೂ ಚಿಂತಕರಾದ ಪ್ರೊ. ನಂಜರಾಜ ಅರಸ್ ತಮ್ಮ 'ಹೇಳವ್ವಾ ಚಾಮುಂಡ ಯಾರು ನೀನು?' ಎಂಬ ಕೃತಿಯಲ್ಲಿ ಮೈಸೂರು ನಗರದ ಸಂಸ್ಥಾಪಕ ಹಾಗೂ ಮೈಸೂರಿನ ಮೂಲ ನಿವಾಸಿ ದೊರೆ, ಬುಡಕಟ್ಟು ನಾಯಕ ಕಾರ್ಗಳ್ಳಿ ಮಾರನಾಯಕರನ್ನು ಕಾಡುಗಳ್ಳ ಎಂದು ಅಪಮಾನಿಸಲಾಗಿದೆ ಎಂದು ರಾಜ್ಯ ವಾಲ್ಮೀಕಿ ಕ್ಷತ್ರಿಯ ನಾಯಕ ಮಹಾಸಭಾ ಪದಾಧಿಕಾರಿ ಪಾಳೇಗಾರ್ ದೀಪಕ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಮೂಲ ನಿವಾಸಿ ದೊರೆ, ಪಾಳೇಗಾರ ಮಾರನಾಯಕ ಇತಿಹಾಸ ಸಂರಕ್ಷಣಾ ಸಮಿತಿ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಪದ ವಿದ್ವಾಂಸ ಡಾ.ಪಿ.ಕೆ. ರಾಜಶೇಖರ್ ಅವರು ಈ ರೀತಿ ಹೇಳಿರುವುದಾಗಿ ಪ್ರೊ.ನಂಜರಾಜ ಅರಸ್ ಉಲ್ಲೇಖಿಸಿದ್ದಾರೆ. ಹೀಗಾಗಿ ಈ ಪುಸ್ತಕವನ್ನು ನಿಷೇಧಿಸಿ, ಈ ಇಬ್ಬರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ, ಈ ಇಬ್ಬರ ವಿರುದ್ಧ ಕ್ರಮಕ್ಕಾಗಿ ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿದ್ದು, ಕಾನೂನು ಹೋರಾಟ ಸಹ ನಡೆಸಲಾಗುವುದೆಂದು ಎಚ್ಚರಿಸಿದರು.

ಇತ್ತೀಚೆಗೆ ಉತ್ತನಹಳ್ಳಿ ದೇವಾಲಯದ ಜೀರ್ಣೋದ್ಧಾರ ನೆಪದಲ್ಲಿ ದೇವಾಲಯದ ಸುಖನಾಸಿಯಲ್ಲಿದ್ದ ಇನ್ನಿತರ ಪರಿವಾರ ದೇವತೆಗಳೊಂದಿಗೆ ರಾರಾಜಿಸಿದ್ದ ಮಾರನಾಯಕರ ಸ್ಮಾರಕ ಶಿಲ್ಪವನ್ನು ಶಾಸ್ತ್ರದ ನೆಪವೊಡ್ಡಿ ದೇವಾಲಯದಿಂದ ತೆಗೆಸಿ ಅಪಮಾನಿಸಲಾಗಿದೆ. ಈ ಬಗ್ಗೆ ಮನವಿ ಮಾಡಿದರೂ ದೇವಾಲಯ ಕ್ರಮ ಕೈಗೊಂಡಿಲ್ಲ ಎಂದು ಬೇಸರಿಸಿದರು.

ಸುದ್ದಿಗೋಷ್ಠಿಯಲ್ಲಿ ಆರ್.ನಾರಾಯಣ ಬದನಗುಪ್ಪೆ, ಸಾಹುಕಾರ್ ಹುಂಡಿ ಸಿ.ಮಹದೇವು, ರವಿಕುಮಾರ್ ಎಸ್. ಹಂಚ್ಯಾ, ಆರ್.ಅಮೃತನಾಯಕ್, ಸತೀಶ್ ಬಾಬು ಉಪಸ್ಥಿತರಿದ್ದರು.

ನಟ ಯದು ಹುಟ್ಟುಹಬ್ಬ ಆಚರಣೆ...



ಮೈಸೂರು ಕನ್ನೇಗೌಡನಕೊಪ್ಪಲಿನಲ್ಲಿ ಕುಂಟೆಬಿಲ್ಲೆ ಸಿನಿಮಾದ ನಟ ಯದು ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ಶ್ರೀನಿವಾಸ್, ರೇವಣ್ಣ, ಬೋರೇಗೌಡ, ಮೋಹನ್, ಪ್ರತಾಪ್, ದರ್ಶನ್, ರವಿ, ಯಶವಂತ್ ತೇಜಸ್ ಇನ್ನಿತರರಿದ್ದರು.

ವಾಗ್ದೇವಿ ಪಿಯು ಕಾಲೇಜಿನಲ್ಲಿ ವಿಜ್ಞಾನ, ವಾಣಿಜ್ಯ ವಿಭಾಗದಲ್ಲಿ ಶಿಕ್ಷಣ

ಮೈಸೂರು, ಮೇ10(ಜಿಎ)–ಹುಣಸೂರು ರಸ್ತೆಯ ಮನುಗನಹಳ್ಳಿ ಚೆಕ್‌ಪೋಸ್ಟ್ ಬಳಿಯ ವಾಗ್ದೇವಿ ವಿದ್ಯಾಕುಲ ಪದವಿ ಪೂರ್ವ ಕಾಲೇಜಿನಲ್ಲಿ ನೂತನ ಸಾಲಿಗೆ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಉಚಿತ ಶಿಕ್ಷಣ ನೀಡಲು ಸಂಸ್ಥೆ ಮುಂದಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಪಾರ ಎಜುಕೇಷನ್ ಮತ್ತು ಚಾರಿಟೆಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಯು.ಆರ್.ರುಕ್ಮಿಣಿ ಈ ವಿಷಯ ತಿಳಿಸಿ, ಟ್ರಸ್ಟ್ 2022ರಲ್ಲಿ ನಗರದಲ್ಲಿ ಪ್ರಾರಂಭವಾಗಿದ್ದು, ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿದೆ. ಬಡ ವಿದ್ಯಾರ್ಥಿಗಳು, ಪರಿಶಿಷ್ಟ ಜಾತಿ, ಪಂಗಡಗಳಲ್ಲಿದ್ದು, ತಂದೆ ತಾಯಿ ಪೋಷಕರ ಪ್ರೀತಿಯಿಂದ ವಂಚಿತರಾದವರಿಗೆ ವಿದ್ಯಾಭ್ಯಾಸ ಹಾಗೂ ವಿದ್ಯಾರ್ಥಿ ವೇತನ ನೀಡುತ್ತಾ ಬಂದಿದೆ. ಇದೇ ರೀತಿ ಈಗಲೂ ಕಾಲೇಜಿನ ಹಲವಾರು ವಿದ್ಯಾರ್ಥಿಗಳಿಗೆ ಈ ಪ್ರಯೋಜನ ನೀಡಲಿದ್ದು, ಹೆಚ್ಚಿನ ಮಾಹಿತಿಗೆ ದೂ.98450 08337 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಾಚಾರ್ಯ ಪ್ರಕಾಶ್, ಅನುಷಾ ಉಪಸ್ಥಿತರಿದ್ದರು.

ಇಂದು ತಾಯಂದಿರಿಗೆ ಆರೋಗ್ಯ ಉಚಿತ ತಪಾಸಣಾ ಶಿಬಿರ

ಮೈಸೂರು, ಮೇ 10– ಶ್ರೀ ದುರ್ಗಾ ಫೌಂಡೇಶನ್ ಹಾಗೂ ಸುಯೋಗ್ ಆಸ್ಪತ್ರೆಯ ಸಹಯೋಗದೊಂದಿಗೆ ವಿಶ್ವ ತಾಯಂದಿರ ದಿನಾಚರಣೆ ಅಂಗವಾಗಿ ತಾಯಂದಿರಿಗೆ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಮೈಸೂರಿನ ಕುಕ್ಕರಹಳ್ಳಿ ಕೆರೆ (ರೈಲ್ವೆ ಗೇಟ್) ಮುಂಭಾಗ ಮೇ 11ರಂದು ಬೆಳಗ್ಗೆ 6.30 ರಿಂದ 9.30ವರೆಗೂ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಡಾ.ಎಸ್.ಪಿ. ಯೋಗಣ್ಣ, ಸ್ತ್ರೀರೋಗ ತಜ್ಞರಾದ ಡಾ.ಗೀತಾ ಹಾಗೂ ಡಾ.ಅನುಷ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸಮಾಜ ಸೇವಕಿ ಖುಷಿ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಶಿಬಿರದಲ್ಲಿ ಬಿ.ಪಿ., ಶುಗರ್, ನುರಿತ ವೈದ್ಯರಿಂದ ಸ್ತ್ರೀ ಸಂಬಂಧಿತ ಸಮಾಲೋಚನೆ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 8971389538 ಸಂಪರ್ಕಿಸಬಹುದು.

ಶನಿಮಹಾಶಾಂತಿ


ಮೈಸೂರು, ಮೇ 10–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಮೇ 12ರಂದು ಹುಣ್ಣಿಮೆ ಪ್ರಯುಕ್ತ ಮೇಷ, ಸಿಂಹ, ವೃಶ್ಚಿಕ, ಕುಂಭ, ಮೀನ ರಾಶಿಯವರಿಗೆ ಶನಿಮಹಾಶಾಂತಿ ಮತ್ತು ಬಾಧಾನಿವಾರಕ ಸುದರ್ಶನ ಹೋಮ ಕುಜದೋಷ ನಿವೃತ್ತಿ ಶಾಂತಿ ಮತ್ತು ರಾಹು ಕೇತು ಶಾಂತಿ, ಗುರುಮಜಾಶಾಂತಿ, ಮಹಾ ಮೃತ್ಯುಂಜಯ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿದೆ. ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ.



ಮೈಸೂರು ರತ್ನ ಪ್ರಶಸ್ತಿ

ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕರ್ನಾಟಕ ಸಾಹಿತ್ಯ–ಸಾಂಸ್ಕೃತಿಕ ಪ್ರತಿಷ್ಠಾನದಿಂದ ಕನ್ನಡಪರ ಹೋರಾಟಗಾರ ಬಿ.ಧನಪಾಲ್ ಅವರನ್ನು ಸನ್ಮಾನಿಸಿ, ಮೈಸೂರು ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ಸಾಹಿತಿ ಸಿಪಿಕೆ, ರಘುರಾಂ ವಾಜಪೇಯಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಈ ವೇಳೆ ಇದ್ದರು.

ಮದನ ಮಾದೇಶ್‌ಗೆ ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಜೆಡಿಎಸ್ ಮುಖಂಡ ಮದನ್ ಮಾದೇಶ್ ಅವರಿಗೆ ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದಿಂದ ಶುಭಾಶಯ ಕೋರಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಪಡುವಾರಹಳ್ಳಿ ಕೃಷ್ಣ, ರಾಮಚಂದ್ರು, ಬೀಡನಹಳ್ಳಿ ಕುಮಾರ, ಜೆಸಿಬಿ ರಾಘು, ವರದರಾಜು, ಬಂಡಿಪಾಳ್ಯ ಸಿದ್ದರಾಜು ಇನ್ನಿತರರಿದ್ದರು.

'ದಿನದ ಪ್ರಾರ್ಥನೆ' ಕವನ ಸಂಕಲನಕ್ಕೆ ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ



ವಿಜಯಾ ದಬ್ಬೆ

ಮೈಸೂರು, ಮೇ 10–ಹಿರಿಯ ಸಾಹಿತಿ ಸವಿತಾ ನಾಗಭೂಷಣ ಅವರ 'ದಿನದ ಪ್ರಾರ್ಥನೆ' ಕವನ ಸಂಕಲನವು 2025ನೇ ಸಾಲಿನ ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ. ಸವಿತಾ ಅವರ ಶಿವಮೊಗ್ಗದ 'ನುಡಿ' ಪ್ರಕಾಶನವು 2024ರಲ್ಲಿ ಈ ಸಂಕಲನವನ್ನು ಪ್ರಕಟಿಸಿದೆ. ಮೈಸೂರಿನ ಸಮತಾ ಅಧ್ಯಯನ ಕೇಂದ್ರವು 2022ರಲ್ಲಿ ಸ್ಥಾಪಿಸಿರುವ ಈ ಪ್ರಶಸ್ತಿಗೆ 2020–24ರ ಅವಧಿಯಲ್ಲಿ ಲೇಖಕಿಯರು ಪ್ರಕಟಿಸಿದ ಕವನ ಸಂಕಲನಗಳನ್ನು ಆಹ್ವಾನಿಸಿತ್ತು. ಲೇಖಕಿಯರು, ಪ್ರಕಾಶಕರಿಂದ ಒಟ್ಟು 110 ಸಂಕಲನಗಳು ಬಂದಿದ್ದವು. ತೀರ್ಪುಗಾರರಾಗಿ ಹಿರಿಯ ಕವಿಗಳಾದ ಪ್ರೊ. ಚ.ಸರ್ವಮಂಗಳ, ಜಿ.ಪಿ.ಬಸವರಾಜು, ಡಾ. ಎಂ.ಎಸ್.ವೇದಾ ಅವರಿದ್ದ ಸಮಿತಿಯು, ಸವಿತಾ ನಾಗಭೂಷಣ ಅವರ 'ದಿನದ ಪ್ರಾರ್ಥನೆ' ಸಂಕಲನವನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ. ಜೂ.1ರಂದು ಮೈಸೂರಿನಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಡಿ.ಇ. ರಾಮಲಿಂಗೇಗೌಡ

ಮೈಸೂರು, ಮೇ 10–ನಿವೃತ್ತ ಶಾಲಾ ತನಿಖಾಧಿಕಾರಿ ಹಾಗೂ ಮೈಸೂರು–ಚಾಮರಾಜನಗರ ಶಿಕ್ಷಕರ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಡಿ.ಇ. ರಾಮಲಿಂಗೇಗೌಡ(86) ಅವರು ಟೀಚರ್ಸ್ ಲೇಔಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಸೋಮಣ್ಣ ಸೇರಿದಂತೆ ಇಬ್ಬರು ಪುತ್ರರು, ಮೊಮ್ಮಕ್ಕಳು, ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಸಂಸ್ಕಾರ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಮಾಜಿ ಶಾಸಕ ಎಲ್.ನಾಗೇಂದ್ರ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಎನ್.ಯೋಗಾನಂದ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಒಕ್ಕಲಿಗರ ಸಂಘದ ಖಜಾಂಚಿ ಆರ್.ಲೋಕೇಶ್, ಗುರುರಾಜ್, ನಗರ ಕಾಂಗ್ರೆಸ್ ಉಪಾಧ್ಯಕ್ಷ ಟಿ.ಸುಂದರ್‌ಕುಮಾರ್ ಮೃತರ ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದರು.

ಶ್ರೀನಿವಾಸಮೂರ್ತಿ



ಮೈಸೂರು ರಾಜರಾಜೇಶ್ವರಿನಗರ ನಿವಾಸಿ ಶ್ರೀನಿವಾಸಮೂರ್ತಿ (81) ಅವರು ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.05.2025 ಭಾನುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಬಂಟರ ಸಂಘ :** ಬಂಟರ ಸಂಘದ ಸ್ವರ್ಣ ಮಹೋತ್ಸವ, ಶ್ರೀಮತಿ ವಿನಯ ಮತ್ತು ಕೆ. ಸುಬ್ರಮಣ್ಯ ರೈ ಬಯಲು ರಂಗ ಮಂದಿರ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಬಂಟರ ಸಂಘದ ಅಧ್ಯಕ್ಷ ಬಿ. ಪ್ರಭಾಕರ ಶೆಟ್ಟಿ, ಬಂಟ ಸ್ವರ್ಣ ಸಿರಿ 2025 ಸ್ಮರಣ ಸಂಚಿಕೆ ಬಿಡುಗಡೆ : ಎಂ.ಆರ್.ಜಿ. ಗ್ರೂಪ್ ಅಧ್ಯಕ್ಷ ಡಾ. ಕೆ. ಪ್ರಕಾಶ್ ಶೆಟ್ಟಿ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ. ದೇವೇಗೌಡ, ಮಾಜಿ ಸಚಿವ ಬಿ. ರಮಾನಾಥ ರೈ, ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ, ಕೆ. ಅಶೋಕ್ ರೈ, ಸ್ಥಳ:ಆಶಾ ಪ್ರಕಾಶ್ ಶೆಟ್ಟಿ ಬಂಟರ ಭವನ, ವಿಜಯನಗರ 3ನೇ ಹಂತ, ಬೆಳಗ್ಗೆ 10ಕ್ಕೆ.

■ **ಸಮನ್ವಯ ಪೆಟ್ ಕ್ಲಿನಿಕ್, ಕರುಣಾ ಪ್ರಾಣಿ ಸಂಘ :** ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ಹುಚ್ಚು ನಾಯಿ ರೋಗ ನಿರೋಧಕ ಲಸಿಕೆ ಮತ್ತು ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಸಮನ್ವಯ ಪೆಟ್ ಕ್ಲಿನಿಕ್, ಗಾಯಿತ್ರಿ ಭವನದ ಹತ್ತಿರ, ಬೆಳಗ್ಗೆ 10 ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ :** ಅಮ್ಮನ ದಿನಾಚರಣೆ ಪ್ರಯುಕ್ತ ವಿಶೇಷ ಕಾರ್ಯಕ್ರಮ, ಅಮ್ಮನ ಮಡಿಲ ಕವಿತೆಗಳು ಮಾತಾಡುತಾವ ರಾಜ್ಯ ಮಟ್ಟದ ಕವಿಗೋಷ್ಠಿ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಡಾ. ಪಿ.ಕೆ.ರಾಜಶೇಖರ್, ಅಧ್ಯಕ್ಷತೆ : ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಕೆ.ಆರ್. ಪ್ರೇಮಲೀಲಾ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಪ್ರಾಧ್ಯಾಪಕರಾದ ಡಾ. ಹೆಚ್.ಎಂ. ಹೇಮಲತಾ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕದ ಅಧ್ಯಕ್ಷೆ ಡಾ. ರತ್ನ ಹಾಲಪ್ಪಗೌಡ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಮೈಸೂರು ವೀರಶೈವ ಸಜ್ಜನ ಸಂಘ :** ಜಗಜ್ಯೋತಿ ಬಸವೇಶ್ವರರ ಜಯಂತ್ಯೋತ್ಸವ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪನಿರ್ದೇಶಕ ಮ.ಗು. ಸದಾನಂದಯ್ಯ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಟಿ. ಮಲ್ಲಿಕಾರ್ಜುನ್, ಎಸ್.ಶಿವಶಂಕರ್, ಎ.ಬಿ. ಶಿವಕುಮಾರ್, ಪಿ.ಎಂ. ಪರಮೇಶ್ವರಯ್ಯ, ಶ್ರೀಮತಿ ಜಯಮ್ಮ ಜಗದೀಶ್ ಮತ್ತು ಶ್ರೀಮತಿ ಶಾರದಾಂಬಿಕೆ ನಂಜಣ್ಣ ಅವರಿಗೆ ಸನ್ಮಾನ, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ, ಮಧ್ಯಾಹ್ನ 3 ರಿಂದ.

■ **ಬಸವ ಸಮಿತಿ :** ಬಸವ ಸಮಿತಿ ಉದ್ಘಾಟನೆ ಹಾಗೂ ಬಸವ ಜಯಂತಿ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಗುರುಶಾಂತ ಸ್ವಾಮೀಜಿ, ಶ್ರೀ ಶಿವಪ್ರಭು ಸ್ವಾಮೀಜಿ, ಡಾ. ಶರತ್‌ಚಂದ್ರ ಸ್ವಾಮೀಜಿ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ತನ್ವೀರ್ ಸೇಠ್, ಗಣೇಶ್ ಪ್ರಸಾದ್, ಉಪಸ್ಥಿತರು : ಅಖಿಲ ಭಾರತ ವೀರಶೈ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಂಕರ ಮಹಾದೇವ ಬಿದರಿ, ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಅಖಿಲ ಭಾರತ ವೀರಶೈವ ಲಿಂಗಯತ ಮಹಾಸಭಾ ಅಧ್ಯಕ್ಷ ಹೆಚ್.ವಿ. ಬಸವರಾಜು (ಹಿನಕಲ್), ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ಆರ್. ವೃಷಭೇಂದ್ರ, ಸ್ಥಳ: ಡಾ. ಎಸ್. ರಾಧಾಕೃಷ್ಣನ್ ಸಭಾ ಭವನ, ಶಿಕ್ಷಕರ ಬಡಾವಣೆ, ಮಧ್ಯಾಹ್ನ 3.30ಕ್ಕೆ

■ **ಮೈಸೂರು ರತ್ನ ಸಾಂಸ್ಕೃತಿಕ ಪ್ರತಿಷ್ಠಾನ :** ಡಾ. ಬಿ.ಆರ್. ಅಂಬೇಡ್ಕರ್‌ರವರ 134ನೇ ಜಯಂತಿ ಅಂಗವಾಗಿ 'ಸಮಸಮಾಜ ಮತ್ತು ಅಂಬೇಡ್ಕರ್ ತತ್ವ ಸಿದ್ಧಾಂತ' ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಅಭಿನಂದನೆ : ಹಿರಿಯ ದಲಿತ ಮುಖಂಡ ಹರಿಹರ ಆನಂದಸ್ವಾಮಿ, ವಿಚಾರ ಮಂಡನೆ : ಕವಿ ಸೋಸಲೆ ಗಂಗಾಧರ್, ಕೈಪಿಡಿ ಬಿಡುಗಡೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಡೀಡ್ ಸಂಸ್ಥೆ ನಿರ್ದೇಶಕ ಡಾ.ಎಸ್. ಶ್ರೀಕಾಂತ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಸ್ವರಾಮೃತ ಮೆಲೋಡಿಸ್ :** ಸಾಹಸಸಿಂಹ ಡಾ. ವಿಷ್ಣುವರ್ಧನ್ ಮತ್ತು ರೆಬಲ್‌ಸ್ಟಾರ್ ಡಾ. ಅಂಬರೀಷ್ ಅವರ ಸುಮಧುರ ಹಳೆಯ ಚಿತ್ರಗೀತೆಗಳ ಗಾಯನ ಸಂಜೆ, ಕುಚಿಕು ಕುಚಿಕು, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಲಕ್ಷ್ಮೀಪುರಂ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸರಗೂರು ರಮೇಶ್ ಅವರಿಂದ ಶ್ರೀ ರಾಮಕೃಷ್ಣರ ಶಿಷ್ಯಪ್ರೇಮ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಮೈ ಫ್ಯಾಮಿಲಿ ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ್ ಮಂದಾರ್ತಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಜಿಪಿಐಇಆರ್ ರಂಗ ತಂಡ :** ಆಯಾಮ ಕಲಾವಿದರಿಂದ ಕ್ಲೈಟಮ್ನೆಸ್ಟ್ರ ನಾಟಕ ಪ್ರದರ್ಶನ, ನಿರ್ದೇಶನ : ನಾಗಾರ್ಜುನ ಆರಾಧ್ಯ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ

ಡಣಾಯಕನಪುರದಲ್ಲಿಂದು, ತಿ. ನರಸೀಪುರ ತಾ.

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ತಾಲೂಕು ಶರಣ ಸಾಹಿತ್ಯ ಪರಿಷತ್, ತಿ. ನರಸೀಪುರ, ಶ್ರೀ ಜಗಜ್ಯೋತಿ ಬಸವೇಶ್ವರ ಯುವಕರ ಸಂಘ, ಡಣಾಯಕನಪುರ :** ಶ್ರೀ ಬಸವೇಶ್ವರ ಹಾಗೂ ಶರಣ ಸಾಹಿತ್ಯೋತ್ಸವ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಆಶಯ ನುಡಿ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಸ್ಥಳ: ಡಣಾಯಕನಪುರ ಗ್ರಾಮ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ಎ. ಶೋಭಾ, ಅಮೃತಾ ನಿತಿನ್ ಶಾಸ್ತ್ರೀ, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ವಿಶೇಷ ಹಿಂದಿ ವಾರ್ತೆ, 9.10 ವಿಶೇಷ ಇಂಗ್ಲೀಷ್ ವಾರ್ತೆ, 9.20 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಎ.ಪಿ.ಎಸ್. ಅಂದರೆ ಂಟಿಣು ಫಾಸ್ಫೋಲಿಪಿಡ್ ಸಿಂಡ್ರೋಮ್ ಕುರಿತು ಮಾಹಿತಿ ನೀಡುತ್ತಾರೆ ಮೈಸೂರಿನ ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆಯ ಸಂಧಿವಾತ ಮತ್ತು ಕೀಲುರೋಗ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಮಹಬಲೇಶ್ವರ ಮಮದಾಪುರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಿ, ಪ್ರಸ್ತುತಿ–ಬಿ.ಜಿ. ಕವಿತಾ, 10.30 KRISH-TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ –ಡೆಲ್ಲಿ ಪಬ್ಲಿಕ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ–ಪುಷ್ಪ ವಿ. ಶಂಕರ್, 12.45 ಜನಪದ ಸಂಗೀತ, ಚಾಮರಾಜನಗರ, ರಾಮಸಮುದ್ರದ ತುಳಸಮ್ಮ ಮತ್ತು ಸಂಗಡಿಗರಿಂದ ಮಾರಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು –ಎ.ಜೆ. ದಿವ್ಯ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ, 3.00 ವಿಶೇಷ ಹಿಂದಿ ವಾರ್ತೆಗಳು, 3.10 ವಿಶೇಷ ಇಂಗ್ಲೀಷ್ ವಾರ್ತೆಗಳು, 3.20 ಕನ್ನಡ ಚಿತ್ರಗೀತೆಗಳು, 3.45 ನಕ್ಷತ್ರ ಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ– ಬುದ್ಧಪೂರ್ಣಿಮಾ ಮಾತನಾಡುತ್ತಾರೆ ನೆಲ್ಲಿಕಟ್ಟೆ ಎಸ್. ಸಿದ್ದೇಶ್, 8.00 ವಿಶೇಷ ಹಿಂದಿ ವಾರ್ತೆಗಳು, 8.10 ವಿಶೇಷ ಇಂಗ್ಲೀಷ್ ವಾರ್ತೆಗಳು, 8.20 ಹಿಂದಿ ಚಿತ್ರಗೀತೆಗಳು, 9.15 ವಿಶೇಷ ಸಂವಾದ ಕಾರ್ಯಕ್ರಮ, 10.00 ಸುದ್ಧಿ ಅಧಾರಿತ ವಿಶೇಷ ಕಾರ್ಯಕ್ರಮ–ಸುಖಿಯೋಮೆ ಇದರ ಧ್ವನಿ ಮುದ್ರಣ



ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ (ರಿ)

KARNATAKA RAJYA CHALAVADI MAHASABHA (R)

ನೋಂದಣಿ ಸಂಖ್ಯೆ : 108/2000–2001

#12, 1ನೇ ಮಹಡಿ, ಮಾರುತಿ ನಿಲಯ, ಆರ್.ವಿ.ಲೇಔಟ್, ಕುಮಾರಕೃಪಾ ಪಶ್ಚಿಮ, ಬೆಂಗಳೂರು – 560020



ಸಮೀಕ್ಷೆಯಲ್ಲಿ ತಪ್ಪದೇ ಭಾಗವಹಿಸಿ, ಬಲಗೈ ಗುಂಪಿಗೆ ಸಂಬಂಧಿಸಿದ ನಿಮ್ಮ ಬಲಗೈ/ಛಲವಾದಿ/ ಹೊಲಯ/ ಮಹರ್/ಪರಯ್ಯ/ಮಾಲಾ/ಚನ್ನದಾಸರ...ಇತ್ಯಾದಿ, ಮೂಲ ಜಾತಿಯನ್ನು ಬರೆಯಿಸಿ.



ಸಮಗ್ರ ಸಮೀಕ್ಷೆ ಸಹಾಯವಾಣಿ-9481359000

ಬಂಧುಗಳೇ,

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಈಗಾಗಲೇ ಕರ್ನಾಟಕ ಸರ್ಕಾರವು ಒಳ ಮೀಸಲಾತಿ ಜಾರಿಗೊಳಿಸಲು ಕಾರ್ಯಪ್ರವೃತ್ತವಾಗಿದೆ. ಆದರೆ, ಒಳಮೀಸಲಾತಿ ಹಂಚಿಕೆ ವಿಚಾರವಾಗಿ ಸರಿಯಾದ ಅಂಕಿ ಅಂಶಗಳನ್ನು ಕಲೆ ಹಾಕಿ ಮೀಸಲಾತಿ ಹಂಚಿಕೆ ಮಾಡುವಲ್ಲಿ ಹಲವು ಸಮಸ್ಯೆಗಳು ಉಂಟಾಗಿರುವುದರಿಂದ, ದಲಿತ ಸಮುದಾಯದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ರಾಜ್ಯ ಸರ್ಕಾರವು ಮುಂದಾಗಿದ್ದು, ಈ ದಿಕ್ಕಿನಲ್ಲಿ ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್‌ರವರ, ಏಕ ಸದಸ್ಯ ಆಯೋಗವನ್ನು ನೇಮಿಸಲಾಗಿದೆ. ಸದರಿ ಆಯೋಗವು ಪರಿಶಿಷ್ಟ ಜಾತಿಯಲ್ಲಿ ಬರುವ 101 ಜಾತಿಗಳಿಗೆ ಸಮರ್ಪಕವಾಗಿ ಮೀಸಲಾತಿ ಪ್ರಮಾಣವನ್ನು ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಲು ಅವಕಾಶವಾಗುವಂತೆ ಆಯೋಗಕ್ಕೆ ಸರಿಯಾದ ಮಾಹಿತಿಯನ್ನು ನೀಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆದ್ದರಿಂದ ಆಯೋಗವು ಪರಿಶಿಷ್ಟ ಜಾತಿಗಳ ಸಮೀಕ್ಷೆಯಲ್ಲಿ ಕೋರುವ ಮಾಹಿತಿಯನ್ನು ಹೇಗೆ ನೀಡಬೇಕು ಎಂಬ ಬಗ್ಗೆ ಈ ಮೂಲಕ ಸಮುದಾಯದ ಕುಲಬಾಂಧವರಿಗೆ ತಿಳಿಪಡಿಸಲಾಗುತ್ತಿದೆ. ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲಾದ ಪರಿಶಿಷ್ಟ ಜಾತಿಗೆ ಸೇರಿದ 101 ಜಾತಿಗಳ ಪೈಕಿ ಈ ಕೆಳಗಿನ ಜಾತಿಗಳು ಹೊಲೆಯ/ಬಲಗೈ/ಛಲವಾದಿ/ ಮಹರ್/ಪರಯ್ಯ/ ಮಾಲಾ ಗುಂಪಿಗೆ ಸಂಬಂಧಿಸಿದ ಸಮಾನಾಂತರ ಜಾತಿಗಳಾಗಿರುತ್ತವೆ.

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲಾದ ಆದೇಶದ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿದ ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ಸಮಾನಾಂತರ ಜಾತಿಗಳ ವಿವರವಾದ ಪಟ್ಟಿ

ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ, ಆಡಿಯಾ (ಕೊಡಗು ಜಿಲ್ಲೆಯಲ್ಲಿ), ಅರೇ ಮಾಲಾ, ಅರ್ವಾ ಮಾಲಾ, ಬೈರಾ, ಬಕುಡ, ಬಲಗೈ, ಬಂಡಿ, ಬ್ಯಾಗಾರ, ಚಲವಾದಿ, ಚಲ್‌ವಾದಿ, ಚನ್ನಯ್ಯ, ಚನ್ನ ದಾಸರ್, ಹೊಲೆಯ ದಾಸರ್, ಹಳ್ಳೀರ್, ಹೋಲರ್, ವಲ್ಹಾರ್, ಹೊಲಯ, ಹೊಲೇರ್, ಹೊಲೆಯ, ಹೊಲೆಯ ದಾಸರಿ, ಮಹಾರ್, ತರಲ್, ದೇಗುಮೇಗು, ಮಾಲಾ ಮೈಲಾ, ಮಾಲಾ, ಮಾಲಾ ದಾಸರಿ, ಮಾಲಾ ಹನ್ನೈ, ಮಾಲಾ ಜಂಗಮ, ಮಾಲಾ, ಮಾಸ್ತಿ, ಮಾಲಾ ಸಾಲೆ, ನೆಟ್ಕಣಿ, ಮಾಲಾ ಸನ್ಯಾಸಿ, ಮೇಘವಾಲ್, ಮೆಂಘಾವರ್, ಪರಾಯನ್, ಪರಾಯ, ವಳ್ಳುವಲನ್, ಪರಯ್ಯ, ಪಲ್ಲಾರ್, ಮೊಗೆರ್, ಮುಕ್ರಿ, ಹಗೇರು, ಹಲ್‌ಸಾರ್, ಹುಸ್‌ಲಾರ್, ಹಲ್‌ಸವಾರ್, ಮಾರಿಲಾನ್ ಮತ್ತು ಕೊಟೆಗಾರ್.

ಕರ್ನಾಟಕ ಸರ್ಕಾರದಿಂದ ಜಾತಿ ಸಮೀಕ್ಷೆ ಮಾಡಲು ನೇಮಿಸಲಾಗಿರುವ ಗಣತಿದಾರರು ಪ್ರಸ್ತುತ ದಿನಗಳಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರ ಮನೆ–ಮನೆಗೆ ಭೇಟಿ ನೀಡಿ ಸಮೀಕ್ಷೆ ಕಾರ್ಯವನ್ನು ಮಾಡುವವರಿದ್ದಾರೆ. ಈ ಸಂದರ್ಭದಲ್ಲಿ ಜಾತಿ ಸಮೀಕ್ಷೆಯ ನಮೂನೆಯಲ್ಲಿ 'ಜಾತಿ' ಮತ್ತು 'ಮೂಲ ಜಾತಿ/ಉಪ ಜಾತಿ' ಗಳನ್ನು ಕಡ್ಡಾಯವಾಗಿ ನಮೂದಿಸಲು ಕೋರುತ್ತಾರೆ. ಇವುಗಳನ್ನು ಯಾರ‍್ಯಾರು ಹೇಗೆ–ಹೇಗೆ ನಮೂದಿಸಬೇಕೆಂಬುದನ್ನು ಈ ಕೆಳಗೆ ವಿವರವಾಗಿ ವಿವರಿಸಲಾಗಿದೆ.

'ಜಾತಿ ಕಾಲಂ' (ಮೇಲೆ ಪಟ್ಟಿ ಮಾಡಿರುವ ನಮ್ಮ ಹೊಲೆಯ/ಬಲಗೈ/ಛಲವಾದಿ/ ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ಪ್ರತಿಯೊಂದು ಸಮಾನಾಂತರ ಜಾತಿಗೂ ಅನ್ವಯ):

ಮೇಲೆ ಪಟ್ಟಿ ಮಾಡಿರುವ ನಮ್ಮ ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ಎಲ್ಲಾ ಸಮಾನಾಂತರ ಜಾತಿಯ ಜನಾಂಗದವರು ಕಡ್ಡಾಯವಾಗಿ ಹಾಗೂ ನಿಖರವಾಗಿ ಅವರವರ ಜಾತಿಯನ್ನು ನಮೂದಿಸಬೇಕಾಗಿದ್ದು, ಸಮೀಕ್ಷೆಯ ನಮೂನೆಯಲ್ಲಿನ 'ಜಾತಿ ಕಾಲಂ'ನಲ್ಲಿ ನಿಮ್ಮ–ನಿಮ್ಮ ಜಾತಿ ಪ್ರಮಾಣ ಪತ್ರದಲ್ಲಿರುವಂತೆ ಜಾತಿಯನ್ನು ನಮೂದಿಸಲು ಗಣತಿದಾರರು ಕೋರುತ್ತಾರೆ. ಸದರಿ ಸಮೀಕ್ಷೆಯ ನಮೂನೆಯಲ್ಲಿ 'ಜಾತಿ ಕಾಲಂ'ನ ಭಾಗ ಈ ಕೆಳಗಿನಂತಿರುತ್ತದೆ;

> **ಜಾತಿ/caste:**
> ಮೇಲೆ ಪಟ್ಟಿ ಮಾಡಿರುವ ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ನಿಮ್ಮ ಸಮಾನಾಂತರ ಜಾತಿಯನ್ನು ಜಾತಿ ಪ್ರಮಾಣ ಪತ್ರದಲ್ಲಿರುವಂತೆ ಕಡ್ಡಾಯವಾಗಿ ಹಾಗೂ ನಿಖರವಾಗಿ ನಮೂದಿಸಬೇಕು.

ವಿಶೇಷ ಸೂಚನೆ: 'ಜಾತಿ ಕಾಲಂ', ಇದು ಮೇಲೆ ಪಟ್ಟಿಮಾಡಿರುವ ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ಪ್ರತಿಯೊಂದು ಸಮಾನಾಂತರ ಜಾತಿಗೂ ಅನ್ವಯಿಸುತ್ತದೆ.

'ಮೂಲ ಜಾತಿ/ಉಪ ಜಾತಿ ಕಾಲಂ' (ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ಜಾತಿ ಕಾಲಂನಲ್ಲಿ ನಮೂದಿಸುವವರಿಗೆ ಮಾತ್ರ ಅನ್ವಯ):

ಐತಿಹಾಸಿಕವಾಗಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಇವು ಜಾತಿಗಳ ಹೆಸರುಗಳಲ್ಲ, ಅನೇಕ ಜಾತಿಗಳ ಗುಂಪುಗಳಿಗೆ ನೀಡಿದ ಹೆಸರುಗಳಾಗಿರುತ್ತವೆ ಎಂಬುದನ್ನು ಮನಗಂಡ ಆಯೋಗವು ಸಮರ್ಪಕವಾದ ಜಾತಿ ವರ್ಗೀಕರಣಕ್ಕೆ ಮತ್ತು ಅಂಕಿಅಂಶಗಳನ್ನು ಕಲೆಹಾಕುವ ಸಲುವಾಗಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ಜಾತಿ ಕಾಲಂನಲ್ಲಿ ನಮೂದಿಸುವವರಿಗೆ ಮಾತ್ರ ಸಮೀಕ್ಷೆಯ ನಮೂನೆಯಲ್ಲಿ ವಿಶೇಷವಾಗಿ'ಮೂಲ ಜಾತಿ/ಉಪ ಜಾತಿ ಕಾಲಂ'ನ್ನು ಕಲ್ಪಿಸಲಾಗಿರುತ್ತದೆ. ಸದರಿ 'ಮೂಲ ಜಾತಿ/ಉಪ ಜಾತಿ ಕಾಲಂ'ನಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಜಾತಿಗಳನ್ನು ಹೊರತುಪಡಿಸಿ ಮೇಲಿನ ಪಟ್ಟಿಯಲ್ಲಿರುವ ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ನಿಮ್ಮ–ನಿಮ್ಮ ಸಮಾನಾಂತರ ಸ್ಥಳೀಯವಾಗಿ ಆಡುಭಾಷೆಯಲ್ಲಿ ಕರೆಯಿಸಿಕೊಳ್ಳುವ ಮೂಲ ಜಾತಿಯನ್ನು ಕಡ್ಡಾಯವಾಗಿ ಹಾಗೂ ನಿಖರವಾಗಿ ನಮೂದಿಸಬೇಕು. ಸದರಿ ನಮೂನೆಯ'ಮೂಲ ಜಾತಿ/ಉಪ ಜಾತಿ ಕಾಲಂ'ನ ಭಾಗ ಈ ಕೆಳಗಿನಂತಿರುತ್ತದೆ

> **ಮೂಲ ಜಾತಿ/ಉಪ ಜಾತಿ:**
> ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಜಾತಿಗಳನ್ನು ಹೊರತುಪಡಿಸಿ ಮೇಲಿನ ಪಟ್ಟಿಯಲ್ಲಿರುವಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ ಮಾಲಾ ಗುಂಪಿಗೆ ಸಂಬಂಧಿಸಿದ ನಿಮ್ಮ–ನಿಮ್ಮ ಸಮಾನಾಂತರ ಸ್ಥಳೀಯವಾಗಿ ಆಡುಭಾಷೆಯಲ್ಲಿ ಕರೆಯಿಸಿಕೊಳ್ಳುವ ಮೂಲ ಜಾತಿಯನ್ನು ಕಡ್ಡಾಯವಾಗಿ ಹಾಗೂ ನಿಖರವಾಗಿ ನಮೂದಿಸಬೇಕು.

ವಿಶೇಷ ಸೂಚನೆ: 'ಮೂಲ ಜಾತಿ/ಉಪ ಜಾತಿ ಕಾಲಂ' ಇದು ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂದು ಜಾತಿ ಕಾಲಂನಲ್ಲಿ ನಮೂದಿಸುವವರಿಗೆ ಮಾತ್ರ ಅನ್ವಯಿಸುತ್ತದೆ.


ಈ ಕೆಳಗೆ ಸೂಚಿಸಿದ ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ಸಮಾನಾಂತರ ಜಾತಿಯ ಜನಾಂಗದವರು ಆದಿ ಕರ್ನಾಟಕ/ಆದಿ ದ್ರಾವಿಡ/ಆದಿ ಆಂಧ್ರ ಎಂದು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಜಾತಿ ಕಾಲಂನಲ್ಲಿ ಆದಿ ಕರ್ನಾಟಕ/ಆದಿ ದ್ರಾವಿಡ/ಆದಿ ಆಂಧ್ರ ಎಂದೇ ನಮೂದಿಸುವ ಸಾಧ್ಯತೆ ಇದ್ದು, ಇವರು ಮೂಲ ಜಾತಿ / ಉಪ–ಜಾತಿ ಕಾಲಂನಲ್ಲಿ ಏನೆಂದು ನಮೂದಿಸಬೇಕೆಂಬುದನ್ನು ಈ ಕೆಳಗೆ ಪ್ರತ್ಯೇಕವಾಗಿ ಮತ್ತು ನಿರ್ದಿಷ್ಟವಾಗಿ ತಿಳಿಸಲಾಗಿದೆ.

- ಮಾಲಾ, ಅರೇ ಮಾಲಾ, ಅರ್ವಾ ಮಾಲಾ, ಮಾಲಾ ಮೈಲಾ, ಮಾಲಾ ದಾಸರಿ, ಮಾಲಾ ಹನ್ನೈ, ಮಾಲಾ ಜಂಗಮ್, ಮಾಲಾ ಮಾಸ್ತಿ, ಮಾಸ್ತಿ, ಮಾಲ ಸಾಲೆ, ನೆಟ್ಕಣಿ ಮತ್ತು ಮಾಲಾ ಸನ್ಯಾಸಿ ಇವುಗಳು ಎಲ್ಲವೂ ಒಂದೊಂದು ಜಾತಿಗಳೇ ಆಗಿದ್ದು ಮೂಲ ಜಾತಿ /ಉಪ–ಜಾತಿ ಕಾಲಂನಲ್ಲಿ ತಮ್ಮ–ತಮ್ಮ ಜಾತಿಗಳ ಹೆಸರನ್ನೇ ನಮೂದಿಸುವುದು.
- ಕೊಡಗು ಜಿಲ್ಲೆಯಲ್ಲಿ ಬರುವ 'ಆಡಿಯ' ಜಾತಿಯವರು, ಮೂಲ ಜಾತಿ/ಉಪ–ಜಾತಿ ಕಾಲಂನಲ್ಲಿ 'ಆಡಿಯ'ಎಂದು ನಮೂದಿಸುವುದು.
- ಛಲವಾದಿ, ಛಲ್‌ವಾದಿ, ಚನ್ನಯ್ಯ ಜಾತಿಗೆ ಸೇರಿದವರು ಮೂಲ ಜಾತಿ/ಉಪ–ಜಾತಿ ಕಾಲಂನಲ್ಲಿ ತಮ್ಮ–ತಮ್ಮ ಜಾತಿಗಳ ಹೆಸರನ್ನೇ ನಮೂದಿಸುವುದು.
- ಮಹರ್, ತರಲ್ ಹಾಗೂ ದೇಗುಮೇಗು ಜಾತಿಗೆ ಸೇರಿದವರು ಮೂಲ ಜಾತಿ/ಉಪ–ಜಾತಿಯ ಕಾಲಂನಲ್ಲಿ ತಮ್ಮ–ತಮ್ಮ ಜಾತಿಗಳ ಹೆಸರನ್ನೇ ನಮೂದಿಸುವುದು.
- ಮೇಘವಾಲ್, ಮೆಂಘಾವರ್ ಜಾತಿಗೆ ಸೇರಿದವರು ಮೂಲ ಜಾತಿ/ಉಪ–ಜಾತಿಯ ಕಾಲಂನಲ್ಲಿ ತಮ್ಮ–ತಮ್ಮ ಜಾತಿಗಳ ಹೆಸರನ್ನೇ ನಮೂದಿಸುವುದು.
- ಪರಯ್ಯ, ಪಲ್ಲಾರ್, ವಳ್ಳುವನ್, ಪರಾಯನ್, ಪರಾಯ ಈ ಜಾತಿಗೆ ಸೇರಿದವರು ಮೂಲ ಜಾತಿ/ಉಪ–ಜಾತಿಯ ಕಾಲಂನಲ್ಲಿ ತಮ್ಮ–ತಮ್ಮ ಜಾತಿಗಳ ಹೆಸರನ್ನೇ ನಮೂದಿಸುವುದು.
- ಬೈರಾ, ಬಕುಡ, ಬಲಗೈ, ಬಂಡಿ, ಬ್ಯಾಗಾರ, ಚನ್ನ ದಾಸರ್, ಹೊಲೆಯ ದಾಸರ್, ಹಳ್ಳೀರ್, ಹೋಲರ್, ವಲ್ಹಾರ್, ಹೊಲೆಯ, ಹೊಲೆಯ ದಾಸರಿ, ಮುಕ್ರಿ, ಹಗೇರು, ಮೊಗೆರ್, ಅಂಕೋಲೆಕರ್, ಹಲ್‌ಸಾರ್, ಹುಸ್‌ಲಾರ್, ಹಲ್‌ಸವಾರ, ಮಾರಿಲಾನ್ ಮತ್ತು ಕೊಟೆಗಾರ್ ಜಾತಿಯವರು ಮೂಲ ಜಾತಿ/ಉಪ–ಜಾತಿಯ ಕಾಲಂನಲ್ಲಿ ತಮ್ಮ–ತಮ್ಮ ಜಾತಿಗಳ ಹೆಸರನ್ನೇ ನಮೂದಿಸುವುದು.

ಒಂದು ವೇಳೆ ಮೇಲೆ ತಿಳಿಸಿದಂತೆ ನಿಮ್ಮ ಜಾತಿ ಜೊತೆಗೆ ಅನ್ವಯಿಸಿದ್ದಲ್ಲಿ ಮೂಲ/ಉಪಜಾತಿಯನ್ನು ನಮೂದಿಸದಿದ್ದರೇ, ಹೊಲೆಯ/ಬಲಗೈ/ಛಲವಾದಿ/ಮಹರ್/ಪರಯ್ಯ/ಮಾಲಾ ಗುಂಪಿಗೆ ಸಂಬಂಧಿಸಿದ ಜಾತಿಗಳ ಜನಸಂಖ್ಯೆಯಲ್ಲಿ ಗಣನೀಯ ಏರುಪೇರಾಗಿ ನಮ್ಮ ಈ ಬಲಗೈ ಗುಂಪಿಗೆ ವಾಸ್ತವಿಕವಾಗಿ ದೊರಕಬೇಕಿರುವ ಮೀಸಲಾತಿ ಪ್ರಮಾಣದಲ್ಲಿ ಹೆಚ್ಚು–ಕಡಿಮೆಯಾಗಿ, ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳಾದ ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ, ಆರೋಗ್ಯ, ಕೃಷಿ, ತೋಟಗಾರಿಕೆ, ಕೈಗಾರಿಕೆ, ವಾಣಿಜ್ಯ, ಪಶುಸಂಗೋಪನೆ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಸಿಗುವ ಸೌಲಭ್ಯಗಳಿಂದ ನಾವು ಶಾಶ್ವತವಾಗಿ ವಂಚಿತರಾಗಬೇಕಾಗುತ್ತದೆ. ಇದರ ಪರಿಣಾಮದಿಂದ ನಮ್ಮ ಜನಾಂಗದ ಮುಂದಿನ ಪೀಳಿಗೆ ಶತಶತಮಾನಗಳ ವರೆಗೆ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ಉಪ ಜಾತಿ/ಮೂಲ ಜಾತಿಯ ಮಾಹಿತಿಯನ್ನು ಸರಿಯಾಗಿ ನಮೂದಿಸದೇ ಇದ್ದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಯಾವುದೇ ಸೌಲಭ್ಯಗಳು ದೊರಕುವುದಿಲ್ಲ.

ಆದುದರಿಂದ ಮನೆ–ಮನೆ ಜಾತಿ ಸಮೀಕ್ಷೆ ಮಾಡುವ ಸಮಯದಲ್ಲಿ ನಿಗದಿಪಡಿಸಿದ ಕಾಲಂಗಳಲ್ಲಿ ನಿಮ್ಮ ಜಾತಿ ಜೊತೆಗೆ ಅನ್ವಯಿಸಿದ್ದಲ್ಲಿ ಮೂಲ/ಉಪ–ಜಾತಿಯನ್ನು ಕಡ್ಡಾಯವಾಗಿ ನಮೂದಿಸುವಂತೆ ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ, ರಾಜ್ಯ ಸಮಿತಿ ಬೆಂಗಳೂರು ವಿನಂತಿ ಮಾಡಿಕೊಳ್ಳುತ್ತದೆ.



ಶ್ರೀ ಸಿದ್ದಯ್ಯ,
ಐಎಎಸ್(ನಿವೃತ್ತ)
ಅಧ್ಯಕ್ಷರು, ಕೆ.ಸಿ.ಎಂ.ಎಸ್.



ಶ್ರೀ ಟಿ.ಆರ್.ಶಿವರಾಮು
ಮುಖ್ಯ ಅಭಿಯಂತರರು (ನಿವೃತ್ತ) ಪಿಡಬ್ಲ್ಯೂಡಿ
ಕಾರ್ಯಕಾರಿ ಸದಸ್ಯರು, ಕೆ.ಸಿ.ಎಂ.ಎಸ್.



ಶ್ರೀ ಡಿ.ಚಂದ್ರಶೇಖರಯ್ಯ
ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ಎಸ್.ಸಿ/
ಎಸ್‌ಟಿ ನೌಕರರ ಸಂಘ, ಬೆಂಗಳೂರು



ಶ್ರೀ ಮಹದೇವಯ್ಯ,
ಖಜಾಂಚಿ,
ಕೆ.ಸಿ.ಎಂ.ಎಸ್.



ಶ್ರೀ ಶೀತಲ್ ಕಾಂಬ್ಳೆ,
ಕೆ.ಸಿ.ಎಂ.ಎಸ್
ಬಾಗಲಕೋಟ



ಪ್ರಕಟಣೆ

ಎಂ. ಶಂಕರ್

ನಿವೃತ್ತ ಆದಾಯ ತೆರಿಗೆ ಅಧಿಕಾರಿ,
ಗಾಂಧಿನಗರ, ಮೈಸೂರು

ನಕ್ಕರೆ ಅದೇ ಸ್ವರ್ಗ

ಭಿಕ್ಷುಕಿ : ಅಣ್ಣಾ... ಮೂರು ದಿನದಿಂದ ಊಟ ಮಾಡಿಲ್ಲ. ಒಂದು ರೂಪಾಯಿ ಕೊಡಿ.
ಗುಂಡ : ಮೂರು ದಿನದಿಂದ ಊಟ ಮಾಡಿಲ್ಲಾಂತಿಯಾ... ಒಂದು ರೂಪಾಯಿಯಲ್ಲಿ ಏನು ಮಾಡ್ತೀಯಾ?
ಭಿಕ್ಷುಕಿ : ಎಷ್ಟು ಕೆಜಿ ಕಮ್ಮಿ ಆಗಿದ್ದೀನಿಂತಾ ನೋಡ್ತೀನಿ...

ಮೈಸೂರು ಮಿತ್ರ
ಭಾನುವಾರ, 11 ಮೇ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಬೆಟ್ಟ ಹತ್ತಿದಂತಹ ಶ್ರಮವಿರುತ್ತದೆ. ನಡೆದು ಬಂದ ದಾರಿಯಲ್ಲಿ ಹೇಳಿಕೊಳ್ಳಲಾಗದ ನೋವಿರುತ್ತದೆ. ಅವರಂತೆ ನಾವಾಗಲು ಪ್ರಯತ್ನಿಸಬೇಕೇ ಹೊರತು ಆ ವ್ಯಕ್ತಿಯ ಯಶಸ್ಸಿಗೆ ಕೇಡು ಬಯಸುವ ಶತ್ರುಗಳಾಗಬಾರದು.

ವೇದ ಸುಳ್ಳಾದರೂ { ಊರಿಗೆ ಅರಸನಾದರೂ
ಗಾದೆ ಸುಳ್ಳಾಗದು { ತಂದೆಗೆ ಮಗ

ನಿಮ್ಮ ಪತ್ರಗಳು

ಸಂಕಷ್ಟದಲ್ಲಿ ಸುರಕ್ಷತಾ ತಾಲೀಮು ಎಂತಹ ಆಕರ್ಷಕ ಶೀರ್ಷಿಕೆ !

ಮಾನ್ಯರೆ,

1971ರ ನಂತರ ಅಂದರೆ ಸುಮಾರು 54 ವರ್ಷಗಳ ನಂತರ ದೇಶದ 244 ಜಿಲ್ಲೆಗಳಲ್ಲಿ ನಡೆಯುತ್ತಿರುವ 'ನಾಗರಿಕ ರಕ್ಷಣಾ ಮಾಕ್ ಡ್ರಿಲ್', ಯುದ್ಧದ ಸನ್ನಿವೇಶವೇ ಹೊರತು ನಿಜವಾದ ಯುದ್ಧವಲ್ಲ ಎಂಬುದೂ ನಮ್ಮನ್ನು ನಾವೇ ಎಚ್ಚರಿಸಿಕೊಳ್ಳುವುದರ ಜತೆ, ಒಂದೊಮ್ಮೆ ಅಂತಹ ಸನ್ನಿವೇಶ ಒದಗಿಬಂದರೆ, ಭಾರತೀಯ ಪ್ರಜೆಯಾಗಿ ನಮ್ಮನ್ನು ನಾವು ಹೇಗೆ ತಯಾರಿ ಮಾಡಿಕೊಳ್ಳಬೇಕು ಎಂಬುದನ್ನು ತಿಳಿ ಹೇಳುವ ಪಾಠ. ಈ ಪಾಠ ತೀರಾ ಕಠಿಣ ಸಂದರ್ಭದಲ್ಲಷ್ಟೇ ಕಲಿಸುವಂತಹುದು ಎಂಬುದು ಸುದೀರ್ಘ ಅವಧಿಯ ನಂತರ ಬಂದಿದ್ದು ಎಂಬುದೇ ಸಾಬೀತು ಪಡಿಸುವಂತಿದೆ.

ಈ ಸಮರಕ್ಕೆ 'ಆಪರೇಶನ್ ಸಿಂಧೂರ್' ಅಂತ ಹೆಸರಿಸಿದ್ದೂ ಎಷ್ಟೊಂದು ಅರ್ಥವತ್ತಾಗಿದೆ. ಈಗಷ್ಟೇ ನಡೆದ ಪಹಲ್ಗಾಮ್ ಉಗ್ರರ ದಾಳಿಯಲ್ಲಿ ಅದೆಷ್ಟೋ ಮದುವೆಯಾದ ಗೃಹಿಣಿಯರು ತಮ್ಮ ಸಿಂಧೂರವನ್ನೇ ಕಳೆದುಕೊಳ್ಳುವಂತಾಗಿರುವುದರಿಂದ ಅದಕ್ಕೆ ಪ್ರತೀಕಾರವಾಗಿ ಈ ದಾಳಿ ಎಂಬ ಸಂಕೇತ !

ಕೇಳಲೇನೋ ಅಣಕು ಕವಾಯತ್. ವಾಸ್ತವದಲ್ಲಿ ಇದು ಯುದ್ಧದ ಸನ್ನಿವೇಶವನ್ನೇ ಸೃಷ್ಟಿಸುವಂತಿದೆ. ಬೆಂಗಳೂರು ಒಂದರಲ್ಲೇ 32 ಕಡೆ ಕವಾಯತ್, 35 ಕಡೆ ಸೈರನ್, ಮಾಕ್ ಡ್ರಿಲ್. ಯಾವುದೇ ಸಂಭಾವ್ಯ ಪ್ರತಿಕೂಲ ದಾಳಿ ಅಥವಾ ತುರ್ತು ಪರಿಸ್ಥಿತಿಯಲ್ಲಿ ಸಾಮಾನ್ಯ ನಾಗರಿಕರೂ ಹೇಗೆ ಸಜ್ಜುಗೊಳ್ಳಬೇಕು ಎಂಬುದು ಪರಿಸ್ಥಿತಿಯ ತೀವ್ರತೆಯ ಅರಿವನ್ನೂ ವಿವರಿಸಿದಂತಿದೆ. ಕಾಲ ಬಂದಾಗ, ಯಾರೂ ಯಾರನ್ನೂ ರಕ್ಷಿಸಲಾರರು. ಪೌರಾಣಿಕ ಕಥೆಗಳಿಂದಲೂ ಇದನ್ನು ನಾವೆಲ್ಲ ಕೇಳುತ್ತಲೇ ಬಂದಿದ್ದೇವೆ. ಆದರೆ ಈಗ ಅದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗುತ್ತಿದ್ದೇವೆ !

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

ಅಂಕುಡೊಂಕು ಎತ್ತಿ ಹಿಡಿಯುವ ಎಂಎಲ್‌ಸಿ ವಿಶ್ವನಾಥ್

ಮಾನ್ಯರೇ

ನಾಡು ಕಂಡ ದಿ. ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಶಿಷ್ಯರಾಗಿದ್ದ ವಿಧಾನಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಯಾವುದೇ ಪಕ್ಷದಲ್ಲಿರಲಿ ಅಥವಾ ಅಧಿಕಾರದಲ್ಲಿರಲಿ ಅವರು ನೇರ ದಿಟ್ಟವಾಗಿ ಅಲ್ಲಿನ ಅಂಕುಡೊಂಕುಗಳನ್ನು ಪಕ್ಷಭೇದ ಮರೆತು ಸಮಾಜವನ್ನು ಎಚ್ಚರಿಸುತ್ತಿದ್ದರು.

ಎಸ್.ಎಮ್.ಕೃಷ್ಣ ಅವರ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬಿಸಿಯೂಟದ ಯೋಜನೆ ರೂವಾರಿ ಕೂಡ ಇವರು. ಕೆಲವರಿಗಂತು ಇವರನ್ನು ರಾಜಕಾರಣಿಗಿಂತಲೂ ಇವರ ಅಲ್ಪಪ್ರಾಣ ಮತ್ತು ಮಹಾಪ್ರಾಣದ ಪದದ ಜೋಡಣೆಯ ಸಂಭಾಷಣೆಗಳು ಇಷ್ಟ ಹಾಗೂ ಇವರನ್ನು ಲೇಖಕರಾಗಿ, ಬರಹಗಾರರಾಗಿ ಇಷ್ಟಪಡೋರುಂಟು. ಆದಷ್ಟು ಬೇಗ ಇವರ 'ಬಾಂಬೆ ಡೇಸ್' ಪುಸ್ತಕ ಬಿಡುಗಡೆಯಾಗಲಿ. ಇವರ ಬರವಣಿಗೆ ಹೀಗೆ ಮುಂದುವರೆಯಲಿ.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಬಂಜಗೆರೆ ಬೇಜವಾಬ್ದಾರಿ ಹೇಳಿಕೆ

ಮಾನ್ಯರೆ,

ಮೇ 9 ರಂದು ನಡೆದ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಕೃತಿ ಬಿಡುಗಡೆ ಸಮಾರಂಭದಲ್ಲಿ ಡಾ. ಬಂಜಗೆರೆ ಜಯಪ್ರಕಾಶ್, ಸಿನಿಮಾ ರಾಜಕೀಯ ಸೇರಿ ಪ್ರತೀ ಕ್ಷೇತ್ರದಲ್ಲಿ ಅವಕಾಶಕ್ಕಾಗಿ ಹೆಣ್ಣು ದೇಹ ಅರ್ಪಿಸಬೇಕಿದೆ (ಮೈಸೂರು ಮಿತ್ರ ವರದಿ) ಎಂಬ ಕೀಳು ಹೇಳಿಕೆಯನ್ನು ನೀಡಿ ಮಹಿಳೆಯರನ್ನು ಅವಮಾನಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು, ಸೋಫಿಯಾ ಖುರೇಷಿ, ವ್ಯೋಮಿಕಾ ಸಿಂಗ್ ಎಂತೆಂತಹ ಮಹಾನ್ ಮಹಿಳೆಯರು ನಮ್ಮ ದೇಶದ ಸೌಭಾಗ್ಯ. ಎಲ್ಲಾ ಮಹಿಳೆಯರನ್ನು ಈ ರೀತಿ ಅಸಹ್ಯಕರ ಪದಗಳಿಂದ ಅವಮಾನಿಸಿದ ಬಂಜಗೆರೆಯನ್ನು ಸಂಸ್ಕೃತಿ ಚಿಂತಕ ಎಂದು ಕರೆದಿರುವುದು ಸಂಸ್ಕೃತಿಗೆ ಮಾಡುವ ಅವಮಾನ.

ಇತ್ತೀಚೆಗೆ ಕೆಲವು ಮಾಸಲು ತಲೆಹರಟೆಗಳು ಮತ್ತೆ ಮತ್ತೆ ಸುದ್ದಿಯಲ್ಲಿರಲು ಈ ರೀತಿ ಅಸಭ್ಯ ಹೇಳಿಕೆ ನೀಡುವ ಪರಿಪಾಟ ಬೆಳೆಸಿಕೊಂಡಿದ್ದಾರೆ. ದಿಕ್ಕಾರವಿರಲಿ ನಿಮ್ಮ ಈ ಹೇಳಿಕೆಗೆ ಈ ಕ್ಷಣ ಎಲ್ಲ ಮಹಿಳೆಯರ ಕ್ಷಮೆ ಕೋರಿ ನಿಮ್ಮ ಹೇಳಿಕೆ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

– ಅರಕೆರೆ ದೇವರಾಜು, ಮೈಸೂರು

ಬೇಲಿ ಇಲ್ಲದ ಪಾರ್ಕ್ ಬೆಳೆಸುವ ವ್ಯರ್ಥ ಪ್ರಯತ್ನ

ಮಾನ್ಯರೆ,



ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯ (ಹಳೇ ನ್ಯಾಯಾಲಯದ ಮುಂಭಾಗ) ರಸ್ತೆ ಮಧ್ಯ ಭಾಗದಲ್ಲಿ ಇರುವ ಜಾಗದಲ್ಲಿ ಹೂವಿನ ಗಿಡಗಳನ್ನು ನೆಟ್ಟು ಪೋಷಿಸುವ ಕೆಲಸ ಆರಂಭಿಸಲಾಗಿದೆ. ಆದರೆ ಈ ಗಿಡಗಳು ಬೆಳೆದು ದೊಡ್ಡದಾಗಲು ಸೂಕ್ತ ರಕ್ಷಣಾ ಬೇಲಿಯೇ ಇಲ್ಲವಾಗಿದೆ. ಬಾಗಿಲು ಮುರಿದ/ ಇಲ್ಲದ ಉದ್ಯಾನವನಗಳನ್ನು ನುಗ್ಗಿ ಧ್ವಂಸಗೊಳಿಸುವ ಬಿಡಾಡಿ ದನಗಳು, ರಕ್ಷಣಾ ಬೇಲಿ ಇಲ್ಲದೆ ರಸ್ತೆಯಲ್ಲಿರುವ ಗಿಡಗಳನ್ನು ಬಿಡುತ್ತವೆಯೇ? ಉದ್ಯಾನವನ ಮಾಡಲು ಹೊರಟಿರುವವರಿಗೆ ಅಷ್ಟೂ ಸಾಮಾನ್ಯ ಜ್ಞಾನ ಇಲ್ಲವೇ? ಅಥವಾ ಜ್ಞಾನ ಇದ್ದೂ ಕಾಸು ಮಾಡಲು ಒಂದು ಯೋಜನೆಯೆಂದು ಸುಮ್ಮನೆ ಆರಂಭಿಸಿರುವರೇ? ಏನಾದರೂ ಇದು ಸಾರ್ವಜನಿಕ ವೆಚ್ಚದ ಅಪವ್ಯಯ. ಆದ ಕಾರಣ ಸಂಬಂಧಪಟ್ಟ ಅಧಿಕಾರಿ ವರ್ಗ ತಕ್ಷಣ ಗಮನಹರಿಸಿ ಬೇಲಿ ನಿರ್ಮಿಸಲು ಕ್ರಮ ವಹಿಸುವುದು ಸೂಕ್ತ. ಇಲ್ಲವಾದಲ್ಲಿ ಗಿಡ ಬೆಳೆಸುವ ಕಾರ್ಯಕ್ರಮ ಹೊಳೆಯಲ್ಲಿ ಹುಣಸೇ ಹಣ್ಣು ಹಿಂಡಿದಂತಾಗುತ್ತದೆ.

–ಎಸ್.ರವಿ, ವಕೀಲ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಐಕಮತ್ಯ ಸಾಬೀತಿಗೆ ಸುಸಮಯ

ಭಾರತದ ಉದ್ದಗಲದಲ್ಲೂ ಈಗ ಒಂದೇ ಮಿಡಿತ. ಯುದ್ಧ... ಯುದ್ಧ... ಯುದ್ಧ.... ಸೇಡು... ಸೇಡು... ಸೇಡು... ಶಿಶುಪಾಲನ ನೂರು ತಪ್ಪುಗಳು ಮುಗಿಯಲಿ, ನಂತರ ಅವನ ಶಿಕ್ಷೆ ಎಂದು ಭಗವಾನ್ ಶ್ರೀ ಕೃಷ್ಣ ತಾಳ್ಮೆಯಿಂದ ಕಾದ ರೀತಿಯಲ್ಲಿ, ಭಾರತದ ಕಾಯುವಿಕೆ ಹಾಗೂ ಅದರ ತಾಳ್ಮೆ ಎರಡೂ ಮುಗಿದಿದೆ. ಭಾರತವು ತಾನಾಗಿಯೇ ಯಾರ ಮೇಲಾದರೂ ದಂಡೆತ್ತಿ ಹೋಗಿ ಆಕ್ರಮಣ ಮಾಡಿದ ಉದಾಹರಣೆಗಳು ಇತಿಹಾಸದಲ್ಲಿ ಬಹುಶಃ ಹುಡುಕಿದರೂ ಸಿಗಲಾರದು. ಎಂದಿನಿಂದಲೂ ಶಾಂತಿಪ್ರಿಯ ದೇಶವೆಂದೇ ಹೆಸರು ಪಡೆದಿರುವ ರಾಷ್ಟ್ರ ನಮ್ಮದು.

ಜಗತ್ತಿನ ಅನೇಕ ನಾಗರಿಕತೆಗಳು ಇನ್ನೂ ಕಣ್ಣು ಬಿಡದಿದ್ದಾಗ ಅದಾಗಲೇ 'ವಸುಧೈವ ಕುಟುಂಬಕಂ', 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಉದಾತ್ತ ಭಾವನೆಗಳನ್ನು ತನ್ನ ಚಿಂತನೆಯಲ್ಲಿ, ನಡೆ–ನುಡಿಯಲ್ಲಿ, ಸಂಸ್ಕೃತಿಯಲ್ಲಿ ಅಳವಡಿಸಿಕೊಂಡ ನಾಡು ಇದು. ಭೂಮಿಯ ಮೇಲೆ ಇರುವ ಸಮಸ್ತ ಜೀವಿಗಳ ಒಳಿತಿಗಾಗಿ ಪ್ರಾರ್ಥಿಸುತ್ತಿದ್ದ ಮಹಾನ್ ದೇಶ. 'ನನ್ನ ಧರ್ಮವೇ ಶ್ರೇಷ್ಠ' ಎಂದು ಎಂದೂ ಭಾವಿಸಲಿಲ್ಲ.

ಅಣುರೇಣು ತೃಣ ಕಾಷ್ಠಗಳಲ್ಲಿ ಭಗವಂತನ ಸಾನ್ನಿಧ್ಯವನ್ನು ಕಂಡ ಚಿಂತಕರು ನಮ್ಮ ಪೂರ್ವಿಕರು. ದೇವನೊಬ್ಬ, ನಾಮ ಹಲವು ಎಂಬ ಪರಿಪಕ್ವ ತಿಳುವಳಿಕೆ ಇದ್ದವರು ನಮ್ಮ ಹಿರಿಯರು. ಈ ಭೂಮಿಯ ಮೇಲೆ ಬದುಕಲು ನನಗೆ ಇರುವಷ್ಟೇ ಹಕ್ಕು ಪ್ರತೀ ಜೀವಿಗೂ ಇದೆ ಎಂದು ಭಾವಿಸಿದ ಉದಾತ್ತರು ಅವರು. ಒಳ್ಳೆಯ ವಿಚಾರಗಳು ಯಾವ ಧರ್ಮದಿಂದ ಬಂದರೂ ಅದನ್ನು ಮುಕ್ತವಾಗಿ ಸ್ವಾಗತಿಸುವ, ಸ್ವೀಕರಿಸುವ ಮನೋಭಾವ ಇದ್ದುದರಿಂದಲೇ ಭಾರತವು ಅನೇಕ ಧರ್ಮಗಳ ಆಡುಂಬೊಲ ಆಯಿತು.

ದೇವರನ್ನು ನಂಬಿದವರು, ನಂಬದವರು, ಹೊಸ ಹೊಸ ಧರ್ಮಗಳ ವಿಚಾರವನ್ನು ಸ್ವಾಗತಿಸಿದುದರಿಂದಲೇ ಅಷ್ಟೆಲ್ಲಾ ಧರ್ಮಗಳು ಈ ನೆಲದಲ್ಲಿ ತಳವೂರಲು ಸಾಧ್ಯವಾಯಿತು. ಶೈವರು ಶಿವನನ್ನು ಉಪಾಸಿಸಿದರೆ, ವೈಷ್ಣವರು ವಿಷ್ಣುವನ್ನು ಪೂಜಿಸಿದರು. ವೇದಾಂತಿಗಳು ಬ್ರಹ್ಮನನ್ನು ನಂಬಿದರು. ಬುದ್ಧನನ್ನು ಬೌದ್ಧರು ನಂಬಿದರೆ, ನೈಯಾಯಿಕರು ಕರ್ತನನ್ನು ಪ್ರಮಾಣವಾಗಿ ಸ್ವೀಕರಿಸಿದರು. ಜೈನರು ಅರ್ಹಂತನನ್ನು, ಮೀಮಾಂಸಕರು ಕರ್ಮ ಸಿದ್ಧಾಂತವನ್ನು ನಂಬಿದರು.

ಈ ಅರ್ಥವನ್ನು ಕೊಡುವ ಹೊಯ್ಸಳರ ಕಾಲದ ಶಾಸನ ಒಂದು ಬೇಲೂರಿನಲ್ಲಿ ಇದೆ. ಅವರವರಿಗೆ ಸರಿ ಎಂದು ತೋರಿದ ಧರ್ಮವನ್ನು ಸ್ವೀಕರಿಸಲು ಯಾವ ಅಡೆತಡೆಯನ್ನೂ ಒಡ್ಡಲಿಲ್ಲ ನಮ್ಮ ಪೂರ್ವಿಕರು. ಅವರವರ ಭಾವಕ್ಕೆ, ಅವರವರ ಭಕುತಿಗೆ ತಕ್ಕ ಮಾರ್ಗಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಇದ್ದ ನಾಡು ಇದು. ಇಲ್ಲಿ ಜ್ಞಾನ ಪಿಪಾಸುಗಳಿಗೆ ಕೊರತೆ ಇರಲಿಲ್ಲವಾದುದರಿಂದಲೇ ತಕ್ಷಶಿಲಾ, ನಳಂದಾ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಕಲಿಯಲು ಪ್ರಪಂಚದಾದ್ಯಂತ ಜ್ಞಾನದಾಹಿ ವಿದ್ಯಾರ್ಥಿಗಳು ಬರುತ್ತಿದ್ದುದು.

ಇದೆಲ್ಲವೂ ಏನನ್ನು ತೋರಿಸುತ್ತದೆ ಎಂದರೆ ಈ ಬದುಕಿನಲ್ಲಿ ಇರತಕ್ಕಂತಹ ಗುರಿಯ ಅರಿವಿಗೆ ಮತ್ತು ಅದರ ಸಾಧನೆಗೆ ಮಹತ್ವ ಕೊಟ್ಟ ನಾಡಿನಲ್ಲಿ ಮನುಷ್ಯ ಮನುಷ್ಯನನ್ನು ಕೊಲ್ಲುವ, ಹಿಂಸಿಸುವ ಕ್ಷುಲ್ಲಕ ಮನೋಭಾವಕ್ಕೆ ಎಡೆ ಇರಲು ಹೇಗೆ ತಾನೇ ಸಾಧ್ಯ ಎಂದು. 'ಜ್ಞಾನ ಒಂದೇ ಸಾಕು ಮುಕ್ತಿಗೆ, ಇನ್ನೇನು ಬೇಕು ಹುಚ್ಚು ಮರುಳೆ' ಎಂದರು ದಾಸವರೇಣ್ಯರು. ಅಂದರೆ ನಮ್ಮಲ್ಲಿ ಕ್ಷಾತ್ರ ಎಂಬುದು ಇರಲೇ ಇಲ್ಲವೇ ಎಂಬ ಅನುಮಾನ ಬರುವುದು ಸಹಜ. ಖಂಡಿತಾ ಅದು ಇತ್ತು . ನಮ್ಮ ಇರುವಿಕೆಗೇ ಕುತ್ತು ಬಂದಾಗ, ಆತ್ಮಾಭಿಮಾನಕ್ಕೆ ಹೊಡೆತ ಬಿದ್ದಾಗ, ಅನಿವಾರ್ಯ ಆದಾಗ ಮಾತ್ರ ಅದರ ಉಪಯೋಗ. ಅದು ಎಂದಿಗೂ ಹೇಡಿತನ ಅಲ್ಲ.

ಎಲ್ಲ ದಿಕ್ಕುಗಳಿಂದಲೂ ಜ್ಞಾನದ ಬೆಳಕನ್ನು ಸ್ವಾಗತಿಸಿದ ಮನಸ್ಸುಗಳು ನನ್ನ ಧರ್ಮವೇ ಶ್ರೇಷ್ಠ, ಅದನ್ನುಳಿದ ಮಿಕ್ಕೆಲ್ಲವೂ ಈ ಭೂಮಿಯ ಮೇಲೆ ಇರಲೇಬಾರದು ಎಂಬ ಚಿಂತನೆಯನ್ನು ಮಾಡಲಾದರೂ ಹೇಗೆ ಸಾಧ್ಯ? ಯಾವ ಧರ್ಮವೂ ಇತರರಿಗೆ ನೋವನ್ನು ಉಂಟು ಮಾಡು, ಕೊಲ್ಲು ಎಂದು ಕಲಿಸಲು ಸಾಧ್ಯವಿಲ್ಲ ಎಂಬ ನಂಬಿಕೆಯನ್ನು ನಮ್ಮ ಬಾಲ್ಯದಲ್ಲಿ ನಮ್ಮ ತಲೆಗಳಲ್ಲಿ ಗಟ್ಟಿಯಾಗಿ ಹಾಕಿದ್ದರು ಹಿರಿಯರು. ಬಹುಶಃ ಎಲ್ಲ ಧರ್ಮವನ್ನು ಗೌರವಿಸುವ ಮನೋಭಾವ ಬೆಳೆಯಲು ಇದೇ ಬುನಾದಿ ಎಂದರೂ ಅಡ್ಡಿಯಿಲ್ಲ. ಆದರೆ ಧರ್ಮದ ಹೆಸರಿನಲ್ಲಿ ಪ್ರಪಂಚದಾದ್ಯಂತ ಭಯೋತ್ಪಾದಕರನ್ನು ಹುಟ್ಟುಹಾಕಲು ಸಾಧ್ಯ ಎಂಬುದನ್ನು ನೋಡುತ್ತಿರುವುದು ನಮ್ಮ ದುರ್ವಿಧಿ ಎನ್ನದೆ ವಿಧಿಯಿಲ್ಲ.

> “ ತಮ್ಮ ದೇಶಕ್ಕಾಗಿ ಅವರ ಜೀವದ ಪರಿವೆಯನ್ನೂ ತೊರೆದು ಶತ್ರುವನ್ನು ಸದೆ ಬಡಿಯಲು ಹೋರಾಡುತ್ತಿರುವ ನಮ್ಮ ಭಾರತದ ಕೆಚ್ಚೆದೆಯ ಸೈನಿಕರಿಗೆ ನಮ್ಮೆಲ್ಲರ ಅತ್ಯಂತ ಗೌರವದ ನಮನಗಳು ಸದಾ ಸಲ್ಲುತ್ತವೆ. ಭಾರತದ ಉದ್ದಗಲಕ್ಕೂ ಯುದ್ಧೋನ್ಮಾದವೇ ತುಂಬಿದೆ ನಿಜ. ಆದರೆ, ನಿಜಕ್ಕೂ ವೈರಿಯ ಎದುರು ಎದೆ ಸೆಟೆಸಿ ನಿಲ್ಲುವವರು ನಮ್ಮ ಯೋಧರೇ ಹೊರತು, ಕುಳಿತಲ್ಲಿಂದಲೇ ಉದ್ವೇಗ, ಉನ್ಮಾದದ ಮಾತುಗಳನ್ನಾಡುತ್ತಿರುವ ನಾವು, ನೀವುಗಳಲ್ಲ. ಆ ವೀರ ಯೋಧರಿಗೆ ಶತ ಶತ ಪ್ರಣಾಮಗಳು.




ಇತರರ ಧರ್ಮಗಳನ್ನೂ ಗೌರವಿಸುವ ಮನೋಭಾವ ಒಂದು ಬಂದುಬಿಟ್ಟಿದ್ದರೆ, ಅದೆಷ್ಟು ಜೀವಗಳ ಬಲಿಯನ್ನು ತಡೆಯಬಹುದಾಗಿತ್ತೋ ಏನೋ. ತನ್ನಂತೆಯೇ ಇರುವ ಮತ್ತೊಬ್ಬ ಮನುಷ್ಯನನ್ನು ಬರ್ಬರವಾಗಿ ಕೊಲ್ಲುವ ಕ್ರೌರ್ಯವನ್ನು ತೋರಿದ ವ್ಯಕ್ತಿಗೆ ಮೇಲೆ ಅಥವಾ ಪರಲೋಕಕ್ಕೆ ಹೋದಾಗ ಸ್ವರ್ಗ ಸಿಗುವುದಾದರೂ ಹೇಗೆ ಎಂಬುದೇ ಅಚ್ಚರಿಯ ಪ್ರಶ್ನೆ. ಕತ್ತಿಯ ಮೊನಚನ್ನು ಕುತ್ತಿಗೆಗೆ ಹಿಡಿದು ಮತಾಂತರ ಮಾಡಿದಾಗ, ಆ ಮತಾಂತರಿಯಾದವನಿಗೆ ಆ ಧರ್ಮದ ಬಗೆಗೆ ಗೌರವ ಬಂದೀತು. ಮತ–ಧರ್ಮ ಎಂಬ ಅಫೀಮನ್ನು ಮಿತಿಮೀರಿ ಸೇವಿಸಿದವನಿಗೆ ಸ್ವಂತ ಆಲೋಚನೆಯ, ವಿಮರ್ಶಿಸುವ ಗುಣಗಳು ಕಾಣೆಯಾಗುತ್ತದೇನೋ. ಸರಿ–ತಪ್ಪುಗಳ ನಡುವಿನ ವ್ಯತ್ಯಾಸವನ್ನು ಬಹುಶಃ ಆತ ಕಾಣಲಾರ ಎಂದೆನಿಸುತ್ತದೆ. ಇಲ್ಲವಾದಲ್ಲಿ ತಾನು ನಿಂತ ನೆಲವನ್ನೇ ಸ್ಮಶಾನವನ್ನಾಗಿ ಮಾಡಲು ಹೊರಡುತ್ತಿದ್ದನೇ. ಈ ಭೂಮಿಯನ್ನು ಒಂದು ನರಕ ಮಾಡುತ್ತಿದ್ದನೇ ತನ್ನಂತೆಯೇ ಮತ್ತೊಬ್ಬನೂ ಎಂಬ ಪರಿಜ್ಞಾನ ಇಲ್ಲದಿದ್ದಾಗ, ಈಗ ನಡೆಯುತ್ತಿರುವ ಯುದ್ಧವೇ ಗತಿ ಎನ್ನಬೇಕಾಗುತ್ತದೆ.

ತಮ್ಮ ದೇಶಕ್ಕಾಗಿ ಅವರ ಜೀವದ ಪರಿವೆಯನ್ನೂ ತೊರೆದು ಶತ್ರುವನ್ನು ಸದೆ ಬಡಿಯಲು ಹೋರಾಡುತ್ತಿರುವ ನಮ್ಮ ಭಾರತದ ಕೆಚ್ಚೆದೆಯ ಸೈನಿಕರಿಗೆ ನಮ್ಮೆಲ್ಲರ ಅತ್ಯಂತ ಗೌರವದ ನಮನಗಳು ಸದಾ ಸಲ್ಲುತ್ತವೆ. ಭಾರತದ ಉದ್ದಗಲಕ್ಕೂ ಯುದ್ಧೋನ್ಮಾದವೇ ತುಂಬಿದೆ ನಿಜ. ಆದರೆ, ನಿಜಕ್ಕೂ ವೈರಿಯ ಎದುರು ಎದೆ ಸೆಟೆಸಿ ನಿಲ್ಲುವವರು ನಮ್ಮ ಯೋಧರೇ ಹೊರತು, ಕುಳಿತಲ್ಲಿಂದಲೇ ಉದ್ವೇಗ, ಉನ್ಮಾದದ ಮಾತುಗಳನ್ನಾಡುತ್ತಿರುವ ನಾವು, ನೀವುಗಳಲ್ಲ. ಆ ವೀರ ಯೋಧರಿಗೆ ಶತ ಶತ ಪ್ರಣಾಮಗಳು. ಅವರು ಜಯಶೀಲರಾಗಿ ಮರಳಲಿ ಎಂದು ಪ್ರತಿಯೊಬ್ಬರೂ ದೇವರ ಮುಂದೆ ಒಂದು ದೀಪವನ್ನು ಹಚ್ಚೋಣ. ಯುದ್ಧಭೂಮಿಗೆ, ತಾಯ್ನಾಡ ಸೇವೆಗೆ ತಮ್ಮ ಗಂಡಂದಿರನ್ನು, ಮಕ್ಕಳನ್ನು ಸಂತೋಷದಿಂದ ಕಳುಹಿಸುತ್ತಿರುವ ಮಾತೆಯರಿಗೆ ಶಿರಬಾಗಿ ವಂದಿಸಬೇಕು. ರಣಭೂಮಿಯಲ್ಲಿ ನಾವು ನಿಲ್ಲಲಾಗದಿದ್ದರೂ, ಕೊನೆಯ ಪಕ್ಷ ಅವರ ನೈತಿಕ ಸ್ಥೈರ್ಯಕ್ಕೆ ಬೆಂಬಲವಾಗಿ ಇರುವ. ನಮ್ಮ ದೇಶದ ಬೆನ್ನೆಲುಬಾಗಿರುವ ವೀರ ಸೈನಿಕರಿಗೆ ಅವಮಾನ ಮಾಡುವಂತಹ, ಅವರ ಮನೋಧೈರ್ಯವನ್ನು ಕುಗ್ಗಿಸುವಂತಹ ಹೇಳಿಕೆಗಳನ್ನು ನೀಡುವ ದೇಶದ್ರೋಹಿಗಳಾಗುವ ನೀಚತನಕ್ಕೆ ಒಳಗಾಗದಿರೋಣ. ಶತ್ರು ಪಕ್ಷದವರನ್ನು ನಮ್ಮ ಸಹೋದರರು ಎಂದು ಕರೆಯುವ ನೀಚತನ ನಮ್ಮದಾಗದಿರಲಿ. ಅವರು ಮಾಡಿದ ನರಮೇಧ ಏನೇನೂ ಅಲ್ಲ, ಅರಿಯದೆ ಮಾಡಿದ, ಅದು ತಪ್ಪೇ ಅಲ್ಲ ಎನ್ನುವವರ ನಾಲಿಗೆ ಸೀಳುವ ಕ್ಷಾತ್ರ ನಮ್ಮಲ್ಲಿ ಬರಲಿ.

ಇಡೀ ದೇಶದ ಜನ–ಮನ ಒಂದಾಗಿದೆ. ಈ ಐಕಮತ್ಯ ಸದಾ ನಮ್ಮನ್ನು ಒಂದಾಗಿಸಿರಲಿ.

ಭಾರತೀಯರು ನಾವು ಎಂದೆಂದು ಒಂದೇ
ಭಾವೈಕ್ಯದಲಿ ಕೂಡಿ ನಡೆಯುವೆವು ಮುಂದೆ
ನೂರು ಮತ ನಮಗಿರಲಿ, ನೂರು ಮಾತಾಗಿರಲಿ
ನಾಡಿನಾ ಜನಮನ ನಾವೆಲ್ಲ ಒಂದೆ
ನಾಡ ರಕ್ಷಣೆಗಾಗಿ ನಡೆಯುವೆವು ಮುಂದೆ

ನಿತ್ಯವೂ ದುಡಿಯುವ ಅಮ್ಮನಿಗೂ ಒಂದು ದಿನ...



ಮಿರ್ಲೆ ಚಂದ್ರಶೇಖರ
ಮೊ: 9916129654

ಜೀವನದಲ್ಲಿ ರಜೆಯನ್ನೇ ಪಡೆಯದೆ ಉಸಿರು ನಿಲ್ಲುವವರೆಗೂ ನಿರಂತರವಾಗಿ ದುಡಿಯುವ ಜೀವ ಒಂದನ್ನು ಎಲ್ಲಾ ಮಕ್ಕಳಿಗೂ ಆ ಭಗವಂತ ವರವಾಗಿ ಕರುಣಿಸಿದ, ಕರುಣಿಸಿ ಸುಮ್ಮನಾದನೆ ಇಲ್ಲ, ಹೇಳುತ್ತಾನೆ; 'ಮಕ್ಕಳೇ ನಿಮ್ಮ ಜೊತೆ ಸದಾ ನಾನು ಇರಲಾಗುವುದಿಲ್ಲ ನನ್ನ ಬದಲಾಗಿ ನಿಮ್ಮ ಕಷ್ಟ–ಸುಖಗಳನ್ನು ಜೊತೆಗಿದ್ದು ನೋಡಿಕೊಳ್ಳುವುದಕ್ಕಾಗಿ ತಾಯಿ ದೇವರನ್ನು ನೀಡಿದ್ದೇನೆ' ಎಂಬುದಾಗಿ. ವಿರಮಿಸದೆ ವಯೋನಿವೃತ್ತಿಯೂ ಆಗದೆ, ದುಡಿಮೆಗೆ ತಕ್ಕ ಫಲವೂ ಇಲ್ಲದೆ ನಮ್ಮನ್ನು ದೇವರಿಗೂ ಮಿಗಿಲಾಗಿ ರಕ್ಷಿಸುವ ತಾಯಿಯಲ್ಲಿ ನಾವು ದೇವರನ್ನು ಕಾಣುತ್ತೇವೆ. ಆ ದೇವರನ್ನು ವರ್ಷದಲ್ಲಿ ಒಂದು ದಿನವಾದರೂ ನೆನೆದು ಆಕೆಯನ್ನು ಗೌರವಿಸುವುದು ನಮ್ಮ ಕರ್ತವ್ಯ. ಭಾರತೀಯರಾದ ನಾವು ತಾಯಿಯನ್ನು ನಿತ್ಯವೂ ಪೂಜಿಸುತ್ತೇವೆ, ಆಕೆಯ ಆಶೀರ್ವಾದ ಇಲ್ಲದೆ ಏನನ್ನೂ ಮಾಡುವುದಿಲ್ಲ. ಆದರೆ ವಿಶ್ವದ ಇತರೆ ದೇಶಗಳಲ್ಲಿ ನಮ್ಮ ದೇಶದ ಸಂಸ್ಕೃತಿ ಹಾಗೆ ಇರುವುದಿಲ್ಲ, ಬಹಳಷ್ಟು ದೇಶಗಳಲ್ಲಿ ಎಲ್ಲವೂ ವ್ಯವಹಾರಿಕ ಆಗಿರುವುದರಿಂದ ಕುಟುಂಬದ ಪರಿಕಲ್ಪನೆ ಹಾಗೂ ರೀತಿರಿವಾಜುಗಳು ಭಾರತಕ್ಕೆ ಸರಿಸಾಟಿ ಆಗದು.

ಇದರ ಫಲವಾಗಿ ವಿದೇಶಗಳಲ್ಲಿ ಒಂದು ದಿನವಾದರೂ ಆ ಮಾತೆಯನ್ನು ಗೌರವಿಸಬೇಕೆಂಬ ಉದ್ದೇಶದಿಂದ ಹುಟ್ಟಿಕೊಂಡಿರುವುದೇ 'ತಾಯಂದಿರ ದಿನ' ಅನುಕರಣೆಯಲ್ಲಿ ನಾವು ಮುಂದೆ, ಜೊತೆಗೆ ತಾಯಿ ಎಂದರೆ ಎಲ್ಲಿಲ್ಲದ ಪ್ರೀತಿ, ನಿತ್ಯವೂ ಪೂಜಿಸಲ್ಪಡುತ್ತಿದ್ದರೂ ವಿಶೇಷವಾಗಿ ಆ ಒಂದು ದಿನವನ್ನು ಇಲ್ಲಿಯೂ ಆಚರಿಸಲಾಗುತ್ತಿದೆ.

ಅನ್ನಾ ಮಾರಿಯಾ ಜಾರ್ವಿಸ್(1864–1948)ರವರು ಸ್ಥಾಪಿಸಿದ ತಾಯಂದಿರ ದಿನವು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಪ್ರತೀ ವರ್ಷ ಮೇ ತಿಂಗಳ ಎರಡನೇ ಭಾನುವಾರದಂದು ಆಚರಿಸಲಾಗುವ ದಿನವಾಗಿದೆ. ಕೆಲವು ದೇಶಗಳಲ್ಲಿ ಬೇರೆಬೇರೆ ದಿನಗಳಂದು ಆಚರಿಸುವುದುಂಟು. ಹುಟ್ಟಿಗೆ ಕಾರಣಳಾಗಿ ಶಿಶು ಗರ್ಭ ಧರಿಸಿದ ದಿನದಿಂದ ಹೊರ ಜಗತ್ತಿಗೆ ಕಣ್ಣು ತೆರೆಯುವವರೆಗು ಮಾತೃತ್ವ ಪಡೆಯುವುದಕ್ಕಾಗಿ ಅನುಭವಿಸುವ ನೋವು ಹೇಳತೀರದು. ಪ್ರತಿಫಲವಾಗಿ ಅಮ್ಮನಿಗೆ ಕೃತಜ್ಞತೆ ಹೇಳಿದರೆ ಕಡಿಮೆ ಆದೀತು, ಅದಕ್ಕೂ ಮೇಲಿನ ಗೌರವ ಸಲ್ಲಿಸಲು ಗೊತ್ತುಪಡಿಸಿದ ದಿನವೇ 'ಅಂತರರಾಷ್ಟ್ರೀಯ ತಾಯಂದಿರ ದಿನ' ತಾಯಂದಿರ ದಿನವು ತಾಯಿ ಹಾಗೂ ಮಾತೃತ್ವದ ಬಂಧ, ಕುಟುಂಬ ಮತ್ತು ಸಮಾಜಕ್ಕೆ ನೀಡುವ ಸಕಾರಾತ್ಮಕ ಕೊಡುಗೆಯನ್ನು ಗುರುತಿಸಿ ಗೌರವಿಸಲಾಗುವ ಮಹತ್ತರವಾದ ದಿನ.

ಇಂದು ತಾಯಂದಿರ ದಿನ. ತನ್ನಿಮಿತ್ತ ಈ ಲೇಖನ

ಅನ್ನಾ ಜಾರ್ವಿಸ್ ತಾಯಿಯು ಆಗಾಗ್ಗೆ ತಾಯಂದಿರ ದಿನವನ್ನು ಆಚರಿಸುವ ಮೂಲಕ ಆ ದಿನ ರಜಾದಿನವನ್ನಾಗಿ ಘೋಷಿಸುವಂತೆ ತಮ್ಮ ಬಯಕೆಯನ್ನು ಮಗಳಿಗೆ ವ್ಯಕ್ತಪಡಿಸುತ್ತಿದ್ದರು. ತಾಯಿಯ ಮರಣದ ನಂತರ ಜಾರ್ವಿಸ್‌ರವರು ತಾಯಿಯ ಸ್ಮರಣಾರ್ಥ ಮದರ್ಸ್ ಡೇ ಆರಂಭಿಸಿ ಮುನ್ನಡೆಸಿದರು.

ಮೊದಲ ತಾಯಂದಿರ ದಿನವನ್ನು 10 ಮೇ 1908ರಂದು ಪಶ್ಚಿಮ ವರ್ಜೀನಿಯಾದ ಗ್ರಾಫ್ಟನ್‌ನಲ್ಲಿರುವ ಸೆಂಟ್ ಆಂಡ್ರ್ಯೂಸ್ ಮೆಥೋಡಿಸ್ಟ್ ಚರ್ಚ್‌ನಲ್ಲಿ ಪೂಜಾ ಸೇವೆಯ ಮೂಲಕ ಆಚರಿಸಲಾಯಿತು.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ತಾಯಂದಿರ ದಿನವು ತಂದೆಯ ದಿನ, ಒಡಹುಟ್ಟಿದವರ ದಿನ ಮತ್ತು ಅಜ್ಜಿಯರ ದಿನದಂತಹ ಕುಟುಂಬ ಸದಸ್ಯರನ್ನು ಗೌರವಿಸುವ ರೀತಿಯ ಆಚರಣೆಗಳಿಗೆ ಪೂರಕವಾಗಿದೆ. ತಾಯಂದಿರ ದಿನವೂ ಸರ್ಕಾರಿ ರಜಾದಿನ ಇರುವುದಿಲ್ಲ. ಏಕೆಂದರೆ, ಆಚರಿಸುತ್ತಿರುವುದು ಮೇ ಎರಡನೇ ಭಾನುವಾರ, ಅಂದು ಎಂದಿನಂತೆ ಸಾರ್ವಜನಿಕ ರಜಾದಿನ ಇರುತ್ತದೆ. ತಾಯಿಗೆ ಅವಳಿಗೆಂದು ಆ ದಿನವೂ ರಜೆ ಕೊಡುತ್ತಿಲ್ಲವೆನ್ನುವುದು ವಿಶೇಷ, ಆಚರಣೆಯ ದಿನಾಂಕ ಮಾತ್ರ ಹೆಚ್ಚುಕಡಿಮೆ ಆಗುವುದು.

> “ ತಾಯಂದಿರ ದಿನವನ್ನು ಒಂದು ದಿನ ಮಾತ್ರ ಆಚರಿಸಿ ಬಿಡುವುದಲ್ಲ. ರಜೆಗಳಿಲ್ಲದೆ ನಮ್ಮ ಸೇವೆಯೇ ದೇವರ ಸೇವೆಯಂತೆ ವಿರಮಿಸದೆ ದುಡಿದ ಮಹಾ ಮಾತೆಯನ್ನು ಇಳಿವಯಸ್ಸಿನಲ್ಲಿ ಮಕ್ಕಳಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ ಆಗಬೇಕು. ತಾಯಂದಿರ ದಿನವು ನಿತ್ಯೋತ್ಸವ ಆಗಬೇಕು. ಆಗಲೇ ತಾಯಿಯ ಋಣದಲ್ಲಿ ಅಣುವಿನಷ್ಟಾದರೂ ತೀರಿಸುವ ಅವಕಾಶ ನಮ್ಮದಾಗುವುದು.



ಅಮ್ಮಂದಿರ ದಿನವನ್ನು ಆಚರಿಸುವ ಬಗೆಯು ಹೀಗೂ ಇರುತ್ತದೆ; 'ವರ್ಷಕ್ಕೊಮ್ಮೆ ಕರೆತರುವೆವು ಅಮ್ಮನನ್ನು, ಆಚರಿಸಲು ತಾಯಂದಿರ ದಿನವನ್ನು, ಸಂಭ್ರಮಿಸಿ ಮೃಷ್ಟಾನ್ನಭೋಜನ ಸವಿದು ಮುಗಿಸಿದೆವು ಎಲ್ಲವನ್ನು, ಮರೆಯದೆ ಅಂದೇ ಬಿಟ್ಟು ಬರುವೆವು ವೃದ್ಧಾಶ್ರಮಕ್ಕೆ ಬಾಡುವ ಮುನ್ನ ಬಾಗಿಲಿಗೆ ಕಟ್ಟಿದ ತಳಿರುತೋರಣ!?.

ಸಮಾಜದಲ್ಲಿ ಅಮ್ಮನ ಕೈತುತ್ತು ತಿನ್ನದೆ ಬೆಳೆದ ದುರದೃಷ್ಟ ಮಕ್ಕಳೂ ಇದ್ದಾರೆ. ತಾಯಿ ಪ್ರೀತಿ ಏನೆಂಬುದನ್ನು ಅರಿಯದವರು ಇದ್ದಾರೆ. ಕೆಲವರು ಅಮ್ಮನಿದ್ದರೂ ಇಲ್ಲದಂತಿದ್ದಾರೆ. ತಾಯಿಯ ಪ್ರೀತಿಗಾಗಿ ಹಂಬಲಿಸುವ ಮಕ್ಕಳೂ ಇದ್ದಾರೆ. ಅಮ್ಮನ ಕರುಳಿನ ಪ್ರೀತಿಯು ಆಗಸ, ಸಾಗರಗಳಿಗಿಂತಲೂ ದೊಡ್ಡದು!, ಆಕೆಯ ಮಡಿಲು ಲಾಲಿ ಹಾಡುತ್ತಾ ತೂಗಿ ಮಲಗಿಸುವ ತೊಟ್ಟಿಲಿದ್ದಂತೆ, ಅಮ್ಮನ ಕೈತುತ್ತು ಅಮೃತವಿದ್ದಂತೆ, ಇವೆಲ್ಲವನ್ನು ಪಡೆದ ನಾವುಗಳೇ ಅದೃಷ್ಟವಂತರು!?.

ಅವಳಿಗೆ ಶಕ್ತಿ ಇರುವವರೆಗೂ ದೊಡ್ಡವರಾಗಿ ನಮಗೂ ಮಕ್ಕಳು–ಮರಿಗಳು ಆಗುವವರೆಗೂ ನಿತ್ಯವೂ ನಮ್ಮ ಸೇವೆಯಲ್ಲೇ ಸುಖ ಕಾಣುತ್ತಾಳೆ ಅಂತಹ ದೇವರನ್ನು ಅವಳ ದೇಹ ನಿತ್ರಾಣ ಗೊಂಡಾಗ ನಿರ್ಲಕ್ಷಿಸುತ್ತೇವೆ, ಬಾಂಧವ್ಯವನ್ನು ಮರೆತು ವೃದ್ಧಾಶ್ರಮಕ್ಕೆ ಬಿಟ್ಟು ಬರುವುದು ಉಚಿತವೇ.

ತಾಯಂದಿರ ದಿನವನ್ನು ಒಂದು ದಿನ ಮಾತ್ರ ಆಚರಿಸಿ ಬಿಡುವುದಲ್ಲ. ರಜೆಗಳಿಲ್ಲದೆ ನಮ್ಮ ಸೇವೆಯೇ ದೇವರ ಸೇವೆಯಂತೆ ವಿರಮಿಸದೆ ದುಡಿದ ಮಹಾಮಾತೆಯನ್ನು ಇಳಿವಯಸ್ಸಿನಲ್ಲಿ ಮಕ್ಕಳಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ ಆಗಬೇಕು. ತಾಯಂದಿರ ದಿನವು ನಿತ್ಯೋತ್ಸವ ಆಗಬೇಕು ಆಗಲೇ ತಾಯಿಯ ಋಣದಲ್ಲಿ ಅಣುವಿನಷ್ಟಾದರೂ ತೀರಿಸುವ ಅವಕಾಶ ನಮ್ಮದಾಗುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೆರಗುಗೊಳಿಸಿದ ವಿಂಟೇಜ್ ಕಾರುಗಳ ಸೊಗಸು

● ಅದ್ವೈತ್ ಹ್ಯೂಂಡಾಯ್‌ನಿಂದ ಆಯೋಜಿಸಿದ್ದ ಪ್ರದರ್ಶನ ● ಗತಕಾಲದ ಕಾರುಗಳ ವೈಶಿಷ್ಟ್ಯ ಅನಾವರಣ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಅದ್ವೈತ್ ಹ್ಯೂಂಡಾಯ್ ಶೋ ರೂಮ್ ಆವರಣದಲ್ಲಿ ಶನಿವಾರ ವಿಂಟೇಜ್ ಕಾರುಗಳ ಪ್ರದರ್ಶನ ನಡೆಯಿತು. ಚಿತ್ರದಲ್ಲಿ (ಎಡದಿಂದ) ಅದ್ವೈತ್ ಹ್ಯೂಂಡಾಯ್ ಶೋ ರೂಮ್‌ನ ಹಿರಿಯ ಪ್ರಧಾನ ವ್ಯವಸ್ಥಾಪಕ ಗೌತಮ್, ಮೈಸೂರು ಶೋ ರೂಮ್‌ನ ಮಾರಾಟ ವಿಭಾಗದ ಪ್ರಧಾನ ವ್ಯವಸ್ಥಾಪಕ ಪ್ರಮೋದ್, ಕೆವಿಸಿಸಿಸಿ ಗೌರವ ಕಾರ್ಯದರ್ಶಿ ಟಿ.ಆರ್.ರಘುನಂದನ್, ಕೆವಿಸಿಸಿಸಿ ಉಪಾಧ್ಯಕ್ಷ ಪಿ.ಎ.ಸುರೇಶ್, ಅದ್ವೈತ್ ಹ್ಯೂಂಡಾಯ್ ಶೋ ರೂಮ್‌ನ ಮಾರ್ಕೇಟಿಂಗ್ ಮುಖ್ಯಸ್ಥ ವಿನಯ್ ಗಪ್ಪಣ್ಣ, ಮೈಸೂರು ಶೋ ರೂಮ್‌ನ ಸರ್ವೀಸ್ ವಿಭಾಗದ ಪ್ರಧಾನ ವ್ಯವಸ್ಥಾಪಕ ದಿವಾಕರ್ ಬಾಬು ಅವರಿದ್ದಾರೆ.

ಮೈಸೂರು,ಮೇ 10(ಪಿಎಂ)– ಕಣ್ಮನ ಸೆಳೆದ ಗತಕಾಲದ ಕಾರುಗಳು. ಹೌದು, ವಿಂಟೇಜ್ ಕಾರುಗಳ ಸೊಗಸು ಸೋಜಿಗ ಮೂಡಿಸಿತು. 1934ರಿಂದ 1975ರವರೆಗಿನ ವಿವಿಧ ಮಾಡೆಲ್‌ಗಳ ವಿಂಟೇಜ್ ಕಾರುಗಳು ಶನಿವಾರ ಮೈಸೂರಿನ ವಿವಿಧ ರಸ್ತೆಗಳಲ್ಲಿ ಸಂಚರಿಸಿದ್ದಲ್ಲದೆ, ಜೆಎಲ್‌ಬಿ ರಸ್ತೆಯಲ್ಲಿರುವ ಅದ್ವೈತ್ ಹ್ಯೂಂಡಾಯ್ ಶೋ ರೂಮ್ ಆವರಣದಲ್ಲಿ ನಿಲುಗಡೆಗೊಳ್ಳುವ ಮೂಲಕ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗಿ, ಅವರಲ್ಲಿ ವಿಂಟೇಜ್ ಕಾರುಗಳ ವೈಶಿಷ್ಟ್ಯಗಳು ಕೌತುಕ ಮೂಡಿಸಿದವು.

ಅದ್ವೈತ್ ಹ್ಯೂಂಡಾಯ್ ವತಿಯಿಂದ ಹಮ್ಮಿಕೊಂಡಿದ್ದ ವಿಂಟೇಜ್ ಕಾರುಗಳ ಪ್ರದರ್ಶನದಲ್ಲಿ ಹೀಗೆ ಅವುಗಳ ಅಂದ ಚಂದ ನೋಡಿ ನೋಡುಗರು ಪುಳಕಗೊಂಡರು. ಅಂದಿನ ಕಾರುಗಳ ವಿನ್ಯಾಸ–ವಿಶಿಷ್ಟತೆ ಕಂಡ ವೀಕ್ಷಕರು, ಅವುಗಳೊಂದಿಗೆ ಸೆಲ್ಫಿ ಹಾಗೂ ಫೋಟೋ ತೆಗೆದುಕೊಂಡು ಸಂಭ್ರಮಿಸಿದರು. ಇಟಲಿ, ಅಮೇರಿಕ, ಜರ್ಮನ್, ಇಂಗ್ಲೆಂಡ್ ಮಾತ್ರವಲ್ಲದೆ, ಭಾರತದಲ್ಲೂ ಅಂದು ತಯಾರಾದ ಕಾರುಗಳು ಪ್ರದರ್ಶನದಲ್ಲಿದ್ದವು.

ಅದ್ವೈತ್ ಹ್ಯೂಂಡಾಯ್, ದಿ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್ ಹಾಗೂ ಪಯಣ ಕಾರ್ ಮ್ಯೂಸಿಯಂ ಸಂಯುಕ್ತಾಶ್ರಯದ ಪ್ರಾಯೋಜಕತ್ವದಡಿ ಬೆಂಗಳೂರಿನ ಕರ್ನಾಟಕ ವಿಂಟೇಜ್ ಅಂಡ್ ಕ್ಲಾಸಿಕ್ ಕಾರ್ ಕ್ಲಬ್‌ನಿಂದ (ಕೆವಿಸಿಸಿಸಿ) ಬೆಂಗಳೂರಿನಿಂದ ಮೈಸೂರಿಗೆ ವಿಂಟೇಜ್ ಕಾರುಗಳ ಪ್ರಯಾಣ ಕಾರ್ಯಕ್ರಮ ಆಯೋಜಿಸಿದ್ದು, ಇದರ ಪ್ರಯುಕ್ತ ನಡೆದ ಪ್ರದರ್ಶನದಲ್ಲಿ 28 ವಿಂಟೇಜ್ ಕಾರುಗಳು ನೋಡುಗರ ಗಮನ ಸೆಳೆದವು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕೆವಿಸಿಸಿಸಿ ಉಪಾಧ್ಯಕ್ಷ ಪಿ.ಎ.ಸುರೇಶ್, ಅದ್ವೈತ್ ಹ್ಯೂಂಡಾಯ್‌ನಿಂದ ನಮ್ಮ ಪ್ರತಿಯೊಂದು ಕಾರ್ಯಕ್ರಮಕ್ಕೆ ಪ್ರಾಯೋಜಕತ್ವ ದೊರೆಯುತ್ತಿದೆ. ಅದ್ವೈತ್ ಹ್ಯೂಂಡಾಯ್ ಮಾಲೀಕರ ಬಳಿಯೂ ಸಾಕಷ್ಟು ವಿಂಟೇಜ್ ಕಾರುಗಳಿವೆ. ಆ ಪೈಕಿ ಎರಡು ಕಾರುಗಳು ಇಂದಿನ ಪ್ರದರ್ಶನದಲ್ಲಿವೆ. ಈ ಹಳೇ ಕಾರುಗಳಿಗೆ ತನ್ನದೇ ಆದ ಮೌಲ್ಯವಿದೆ. ಸಾಕಷ್ಟು ಜನ ತಮ್ಮ ಹಳೇ ಕಾರುಗಳನ್ನು ಮನೆಯಲ್ಲಿ ನಿಲ್ಲಿಸಿ, ಕೊನೆಗೆ ಗುಜರಿಗೆ ಕೊಡುತ್ತಾರೆ. ಆ ರೀತಿ ಮಾಡದೇ ಅವುಗಳನ್ನು ದುರಸ್ತಿಗೊಳಿಸಿ ಸಂರಕ್ಷಿಸಿಡಬೇಕು. ನಮ್ಮ ಸಂಘಟನೆ ಈ ಸಂದೇಶ ನೀಡುವ ದೃಷ್ಟಿಯಲ್ಲಿಯೂ ಈ ಪ್ರವಾಸ ಹಮ್ಮಿಕೊಂಡಿದೆ ಎಂದು ಹೇಳಿದರು.

ಕೆವಿಸಿಸಿಸಿ ಗೌರವ ಕಾರ್ಯದರ್ಶಿ ಟಿ.ಆರ್.ರಘುನಂದನ್ ಮಾತನಾಡಿ, ನಮ್ಮ ಸಂಘಟನೆಯಲ್ಲಿ 300 ಮಂದಿ ಸದಸ್ಯರು ಇದ್ದು, 1500ಕ್ಕೂ ಹೆಚ್ಚು ಹಳೇ ಕಾರುಗಳ ಸಂಗ್ರಹ ಇದೆ. ನಾವು ವಿಂಟೇಜ್ ಕಾರುಗಳ ಸಂಗ್ರಹದ ಹವ್ಯಾಸ ಉತ್ತೇಜಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇಲ್ಲಿ ಬಂದಿರುವ ಅತೀ ಹಳೆ ಕಾರು ಎಂದರೆ 1939ರ ಆಸ್ಟಿನ್–10 ಆಗಿದೆ ಎಲ್ಲವೂ 50 ವರ್ಷಕ್ಕಿಂತ ಹಳೇ ಕಾರುಗಳು ಎಂದು ತಿಳಿಸಿದರು. ಅದ್ವೈತ್ ಹ್ಯೂಂಡಾಯ್ ಶೋ ರೂಮ್‌ನ ಹಿರಿಯ ಪ್ರಧಾನ ವ್ಯವಸ್ಥಾಪಕ ಗೌತಮ್, ಮಾರ್ಕೇಟಿಂಗ್ ಮುಖ್ಯಸ್ಥ ವಿನಯ್ ಗಪ್ಪಣ್ಣ, ಮೈಸೂರು ಶೋ ರೂಮ್‌ನ ಮಾರಾಟ ವಿಭಾಗದ ಪ್ರಧಾನ ವ್ಯವಸ್ಥಾಪಕ ಪ್ರಮೋದ್, ಸರ್ವೀಸ್ ವಿಭಾಗದ ಪ್ರಧಾನ ವ್ಯವಸ್ಥಾಪಕ ದಿವಾಕರ್ ಬಾಬು ಮತ್ತಿತರರು ಹಾಜರಿದ್ದರು.

ಆಕರ್ಷಿಸಿದ ಅದ್ವೈತ್ ಹ್ಯೂಂಡಾಯ್ ಮಾಲೀಕರ 2 ವಿಂಟೇಜ್ ಕಾರು...

ಅದ್ವೈತ್ ಹ್ಯೂಂಡಾಯ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮಾಲೀಕರೂ ಆದ ಡಾ.ಎಸ್.ವಿ.ಎಸ್.ಸುಬ್ರಹ್ಮಣ್ಯ ಗುಪ್ತಾ ಅವರ 2 ವಿಂಟೇಜ್ ಕಾರುಗಳ ಸಹ ಪ್ರದರ್ಶನದಲ್ಲಿ ಆಕರ್ಷಿಸಿದವು. 1938ರ ಮಾಡೆಲ್ ಆದ ಚೆವ್ರೊಲೆಟ್ ಮಾಸ್ಟರ್ ಡಿಲಕ್ಸ್ ಎಂಬ ಕೆಂಪು ವರ್ಣದ ಕಾರು ನೋಡುಗರನ್ನು ಆಕರ್ಷಿಸಿತು. ಜೊತೆಗೆ ಅವರದ್ದೇ ಮಾಲೀಕತ್ವದ ಮತ್ತೊಂದು ಕಾರು 'ಡಾಡ್ಜ್' ಎಂಬ 1955ರ ಕಾರು ಸಹ ಗಮನ ಸೆಳೆಯಿತು. ಈ ಎರಡೂ ಅಮೆರಿಕನ್ ಮೂಲದ ಕಂಪನಿಗಳಿಂದ ತಯಾರಾಗಿರುವ ಕಾರುಗಳಾಗಿವೆ.

ಗಮನ ಸೆಳೆದ ಮಾರಿಸ್ ವುಡಿ...

ಪ್ರದರ್ಶನದಲ್ಲಿ 1958ರ ಮಾಡೆಲ್ ಮಾರಿಸ್ ವುಡಿ ಕಾರು ಸಹ ಗಮನ ಸೆಳೆಯಿತು. ಈ ಬಗ್ಗೆ ಮಾಹಿತಿ ನೀಡಿದ ಕಾರಿನ ಮಾಲೀಕರೂ ಆದ ಕೆವಿಸಿಸಿಸಿ ಉಪಾಧ್ಯಕ್ಷ ಪಿ.ಎ.ಸುರೇಶ್, ಇದು ಇಂಗ್ಲೆಂಡ್ ಮೇಡ್ ಕಾರು. ಮರದ ಬಳಕೆ ಹೆಚ್ಚಿರುವುದು ಇದರ ವಿಶೇಷತೆ. ಹೀಗಾಗಿ ಇದನ್ನು ವುಡಿ ಎಂದೇ ಕರೆಯಲಾಗುತ್ತದೆ. ಈ ಕಾರಿನಲ್ಲಿ ನಾನು ಆಲ್ ಇಂಡಿಯಾ ಟೂರ್ ಸಹ ಮಾಡಿದ್ದೇನೆ. ಇದರ ಕೀ ಕಳೆದು ಹೋದರೆ ಮಾರೀಸ್ ಕಂಪನಿಗೆ ಕೀ ಮೇಲಿರುವ ನಂಬರ್ ಕಳುಹಿಸಿದರೆ ಮತ್ತೊಂದು ಕೀ ಕಳುಹಿಸುತ್ತಾರೆ. ಅಷ್ಟು ರೇಕಾರ್ಡ್ ನಿರ್ವಹಣೆ ಮಾಡುತ್ತಾರೆ. ನನ್ನ ಅಂದಾಜಿನ ಪ್ರಕಾರ ಈ ನನ್ನ ಕಾರು 18ರಿಂದ 20 ಕಿಮೀ ಮೈಲೇಜ್ ಕೊಡುತ್ತದೆ ಎಂದು ಹೇಳಿದರು.

ಇಂದು ಬೆಂಗಳೂರಿಗೆ ವಾಪಸ್...

ಬೆಂಗಳೂರಿನಿಂದ ಶುಕ್ರವಾರ ಮೈಸೂರಿಗೆ ವಿಂಟೇಜ್ ಕಾರುಗಳಲ್ಲಿ ಆಗಮಿಸಿದ ಕೆವಿಸಿಸಿಸಿ ಪದಾಧಿಕಾರಿಗಳು ಹಾಗೂ ಸದಸ್ಯರು, ಶನಿವಾರ ಬೆಳಗ್ಗೆ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ವಿಂಟೇಜ್ ಕಾರುಗಳನ್ನು ಪ್ರದರ್ಶಿಸಿದರು. ಪ್ರವಾಸಿಗರು, ನಾಗರಿಕರು ಅವುಗಳನ್ನು ಕಂಡು ಸಂಭ್ರಮಿಸಿದರು. ಕಾರುಗಳೊಂದಿಗೆ ಮೈಸೂರಿನಲ್ಲಿ ವಾಸ್ತವ್ಯ ಹೂಡಿರುವ ಕೆವಿಸಿಸಿಸಿ ಪದಾಧಿಕಾರಿಗಳು, ಸದಸ್ಯರು, ಭಾನುವಾರ ತಮ್ಮ ಕಾರುಗಳೊಂದಿಗೆ ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ.





ವಿಂಟೇಜ್ ಕಾರುಗಳನ್ನು ವೀಕ್ಷಿಸುತ್ತಿರುವ ಸಾರ್ವಜನಿಕರು. ಮತ್ತೊಂದು ಚಿತ್ರದಲ್ಲಿ ವಿಂಟೇಜ್ ಕಾರುಗಳ ಪ್ರದರ್ಶನದಲ್ಲಿ ಕೆವಿಸಿಸಿಸಿ ಉಪಾಧ್ಯಕ್ಷ ಪಿ.ಎ.ಸುರೇಶ್, ತಮ್ಮ 1958ರ ಮಾಡೆಲ್ ಮಾರಿಸ್ ವುಡಿ ಕಾರಿನ ಜೊತೆಯಲ್ಲಿರುವುದು ಕಾಣಬಹುದು.

ಗೋಕುಲಂನಲ್ಲಿ ಹಾಲಿನ ಬೂತ್ ವಿರೋಧಿಸಿ ನಿವಾಸಿಗಳ ಪ್ರತಿಭಟನೆ



ಮೈಸೂರು, ಮೇ 10(ಆರ್‌ಕೆ)– ಮೈಸೂರಿನ ಗೋಕುಲಂನ ಡಾಕ್ಟರ್ಸ್ ಕಾಲೋನಿ ಬಳಿ ಮುಡಾ ಮೈದಾನದಲ್ಲಿ ಹಾಲಿನ ಬೂತ್ ಸ್ಥಾಪಿಸಲು ನಿವಾಸಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಮೈಸೂರು ಒನ್ ಕಚೇರಿ ಕಾರ್ಯನಿರ್ವಹಿಸುತ್ತಿರುವ ಆಟದ ಮೈದಾನದಲ್ಲಿ ಕಳೆದ 15 ದಿನಗಳ ಹಿಂದೆ ರಸ್ತೆಗಭಿಮುಖವಾಗಿ ಹಾಲಿನ ಬೂತ್ ಸ್ಥಾಪಿಸಲು ಪೆಟ್ಟಿಗೆಯೊಂದನ್ನು ಅಳವಡಿಸಲಾಗಿತ್ತು. ಇದನ್ನು ವಿರೋಧಿಸಿ ಸುತ್ತಲಿನ ನಿವಾಸಿಗಳು ಇಂದು ಪೆಟ್ಟಿಗೆ ಬಳಿ ಜಮಾಯಿಸಿ ಹಾಲಿನ ಬೂತ್ ತೆರೆಯಲು ಅವಕಾಶ ನೀಡುವುದಿಲ್ಲ ಎಂದು ಪ್ರತಿಭಟನೆ ನಡೆಸಿದರು.

ಮೈದಾನವು ಆಟದ ಉದ್ದೇಶಕ್ಕೆ ಮಾತ್ರ ಮೀಸಲಾಗಿದ್ದು, ಈಗಲೂ ಅಲ್ಲಿ ಕ್ರಿಕೆಟ್, ಖೋಖೋ ಮುಂತಾದ ಆಟಗಳ ತಾಲೀಮು ನಡೆಯುತ್ತದೆ. ಅಲ್ಲಿ ಒಂದು ಅಂಗಡಿ ಬಂದಲ್ಲಿ ಮೈದಾನದ ಸುತ್ತ ಹಲವು ಅಂಗಡಿ–ಮುಂಗಟ್ಟು ಆರಂಭವಾಗುತ್ತವೆ. ಆದ್ದರಿಂದ ಹಾಲಿನ ಬೂತ್ ತೆರೆಯಲು ಅನುಮತಿ ನೀಡಬಾರದು ಎಂದು ಪ್ರತಿಭಟನಾನಿರತರು ಎಚ್ಚರಿಸಿದರು.

ಕುಕ್ಕಲೂರು ಭದ್ರಕಾಳಿ ದೇವರ ಹಬ್ಬ

ವಿರಾಜಪೇಟೆ, ಮೇ 10– ಕುಂದ ಕುಕ್ಕಲೂರು ಶ್ರೀ ಮೂಲ ಭದ್ರಕಾಳಿ ದೇವರ ಹಬ್ಬವೂ ಇದೇ ತಿಂಗಳು ಮೇ 24, 25 ಮತ್ತು 26 ರಂದು ಕುಕ್ಕಲೂರು ಗ್ರಾಮದಲ್ಲಿ ಜರುಗಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಆಶೀರ್ವಾದ ಪಡೆದುಕೊಳ್ಳಬೇಕೆಂದು ಕುಟ್ಟಂಡ ರವಿ ಮುದ್ದಪ್ಪನವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೊಬೈಲ್ : 74113–27963.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ, ಮೈಸೂರು
ದೂರವಾಣಿ ಸಂಖ್ಯೆ: 08223–262824
ಇ–ಮೇಲ್: eokrntp@gmail.com
ಸಂಖ್ಯೆ: ತಾಪಂಕೃ/ಹೊ.ನೌ/ಇ–ಟೆಂಡರ್/ಲೆ.ಪ.ಶಾ–1/2025–26/126
ದಿನಾಂಕ :05/05/2025

:ಇ–ಟೆಂಡರ್ ಪ್ರಕಟಣೆ: 2ನೇ ಕರೆ

ಈ ಕಛೇರಿಯ ಇ–ಟೆಂಡರ್ ಅಪ್‌ಲೋಡ್ ಸಂಖ್ಯೆ : RDPR 2025-26/SE2509 ದಿನಾಂಕ:06.05.2025
2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ **ಕಂಪ್ಯೂಟರ್ ಆಪರೇಟರ್, ವಾಹನ ಚಾಲಕ** ಮತ್ತು **'ಡಿ' ಗ್ರೂಪ್ ಹುದ್ದೆಗಳ** ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್ ಫಾರಂಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ್ ಪುಸ್ತಕವನ್ನು **19.05.2025** ಸಂಜೆ 4.30 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ಇ–ಪೋರ್ಟಲ್ ನಿಗದಿಪಡಿಸಿದ ಶುಲ್ಕದೊಂದಿಗೆ ಭರ್ತಿ ಮಾಡಿ ಟೆಂಡರ್ ಫಾರಂಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ವೇಳೆಯಲ್ಲಿ ಕೆಲಸದ ದಿನಗಳಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೆ.ಆರ್.ನಗರ
DIPR/DDMYS/158/KSMCA/132/2025-26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಚಾಮರಾಜನಗರ ವಿಭಾಗ: ಚಾಮರಾಜನಗರ
ಸಂ: ಕರಾಸಾ/ಚಾನವಿ/ಸಂ/ವಾಣಿಜ್ಯ/190/2025–26 ದಿನಾಂಕ: 08.05.2025

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 01/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ನಗರಸಭೆಯ ಕೊಳ್ಳೇಗಾಲ ಕ.ರಾ.ರ.ಸಾ.ನಿಗಮ ಬಸ್ ನಿಲ್ದಾಣದ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆಯಲ್ಲಿ ವಾಣಿಜ್ಯ ವ್ಯವಹಾರ ನಡೆಸಲು ಆಸಕ್ತ ಅರ್ಜಿದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡುವ ಸಲುವಾಗಿ ಮತ್ತು ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಆಸಕ್ತ ಅರ್ಜಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್/ಸಂಧಾನ ಪ್ರಕಟಣೆ ಸಂ.01/2025–26 ದಿನಾಂಕ: 08.05.2025 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು(05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು(03) ವರ್ಷಗಳ ಅವಧಿಗೆ, ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್/ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1. ಸಂಧಾನದ ಅರ್ಜಿ ಪಡೆಯಲು ಕೊನೆಯ ದಿನಾಂಕ: **30.05.2025 ಮಧ್ಯಾಹ್ನ ಸಮಯ: 01.00 ಗಂಟೆವರೆಗೆ.** 2. ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸಲ್ಲಿಸಲು ಕೊನೆಯ ದಿನಾಂಕ: **02.06.2025. ಸಮಯ: 16.00 ಗಂಟೆವರೆಗೆ.** 3. ಸಂಧಾನ ಸಭೆಯ ದಿನಾಂಕ: **04.06.2025 ಸಮಯ: 12.30 ಗಂಟೆಯಿಂದ.** 4. ಇ–ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ: **28.05.2025 ಸಮಯ: 16.00 ಗಂಟೆವರೆಗೆ.** 5. ಇ–ಟೆಂಡರ್‌ಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.05.2025 ಸಮಯ: 16.00 ಗಂಟೆವರೆಗೆ.** 6. ಅರ್ಜಿದಾರರು ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಮೂಲ ಇ.ಎಂ.ಡಿ, ಡಿ.ಡಿ ಮತ್ತು ಇತರೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.06.2025 ಸಮಯ: 16.00 ಗಂಟೆವರೆಗೆ.** 7. ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02.06.2025 ಸಮಯ: 16.30 ಗಂಟೆಗೆ.** 8. ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **04.06.2025 ಸಮಯ: ಬೆಳಗ್ಗೆ 11.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ) ರವರನ್ನು ಸಂಪರ್ಕಿಸಲು ಕೋರಲಾಗಿದೆ. **(ದೂ:–7760990302, 7760990311, 8123714362).**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾನಿಗಮ, ಚಾಮರಾಜನಗರ ವಿಭಾಗ.
DIPR/CP/599/MAA/25-26

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ಸಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26/SE3479	ಒಕ್ಕೂಟದ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರ ಮಿಶ್ರತಳಿ ಹಸುಗಳು/ಹಸುಗಳು/ಸ್ಥಳೀಯ ಹಸುಗಳು/ಎಮ್ಮೆಗಳಿಗೆ (ಅಂದಾಜು 30000 ಹೈನುರಾಸುಗಳಿಗೆ) ಗುಂಪು ವಿಮಾ ಯೋಜನೆಯಡಿ 2 ವರ್ಷದ ಅವಧಿಗೆ ವಿಮೆ ಮಾಡಿಸುವ ಸಂಬಂಧ.	17.05.2025 ಸಂಜೆ 5.00 ಗಂಟೆಯವರೆಗೆ
2	KMF/2025-26/IND1405	ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಟಿ ನರಸಿಪುರ ತಾಲ್ಲೂಕಿನಲ್ಲಿ ವಾಕ್ ಇನ್ ಕೋಲ್ಡ್ ಸ್ಟೋರೇಜ್ ಅನ್ನು ಪೂರೈಕೆ, ಸರಬರಾಜು ಮತ್ತು ಅಳವಡಿಕೆ ಮಾಡುವ ಬಗ್ಗೆ ಹಾಗೂ ಸಕ್ಕರೆಯನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ.	17.05.2025 ಸಂಜೆ 5.00 ಗಂಟೆಯವರೆಗೆ
3	KMF/2025-26/IND1406	ಒಕ್ಕೂಟಕ್ಕೆ ಅಗತ್ಯವಿರುವ ಚಾಫ್ ಕಟ್ಟರ್ ಅನ್ನು ಖರೀದಿಸುವ ಬಗ್ಗೆ.	17.05.2025 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,948231739) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಆಪರೇಷನ್ ಸಿಂಧೂರ: ಇಂದು ಕೆಆರ್‌ಎಸ್‌ನಲ್ಲಿ ಮಾಕ್ ಡ್ರಿಲ್

ಕೆಆರ್‌ಎಸ್‌ನಲ್ಲಿ ನಡೆದಿದೆ ಪೂರ್ವಭಾವಿ ಸಿದ್ಧತೆ



ಕೆಆರ್‌ಎಸ್‌ನಲ್ಲಿ ಮಾಕ್ ಡ್ರಿಲ್‌ಗಾಗಿ ಪೂರ್ವಭಾವಿ ಸಿದ್ಧತೆ ನಡೆಸುತ್ತಿರುವುದು.

ಶ್ರೀರಂಗಪಟ್ಟಣ: ಪಾಕಿಸ್ತಾನದ ಮೇಲೆ ನಡೆಯುತ್ತಿರುವ ಆಪರೇಷನ್ ಸಿಂಧೂರ ಹಿನ್ನೆಲೆಯಲ್ಲಿ ಅಣೆಕಟ್ಟೆ ರಕ್ಷಣೆ ಕುರಿತಂತೆ ಆಪರೇಷನ್ ಅಭ್ಯಾಸದ ಅಣಕು ಪ್ರದರ್ಶನಕ್ಕೆ ಕೆಆರ್‌ಎಸ್ ಬೃಂದಾವನ ಉದ್ಯಾನವನದಲ್ಲಿ ಪೂರ್ವಭಾವಿ ಸಿದ್ಧತಾ ಕಾರ್ಯ ನಡೆದಿದೆ.

ತಾಲೂಕಿನ ಪ್ರಸಿದ್ಧ ಕೆಆರ್‌ಎಸ್ ಬೃಂದಾವನದಲ್ಲಿರುವ ವಿಶಾಲ ಉದ್ಯಾನವನದಲ್ಲಿ ಮೇ 11 ರಂದು ಸಂಜೆ 4 ಗಂಟೆಯಿಂದ 7 ಗಂಟೆಯವರೆಗೆ ಆಪರೇಷನ್ ಸಿಂಧೂರ ಕುರಿತಾಗಿ ಸ್ಥಳೀಯ ಅಧಿಕಾರಿ ವರ್ಗ ಸೇರಿದಂತೆ ಸಾರ್ವಜನಿಕರು, ಪ್ರವಾಸಿಗರು, ವಿದ್ಯಾರ್ಥಿಗಳು ಈ ಮಾಕ್ ಡ್ರಿಲ್ ಅಭ್ಯಾಸದ ಮೂಲಕ ಅಣಕು ಪ್ರದರ್ಶನ ಮಾಡಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತುರ್ತು ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಸಾರ್ವಜನಿಕರು, ಪ್ರವಾಸಿಗರು, ಅಣೆಕಟ್ಟು ರಕ್ಷಣೆ ಮಾಡುವ ಕುರಿತಂತೆ ಆಪರೇಷನ್ ಅಭ್ಯಾಸದ ಅಣಕು ಪ್ರದರ್ಶನದ ಮೂಲಕ ಅಭ್ಯಾಸ ಮಾಡಿದರೆ ಯುದ್ಧ ಸಂದರ್ಭದಲ್ಲಿ ಎಲ್ಲರೂ ಆತಂಕ ಪಡದೆ ತಾವೂ ಭಾಗವಹಿಸಿ ಯುದ್ಧ ಭೀತಿ ಇಲ್ಲದೆ ಕೆಲಸ ನಿರ್ವಹಿಸಬಹುದಾಗಿರುತ್ತದೆ. ಬೆಂಕಿ ಅನಾಹುತಗಳು, ಅವಘಡ, ತುರ್ತು ಸಂದರ್ಭದಲ್ಲಿ ಜನರು ಗಾಬರಿ ಅಥವಾ ಆತಂಕಕ್ಕೆ ಒಳಗಾಗದಂತೆ ಆತ್ಮವಿಶ್ವಾಸ ತುಂಬಿ, ಅರಿವು ಮೂಡಿಸುವ ಉದ್ದೇಶದಿಂದ ಈ ಅಣಕು ಪ್ರದರ್ಶನದ ಕಾರ್ಯಕ್ರಮ ಆಯೋಜಿಸಲಾಗಿದೆ ಅಣಕು ಕಾರ್ಯಾಚರಣೆ ಸಂದರ್ಭದಲ್ಲಿ ಜಿಲ್ಲೆಯ ಜನತೆ ಯಾವುದೇ ರೀತಿಯ ಗಾಬರಿ, ಆತಂಕಕ್ಕೆ ಒಳಗಾಗದೇ ಜಿಲ್ಲಾಡಳಿತದೊಂದಿಗೆ ಸಹಕಾರ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಮನವಿ ಮಾಡಿದ್ದಾರೆ.

ಕೆಆರ್‌ಎಸ್ ಅಣೆಕಟ್ಟಿನಲ್ಲಿ ಬೆಂಕಿ ಅವಘಡ ಕುರಿತು ಅಣುಕು ಪ್ರದರ್ಶನ ನಡೆಸಿ ಅರಿವು ಮೂಡಿಸುವ ಕಾರ್ಯಾಚರಣೆ ನಡೆಸಲಾಗುವುದು. ತುರ್ತು ಸಂದರ್ಭದಲ್ಲಿ ನಾಗರಿಕರ ರಕ್ಷಣೆ, ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವಿಕೆ, ಗಾಯಗೊಂಡವರಿಗೆ ಆಸ್ಪತ್ರೆಗೆ ಸ್ಥಳಾಂತರಿಸುವ ಕುರಿತಂತೆ, ಬ್ಲಾಕ್ ಔಟ್ ಚಟುವಟಿಕೆಗಳ ಅಣಕು ಕಾರ್ಯಾಚರಣೆ ಮಾಡಿ ಜನರಿಗೆ ಅದರ ಅನುಭವದ ಕೊರತೆ ಇಲ್ಲದಂತೆ ನೋಡಿಕೊಳ್ಳಲಾಗುತ್ತಿದೆ.

ಅಣಕು ಕಾರ್ಯಾಚರಣೆಗೆ ವಾರ್ನಿಂಗ್ ಟೀಂ, ಕಂಟ್ರೋಲ್ ರೂಂ, ಅಗ್ನಿ ಶಾಮಕದಳ, ಎನ್‌ಸಿಸಿ. ತಂಡ, ಹೋಂ ಗಾರ್ಡ್, ಪೊಲೀಸ್ ಇಲಾಖೆ, ಆಂಬುಲೆನ್ಸ್, ಪ್ರಥಮ ಚಿಕಿತ್ಸೆ, ವೈದ್ಯಕೀಯ ತಂಡ, ಸಾರಿಗೆ ತಂಡ, ಸಂವಾಹನ ತಂಡಗಳನ್ನು ರಚಿಸಿ ಆಯಾ ಇಲಾಖೆಯ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಿದ್ದು, ಈಗಾಗಲೇ ಎಲ್ಲಾ ಸಿದ್ಧತೆಗಳು ನಡೆದಿವೆ ಎಂದು ಎಸ್‌ಪಿ ಸಿ.ಇ.ತಿಮ್ಮಯ್ಯ ತಿಳಿಸಿದರು.

ಎಡಿಸಿ ಬಿ.ಸಿ.ಶಿವಾನಂದ ಮೂರ್ತಿ, ಎಎಸ್ಪಿ 2 ಗಂಗಾಧರ ಮೂರ್ತಿ, ಡಿವೈ ಎಸ್‌ಪಿ ಶಾಂತಮಲ್ಲಪ್ಪ, ತಹಶೀಲ್ದಾರ್ ಪರುಶುರಾಮ್ ಸತ್ತಿಗೇರಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ ಸಾರ್ವಜನಿಕರು ಅಣಕು ಸಿದ್ಧತೆಯಲ್ಲಿ ಉಪಸ್ಥಿತರಿದ್ದರು.

ಭದ್ರತೆ ವಿಷಯದಲ್ಲಿ ಕೇಂದ್ರದ ತೀರ್ಮಾನಕ್ಕೆ ಬದ್ಧ

ಮಳವಳ್ಳಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ



ಮಳವಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸುತ್ತಿರುವ ಸಚಿವ ಚಲುವರಾಯಸ್ವಾಮಿ.

ಮಳವಳ್ಳಿ: ರಾಷ್ಟ್ರದ ಭದ್ರತೆ ದೃಷ್ಟಿಯಿಂದ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ತೀರ್ಮಾನದ ಜೊತೆಗೆ ನಾವಿದ್ದೇವೆ ಎಂದು ಸಚಿವ ಎನ್.ಚೆಲುವರಾಯಸ್ವಾಮಿ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ಮುಂಭಾಗದಲ್ಲಿರುವ ಕಾಂಗ್ರೆಸ್ ನಿವೇಶನದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಪಂಚಾಯತಿ ಹಾಗೂ ತಾಲೂಕು ಪಂಚಾಯಿತಿ ಸ್ಥಳೀಯ ಚುನಾವಣೆ ಕುರಿತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆಯುತ್ತಿದೆ, ರಾಷ್ಟ್ರದ ಭದ್ರತೆ ದೃಷ್ಟಿಯಿಂದ ನಮ್ಮ ಪಕ್ಷ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ತೀರ್ಮಾನದ ಜೊತೆಗಿದೆ ಎಂದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಾಯಕರುಗಳಾದ ನಾವು ಕಾರ್ಯಕರ್ತರ ಜೊತೆ ನಿಂತು ಅವರನ್ನು ಜನಪ್ರತಿನಿಧಿಗಳನ್ನಾಗಿ ಮಾಡುವುದು ನಮ್ಮ ಕರ್ತವ್ಯವಾಗಿದೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಹೆಚ್ಚು ಆದ್ಯತೆ ಕೊಡುವಂತೆ ನಮ್ಮ ಪಕ್ಷದ ಹೈಕಮಾಂಡ್ ನಮಗೆ ಸೂಚನೆ ನೀಡಿದೆ, ವಿಧಾನಸಭಾ ಚುನಾವಣೆಯಲ್ಲಿ ಕಾರ್ಯಕರ್ತರಾದ ನೀವೆಲ್ಲಾ ಒಗ್ಗಟ್ಟಾಗಿ ನಿಂತು ನಮ್ಮನ್ನು ಗೆಲ್ಲಿಸಿದ್ದೀರಿ, ಅದೇ ರೀತಿ ನಿಮ್ಮಗಳ ಚುನಾವಣೆಯಲ್ಲಿ ನಿಮ್ಮ ಗೆಲುವಿಗೆ ಶ್ರಮಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಮಳವಳ್ಳಿ ವಿಧಾನಸಭಾ ಕ್ಷೇತ್ರದ ಏಳು ಜಿಲ್ಲಾ ಪಂಚಾಯತಿ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲ್ಲುವ ಮೂಲಕ ಜಿಲ್ಲೆಯಲ್ಲಿ ಅತಿಹೆಚ್ಚು ಸ್ಥಾನ ಗೆದ್ದ ತಾಲೂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಂಡು ಜನಪರವಾದ ಕೆಲಸಗಳನ್ನು ಮಾಡುವುದು ಜನಪ್ರತಿನಿಧಿಗಳ ಕೆಲಸವಾಗಿದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಪ್ರತಿ ಮನೆ ಮನೆಗೂ ಎಲ್ಲಾ ಯೋಜನೆಗಳಿಂದ ತಿಂಗಳಿಗೆ ಐದು ಐದುಸಾವಿರ ರೂಪಾಯಿ ಹಣ ತಲುಪುವಂತೆ ಮಾಡಿದ್ದೇವೆ, ನಮ್ಮ ಕಾರ್ಯಕರ್ತರು ಜನಪರ ಯೋಜನೆಗಳ ಬಗ್ಗೆ ಜನರಿಗೆ ತಿಳಿಸುವ ಕೆಲಸ ಮಾಡಬೇಕಿದೆ, ನಾವು ನಮ್ಮ ಅಭಿವೃದ್ಧಿ ಪರವಾದ ಕೆಲಸಗಳ ಬಗ್ಗೆ ಮಾತನಾಡದೆ ಹೋದರೆ, ವಿರೋಧ ಪಕ್ಷದವರು ಮಾತನಾಡುವ ಸುಳ್ಳುಗಳನ್ನು ಜನರು ನಂಬಿಕೊಳ್ಳುತ್ತಾರೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಏಳಕ್ಕೆ ಏಳು ವಿಧಾನಸಭಾ ಕ್ಷೇತ್ರಗಳನ್ನು ಗೆಲ್ಲಿಸಿದ್ದೀರಿ, ಜಿಲ್ಲೆಗೆ ಅವರ ಕೊಡುಗೆ ಏನು, ಇಂದು ಮಂಡ್ಯ ಜಿಲ್ಲೆಗೆ ತಂದಿರುವ ಕೃಷಿ ವಿಶ್ವವಿದ್ಯಾಲಯ ಕುರಿತು ಅಪಸ್ವರ ನುಡಿಗಳನ್ನಾಡುವವರು. ತಮ್ಮ ಅವಧಿಯಲ್ಲಿ ಯಾಕೆ ಕೃಷಿ ವಿಶ್ವವಿದ್ಯಾಲಯ ತರಲು ಸಾಧ್ಯವಾಗಲಿಲ್ಲ ಎಂದು ಕುಮಾರಸ್ವಾಮಿಗೆ ತಿರುಗೇಟು ನೀಡಿದರು,

ನಾನು ಕೃಷಿ ಸಚಿವನಾಗಿ ರಾಜ್ಯದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜ ಕೊರತೆ ಉಂಟಾಗದಂತೆ ನೋಡಿಕೊಂಡಿದ್ದೇನೆ ಎಂದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ವಿಧಾನಪರಿಷತ್ ಮಾಜಿ ಸದಸ್ಯರುಗಳಾದ ಮರಿತಿಬ್ಬೇಗೌಡ, ಅಪ್ಪಾಜಿಗೌಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಾಲರಾಜು, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಚಿಕ್ಕಲಿಂಗಯ್ಯ, ಮನ್ಮುಲ್ ನಿರ್ದೇಶಕ ಕೃಷ್ಣೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಸಿ.ಪಿ.ರಾಜು, ದೊಡ್ಡಯ್ಯ ಸೇರಿದಂತೆ ಇತರರಿದ್ದರು.

ಕೆಮ್ಮಣ್ಣು ನಾಲೆಯ ಸಮಗ್ರ ಅಭಿವೃದ್ಧಿಗೆ ಚಾಲನೆ



ಮದ್ದೂರು: ಮದ್ದೂರಮ್ಮನಕೆರೆ ಅಚ್ಚುಕಟ್ಟು ಪ್ರದೇಶದ ಸುಮಾರು 14 ಹಳ್ಳಿಗಳ ಲಕ್ಷಾಂತರ ರೈತರ ಬಹುದಿನ ಕನಸಾಗಿದ್ದ ಕೆಮ್ಮಣ್ಣುನಾಲೆಯ ಸಮಗ್ರ ಅಭಿವೃದ್ಧಿಗೆ (ಆಧುನೀಕರಣಕ್ಕೆ)ಭೂಮಿ ಪೂಜೆ ನೆರವೇರಿಸುವ ಮೂಲಕ ರೈತರ ಆಸೆಯನ್ನು ಈಡೇರಿಸಿದ್ದೇನೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಪಟ್ಟಣದ ಕೆಮ್ಮಣ್ಣುನಾಲೆ ಸರ್ಕಲ್ ಬಳಿ ಮದ್ದೂರಮ್ಮನಕೆರೆ ವ್ಯಾಪ್ತಿಯಡಿ ಬರುವ ಕೆಮ್ಮಣ್ಣುನಾಲೆ ಅಭಿವೃದ್ಧಿಗೆ ಕಾಮಗಾರಿ 90 ಕೋಟಿ ರೂ.ವೆಚ್ಚದಲ್ಲಿ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

14 ಹಳ್ಳಿಗಳ ರೈತರು ಬೆಳೆಗಳನ್ನು ಬೆಳೆಯಲು ನಾಲೆಯ ಮೂಲಕ ಸಮರ್ಪಕವಾಗಿ ನೀರು ಹರಿಯಬೇಕು. ಅಂತರ್ಜಲ ವೃದ್ಧಿಯಾಗಬೇಕು ಎಂಬ ಉದ್ದೇಶದಿಂದ, ಕೆಮ್ಮಣ್ಣುನಾಲೆ ಸ್ವಚ್ಛತೆಯಿಂದ ಕೂಡಿರಬೇಕು. ನಾಲಾ ಪಕ್ಕದ ಪಟ್ಟಣದ ನಿವಾಸಿಗಳಿಗೆ ಹಾಗೂ ರೈತರಿಗೆ ಅನುಕೂಲವಾಗುಬೇಕು ಎಂಬ ಉದ್ದೇಶದಿಂದ ಸರ್ಕಾರ ಮಟ್ಟದಲ್ಲಿ ಹೋರಾಟ ಮಾಡಿ 90 ಕೋಟಿ ರೂ. ಅನುದಾನ ತಂದು ರೈತರಿಗೆ ಶಾಶ್ವತವಾಗಿ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ನಾಲೆಯ ಸಮಗ್ರ ಅಭಿವೃದ್ಧಿ ಮಾಡಲಾಗುತ್ತಿದೆ ಎಂದರು.

ಪ್ರಗತಿಪರ ಚಿಂತಕ ನ.ಲಿ.ಕೃಷ್ಣ ಮಾತನಾಡಿದರು. ಪುರಸಭಾಧ್ಯಕ್ಷೆ ಕೋಕಿಲಾ ಅರುಣ್, ಉಪಾಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಸ್ಥಾಯಿ ಅಧ್ಯಕ್ಷೆ ವನಿತಾ, ಸದಸ್ಯರಾದ ಸರ್ವಮಂಗಳ, ಪ್ರಮೀಳ, ರತ್ನಮ್ಮ, ಕಮಲ್‌ನಾಥ್, ಚಲುವರಾಜು, ರಾಜೀವ್, ದೇಶಹಳ್ಳಿ ಆರ್.ಮೋಹನ್‌ಕುಮಾರ್, ಮಮತಾಶಂಕರೇಗೌಡ, ಜಿಪಂ ಮಾಜಿ ಅಧ್ಯಕ್ಷ ಕಂಠಿ ಸುರೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ ಇದ್ದರು.

ನಾನು ರೈತನ ಮಗನಾಗಿ ಹುಟ್ಟಿದ್ದೇನೆ. ರೈತರ ಕಷ್ಟಗಳನ್ನು ಹತ್ತಿರದಿಂದ ನೋಡಿದ್ದೇನೆ ಮತ್ತು ಗಮನಿಸಿದ್ದೇನೆ. ಆದ್ದರಿಂದ ರೈತರಿಗೆ ಶಾಶ್ವತವಾಗಿ ಅನುಕೂಲವಾಗುವಂತ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ರೈತರ ಸಮಸ್ಯೆಗಳಿಗೆ ಪರಿಹಾರ ನೀಡಿದ್ದೇನೆ. ಮುಂದೆಯೂ ಸಹ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ಇದಕ್ಕೆ ಸಹಕಾರ ನೀಡುತ್ತಿರುವ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಕ್ಷೇತ್ರದ ಜನರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

–ಕೆ.ಎಂ.ಉದಯ್ ಶಾಸಕ

ಕಸಾಪ ಅಧ್ಯಕ್ಷ ಮಹೇಶ್ ಜೋಶಿ ವಿರುದ್ಧ ತನಿಖೆಗೆ ಆಗ್ರಹಿಸಿ ಪ್ರತಿಭಟನೆ



ಕಸಾಪ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಬಿ.ಡಿ.ಶಿವಾನಂದ ಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ವಿಶ್ವ ಸಂರಕ್ಷಣಾ ಮಹಾಯಜ್ಞ

ಭಾರತೀನಗರ, ಮೇ 10– ಚನ್ನಪಟ್ಟಣ ತಾಲೂಕಿನ ಶ್ರೀಕ್ಷೇತ್ರ ಕೆಂಗಲ್ ಅಯ್ಯನ ಗುಡಿ ಆವರಣದಲ್ಲಿ ವಿಶ್ವ ಸಂರಕ್ಷಣಾ ಮಹಾಯಜ್ಞ ಕಾರ್ಯಕ್ರಮ ಮೇ 15 ರಿಂದ 18 ರವರೆಗೆ ವಿಜೃಂಭಣೆಯಿಂದ ನಡೆಯಲಿದೆ ಎಂದು ಕೆಂಗಲ್ ದೇವಾಲಯದ ಅರ್ಚಕರು ಹಾಗೂ ಆಗಮಿಕರಾದ ಶರತ್ ತಿಳಿಸಿದರು.

ಗೌರಮ್ಮ ನಿಧನ



ಕೆ.ಆರ್.ಪೇಟೆ: ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದ ವಾಲ್ಮೀಕಿ ನಾಯಕ ಸಮುದಾಯದ ಹಿರಿಯ ಮುಖಂಡರಾದ ಉಗ್ರನಾಯಕ ಅವರ ಧರ್ಮಪತ್ನಿ ಗೌರಮ್ಮ (85) ನಿಧನರಾಗಿದ್ದಾರೆ.

ಮೃತ ಗೌರಮ್ಮ ಓರ್ವ ಪುತ್ರ ಪರಮೇಶ್ (ಶಾಸಕ ಹೆಚ್.ಟಿ. ಮಂಜು ಅವರ ಅಂಗರಕ್ಷಕ), ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮೇ 10ರ ಶನಿವಾರ ಅಕ್ಕಿಹೆಬ್ಬಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಭಾರತ–ಪಾಕ್ ಕದನ ವಿರಾಮ

ತುರ್ತು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನ ಹೇಳಿಕೆ: ಪಾಕಿಸ್ತಾನ ಹಾಗೂ ಭಾರತ ಎರಡೂ ದೇಶಗಳು ಕದನ ವಿರಾಮಕ್ಕೆ ಒಪ್ಪಿಗೆ ನೀಡಿವೆ ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಇಶಾಕ್‌ದಾರ್ ತಿಳಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಪಾಕಿಸ್ತಾನವು ತನ್ನ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಧಕ್ಕೆಯಾಗದಂತೆ ಈ ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆಗಾಗಿ ಯಾವಾಗಲೂ ಶ್ರಮಿಸಿದೆ. ಕದನ ವಿರಾಮಕ್ಕೆ ಭಾರತವೂ ಒಪ್ಪಿದೆ ಎಂದು ಬರೆದುಕೊಂಡಿದ್ದಾರೆ.

ಟ್ರಂಪ್ ಘೋಷಣೆ: ಉಭಯ ದೇಶಗಳಿಗೂ ಮುನ್ನವೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟ್ವೀಟ್ ಮೂಲಕ ಕದನ ವಿರಾಮದ ವಿಚಾರವನ್ನು ಹಂಚಿಕೊಂಡಿದ್ದರು. ಅಮೆರಿಕಾದ ಮಧ್ಯಸ್ಥಿಕೆಯಲ್ಲಿ ನಡೆದ ರಾತ್ರಿಯ ಸುದೀರ್ಘ ಮಾತುಕತೆ ನಂತರ ಭಾರತ ಮತ್ತು ಪಾಕಿಸ್ತಾನಗಳು ಸಂಪೂರ್ಣ ಮತ್ತು ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಎಂದು ಘೋಷಿಸಲು ನನಗೆ ಸಂತೋಷವಾಗುತ್ತಿದೆ. ಸಾಮಾನ್ಯ ಜ್ಞಾನ ಮತ್ತು ಉತ್ತಮ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದ್ದಕ್ಕಾಗಿ ಎರಡೂ ದೇಶಗಳಿಗೆ ಅಭಿನಂದನೆಗಳು. ಈ ವಿಷಯದ ಬಗ್ಗೆ ನೀವೆಲ್ಲ ಗಮನಹರಿಸಿದ್ದಕ್ಕೆ ಧನ್ಯವಾದಗಳು ಎಂದು ಡೊನಾಲ್ಡ್ ಟ್ರಂಪ್ ಟ್ವೀಟ್ ಮೂಲಕ ತಿಳಿಸಿದ್ದರು.

ಇದನ್ನು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಹಾಗೂ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಕೂಡ ರೀಟ್ವೀಟ್ ಮಾಡಿ, ಮಾತುಕತೆಗಳ ಬಗ್ಗೆ ವಿವರ ನೀಡಿದ್ದಾರೆ. ಕಳೆದ 48 ಗಂಟೆಗಳಲ್ಲಿ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ನಾನು, ಭಾರತದ ಪ್ರಧಾನಿ ನರೇಂದ್ರ ಮೋದಿ, ವಿದೇಶಾಂಗ ಸಚಿವ ಸುಬ್ರಹ್ಮಣ್ಯಂ ಜೈಶಂಕರ್, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಅಜಿತ್ ದೋವಲ್ (ಭಾರತ) ಮತ್ತು ಅಸಿಮ್ ಮಲಿಕ್ (ಪಾಕಿಸ್ತಾನ) ಸೇರಿದಂತೆ ಉಭಯ ದೇಶಗಳ ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದೇವೆ. ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳು ತಕ್ಷಣದ ಕದನ ವಿರಾಮಕ್ಕೆ ಒಪ್ಪಿಕೊಂಡಿವೆ ಮತ್ತು ತಟಸ್ಥ ಸ್ಥಳದಲ್ಲಿ ಹಲವು ವಿಚಾರಗಳ ಬಗ್ಗೆ ಮಾತುಕತೆಗಳನ್ನು ಪ್ರಾರಂಭಿಸಲು ಒಪ್ಪಿಕೊಂಡಿವೆ ಎಂದು ಘೋಷಿಸಲು ನನಗೆ ಸಂತೋಷವಾಗಿದೆ. ಶಾಂತಿಯ ಮಾರ್ಗವನ್ನು ಆರಿಸಿಕೊಳ್ಳುವಲ್ಲಿ ಪ್ರಧಾನಿಗಳಾದ ನರೇಂದ್ರ ಮೋದಿ ಮತ್ತು ಶೆಹಬಾಜ್ ಷರೀಫ್ ಅವರ ಬುದ್ಧಿವಂತಿಕೆ, ವಿವೇಕ ಮತ್ತು ರಾಜತಾಂತ್ರಿಕತೆಯನ್ನು ನಾವು ಶ್ಲಾಘಿಸುತ್ತೇವೆ ಎಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಪಾಕ್‌ನಿಂದ ಕೆಲಕಾಲ ಕದನ ವಿರಾಮ ಉಲ್ಲಂಘನೆ

ಭಾರತೀಯ ಸೇನೆ ಪ್ರತ್ಯುತ್ತರ ನೀಡಿದ್ದು, ಭಾರತದೆಡೆಗೆ ಹಾರಿ ಬಂದ ಎಲ್ಲಾ ಡ್ರೋನ್‌ಗಳನ್ನೂ ಹೊಡೆದುರುಳಿಸಿತ್ತು. ನಂತರ ಭಾರತದ ಎಚ್ಚರಿಕೆ ನಂತರ ಪಾಕಿಸ್ತಾನ್ ತನ್ನ ದಾಳಿಯನ್ನು ನಿಲ್ಲಿಸಿದೆ.

ಪಾಕಿಸ್ತಾನದ ಕದನ ವಿರಾಮದ ಉಲ್ಲಂಘನೆ ಕೆಲವು ಗಂಟೆಗಳ ಕಾಲ ನಡೆದಿದ್ದು, ರಾತ್ರಿ 10.30ರ ಸುಮಾರಿಗೆ ಗಡಿ ನಿಯಂತ್ರಣಾ ರೇಖೆಯುದ್ದಕ್ಕೂ ಪಾಕಿಸ್ತಾನದ ಅಪ್ರಚೋದಿತ ದಾಳಿ ನಿಂತಿದೆ. ಪ್ರಸ್ತುತ ಪರಿಸ್ಥಿತಿ ಸಹಜ ಸ್ಥಿತಿ ಇದೆ ಎಂದು ಭಾರತೀಯ ಸೇನೆ ಅಧಿಕೃತವಾಗಿ ಪ್ರಕಟಿಸಿದೆ.

ಇದಕ್ಕೂ ಮುನ್ನ ಜಮ್ಮು ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರು, ಟ್ವೀಟ್ ಮಾಡಿದ್ದು, ಈಗಲೂ ಸ್ಫೋಟದ ಶಬ್ದ ಕೇಳಿಸುತ್ತಿದೆ. ಪಾಕಿಸ್ತಾನ ಶೆಲ್ ಹಾಗೂ ಡ್ರೋನ್ ದಾಳಿ ನಡೆಸುತ್ತಿದೆ. ಇದೇನಾ ಕದನ ವಿರಾಮ? ಎಂದು ಪ್ರಶ್ನಿಸಿದ್ದರು.

ಭಾರತದ ಭದ್ರತಾ ಸಲಹೆಗಾರ ಅಜೀತ್ ಧೋವಲ್ ಅವರು, ಪಾಕಿಸ್ತಾನವನ್ನು ನಂಬುವುದು ಹೇಗೆ? ಎಂದು ಪ್ರಶ್ನಿಸಿ ಟ್ವೀಟ್ ಮಾಡಿದ್ದರು. ಕದನ ವಿರಾಮ ಘೋಷಣೆಯಾಗುತ್ತಿದ್ದಂತೆಯೇ ಭಾರತ–ಪಾಕ್ ಗಡಿ ಪ್ರದೇಶದ ಜನರು ನಿಟ್ಟುಸಿರು ಬಿಟ್ಟಿದ್ದರು. ತಾವು ಸುರಕ್ಷಿತವಾಗಿ ಇದ್ದೇವೆ ಎಂಬ ವಿಶ್ವಾಸದಿಂದ ರಸ್ತೆಗಳಲ್ಲಿ ತಿರುಗಾಡತೊಡಗಿದ್ದರು. ಆದರೆ ಸಂಜೆ 7.30ರ ಸುಮಾರಿಗೆ ಹಲವೆಡೆ ಪಾಕಿಸ್ತಾನದ ಡ್ರೋನ್ ಹಾರಾಟ ಕಂಡು ಬಂದಿದ್ದು, ಅವುಗಳನ್ನು ಭಾರತೀಯ ಸೇನೆ ಏರ್ ಡಿಫೆನ್ಸ್ ಸಿಸ್ಟಂ ಮೂಲಕ ಉಡಾಯಿಸಿದೆ. ಜೊತೆಗೆ ಎಲ್ಲಾ ಪ್ರದೇಶಗಳನ್ನು ಬ್ಲಾಕ್ ಔಟ್ ಮಾಡಿ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ.

ಜಮ್ಮು–ಕಾಶ್ಮೀರದಲ್ಲಿ 6, ಶ್ರೀನಗರದಲ್ಲಿ 12, ಗುಜರಾತ್‌ನಲ್ಲಿ 10 ಡ್ರೋನ್‌ಗಳನ್ನು ಭಾರತೀಯ ಸೇನೆ ಉಡಾಯಿಸಿದೆ. ಗಡಿ ಪ್ರದೇಶಗಳಾದ ಪೂಂಚ್, ಅಖ್ನೂರ್, ಉದಂಪುರ್, ಮೇಂದರ್, ಜಸಲ್ಮೇರ್, ಗುಂದೇರ್ವಾಲ್, ಪಠಾಣ್ ಕೋಟ್, ವೈಷ್ಣೋದೇವಿ, ಕಚ್, ರಿಯಾಸಿ, ಕುತುವಾ, ಫಿರೋಜ್‌ಪುರ್ ಮುಂತಾದೆಡೆ ಬ್ಲಾಕ್ ಔಟ್ ಮಾಡಲಾಗಿದ್ದು, ಹಾರಿ ಬರುವ ಪಾಕಿಸ್ತಾನದ ಡ್ರೋನ್‌ಗಳು ಭಾರತೀಯ ಸೇನೆ ಹೊಡೆದುರುಳಿಸುತ್ತಿದೆ. ಪಾಕ್ ಡ್ರೋನ್ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ ಎಂದು ಸೇನಾ ಮೂಲಗಳು ತಿಳಿಸಿದ್ದು, ಯಾರೂ ಮನೆಯಿಂದ ಹೊರ ಬರಬೇಡಿ ಹಾಗೂ ಆತಂಕಕ್ಕೆ ಒಳಗಾಗಬೇಡಿ ಎಂದು ಅಮೃತಸರ ಜಿಲ್ಲಾಧಿಕಾರಿಗಳು ಅಲ್ಲಿನ ಜನತೆಗೆ ಕರೆ ನೀಡಿದ್ದಾರೆ.

ಭಾರತವನ್ನ ಕೆದಕಿ ತದುಕಿಸಿಕೊಂಡ ಪಾಕ್!

ಭಾರತದ ಎಸ್–400 ವಾಯು ರಕ್ಷಣಾ ವ್ಯವಸ್ಥೆಯು ಈ ದಾಳಿಗಳನ್ನು ಯಶಸ್ವಿಯಾಗಿ ತಡೆಯಿತು. ಆದರೂ ಪಾಕಿಸ್ತಾನವು ಕುಪ್ವಾರಾ ಜಿಲ್ಲೆಯ ಕರ್ನಾಹ್ ಪ್ರದೇಶದಲ್ಲಿ ಗಡಿಯಾಚೆಗಿನ ಗುಂಡಿನ ದಾಳಿಯನ್ನು ಮುಂದುವರೆಸಿತು. ಇದರಲ್ಲಿ ಯಾವುದೇ ಜೀವ ಹಾನಿಯಾಗಲಿಲ್ಲ.

ಮೇ 9ರಂದು, ಪಾಕಿಸ್ತಾನವು ಭಾರತದ ಸೇನಾ ನೆಲೆಗಳು ಮತ್ತು ನಾಗರಿಕ ಪ್ರದೇಶಗಳ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳನ್ನು ಮುಂದುವರೆಸಿತು ಇದರಲ್ಲಿ ಅಮೃತಸರದಲ್ಲಿ ಕಾಮಿಕೇಜ್ ಡ್ರೋನ್‌ಗಳನ್ನು ಬಳಸಲಾಯಿತು. ಇದಕ್ಕೆ ಪ್ರತಿಯಾಗಿ ಭಾರತವು ಪಾಕಿಸ್ತಾನದ ವಾಯು ರಕ್ಷಣಾ ರಾಡಾರ್‌ಗಳು ಮತ್ತು ವ್ಯವಸ್ಥೆಗಳನ್ನು ಲಾಹೋರ್ ಸೇರಿದಂತೆ ಹಲವು ಸ್ಥಳಗಳಲ್ಲಿ ಧ್ವಂಸಗೊಳಿಸಿತು. ಭಾರತೀಯ ಸೇನೆಯು LoC ಬಳಿಯ ಉಗ್ರರ ಲಾಂಚ್‌ಪ್ಯಾಡ್‌ಗಳನ್ನು ಗುರಿಯಾಗಿ ಸಿತು. ಇತ್ತ ಮುನ್ನೆಚ್ಚರಿಕಾ ಕ್ರಮವಾಗಿ ಭಾರತದ ಪಂಜಾಬ್, ರಾಜಸ್ಥಾನ, ಮತ್ತು ಜಮ್ಮು–ಕಾಶ್ಮೀರದ ಗಡಿ ಜಿಲ್ಲೆಗಳಲ್ಲಿ ಶಾಲೆಗಳನ್ನು ಮುಚ್ಚಲಾಯಿತು. ಶ್ರೀನಗರ ವಿಮಾನ ನಿಲ್ದಾಣವನ್ನು ಸಹ ನಾಗರಿಕರಿಗೆ ಮುಚ್ಚಲಾಯಿತು. ಪಾಕಿಸ್ತಾನದಲ್ಲಿ ಲಾಹೋರ್ ಮತ್ತು ಸಿಯಾಲ್ ಕೋಟ್ ವಿಮಾನ ನಿಲ್ದಾಣಗಳು ಮುಚ್ಚಲ್ಪಟ್ಟವು.

ಮಾತುಕತೆಗೆ ಮುಂದಾದ ದೇಶಗಳು: ಸೌದಿ ಅರೇಬಿಯಾದ ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ಗೆ ಭೇಟಿ ನೀಡಿದರು, ಮತ್ತು ಯುಕೆ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಎರಡೂ ದೇಶಗಳೊಂದಿಗೆ ಮಾತನಾಡಿದರು. ಅಮೆರಿಕದ ಮಧ್ಯಸ್ಥಿಕೆಯಲ್ಲಿ ಭಾರತ ಮತ್ತು ಪಾಕಿಸ್ತಾನವು ಇಂದು ಕದನ ವಿರಾಮಕ್ಕೆ ಒಪ್ಪಿದವು. ಸಂಜೆ 5 ಗಂಟೆಯಿಂದ ಭೂಮಿ, ಸಮುದ್ರ, ಮತ್ತು ವಾಯುದಾಳಿಗಳನ್ನು ಸಂಪೂರ್ಣವಾಗಿ ನಿಲ್ಲಿಸಲು ಒಪ್ಪಿ ಕೊಂಡವು. ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಈ ಒಪ್ಪಂದವನ್ನು ಘೋಷಿಸಿದರು. ಆದರೆ ಭಯೋತ್ಪಾದನೆ ವಿರುದ್ಧ ಭಾರತ ಯಾವತ್ತೂ ರಾಜೀ ಮಾಡಿಕೊಳ್ಳುವುದಿಲ್ಲ ಎಂದು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಸ್ಪಷ್ಟಪಡಿಸಿದ್ದಾರೆ.

ಬಾಲ ಬಿಚ್ಚಿದರೆ ಸುಮ್ಮನಿರಲ್ಲ

ನಿರ್ಧಾರಕ್ಕೆ ಬದ್ಧವಾಗಿದ್ದೇನೆ ಆದರೆ, ನಾವು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ. ಜಾಗರೂಕರಾಗಿದ್ದೇವೆ ಮತ್ತು ಮಾತೃಭೂಮಿಯ ಸಾರ್ವಭೌಮತ್ವ ಮತ್ತು ಸಮಗ್ರತೆಯನ್ನು ರಕ್ಷಿಸಲು ಬದ್ಧರಾಗಿದ್ದೇವೆ. ಬಾಲ ಬಿಚ್ಚಿದರೆ ಸುಮ್ಮನೆ ಇರಲ್ಲ ಎಂದು ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದರು.

ಭಾರತ ಸೇನೆಯು ಪಾಕಿಸ್ತಾನದ ಪ್ರತಿಯೊಂದು ದುಸ್ಸಾಹಸವನ್ನು ಬಲವಾಗಿ ಎದುರಿಸಿದೆ. ಭವಿಷ್ಯದಲ್ಲಿ ಪಾಕಿಸ್ತಾನದ ಪ್ರತಿಯೊಂದು ಪ್ರತಿಕ್ರಿಯೆಗೂ ತಕ್ಕ ಉತ್ತರ ಕೊಡುತ್ತೇವೆ. ರಾಷ್ಟ್ರದ ರಕ್ಷಣೆಗಾಗಿ ಅಗತ್ಯವಿರುವ ಯಾವುದೇ ಕಾರ್ಯಾಚರಣೆಗಳನ್ನು ಪ್ರಾರಂಭಿಸಲು ನಾವು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ ಎಂದು ಹೇಳಿದರು.

ಭಾರತ ಜವಾಬ್ದಾರಿಯುತವಾಗಿ ದಾಳಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತದ ಪ್ರತಿಕ್ರಿಯೆಗಳು ತುಂಬಾ ಜವಾಬ್ದಾರಿಯುತವಾಗಿದ್ದವು ಎಂದು ಕಮೋಡೋರ್ ನಾಯರ್ ಹೇಳಿದರು. ಬಳಿಕ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್, ಕರ್ನಲ್ ಸೋಫಿಯಾ ಖುರೇಷಿ ಪಾಕಿಸ್ತಾನದ ಆರೋಪಗಳೇನು ಸತ್ಯಾಂಶಗಳೇನು ಎಂದು ಮಾಹಿತಿ ನೀಡಿದರು.

ಭಾರತದ ಸೇನಾ ಕ್ಷಿಪಣಿಗಳಿಗೆ ಹಾನಿ ಮಾಡಿಲ್ಲ: ಪಾಕಿಸ್ತಾನವು ಕಳೆದ ನಾಲ್ಕು ದಿನಗಳ ದಾಳಿಗಳ ಬಗ್ಗೆ ಸಾಕಷ್ಟು ಸುಳ್ಳು ಹೇಳಿದೆ. ಪ್ರಮುಖವಾಗಿ ಜೆಎಫ್ 17 ವಿಮಾನದ ಮೂಲಕ ಭಾರತದ ಎಸ್ 400 ವಾಯು ರಕ್ಷಾ ವ್ಯವಸ್ಥೆ ಮತ್ತು ಬ್ರಹ್ಮೋಸ್ ಕ್ಷಿಪಣಿ ನೆಲೆಗೆ ಹಾನಿ ಮಾಡಿದೆ ಎಂದು ಹೇಳಿಕೊಂಡಿದೆ. ಜತೆಗೆ ಭಾರತೀಯ ವಾಯುನೆಲೆಗಳು ಮತ್ತು ಮದ್ದು ಗುಂಡುಗಳ ಕೊಠಡಿಗೆ ಹಾನಿ ಮಾಡಿದೆ ಎಂಬ ದೊಡ್ಡ ಸುಳ್ಳನ್ನು ಪಾಕಿಸ್ತಾನ ಹೇಳಿದೆ ಎಂದು ಖುರೇಷಿ ಮಾಹಿತಿ ನೀಡಿದರು.

ಭಾರತೀಯ ಸೇನೆಯು ಪಾಕಿಸ್ತಾನದ ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದಿದ್ದಾರೆ. ನಮ್ಮ ದಾಳಿಯಿಂದ ಪಾಕಿಸ್ತಾನ ಸೇನೆಗೆ ಸಾಕಷ್ಟು ನಷ್ಟವಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಎಲ್‌ಓಸಿಯ ಲ್ಲಿಯೂ ಪಾಕಿಸ್ತಾನ ಗುಂಡಿನ ದಾಳಿ ಮಾಡಿತ್ತು. ಅದಕ್ಕೆ ಪ್ರತಿಯಾಗಿ ಭಾರತ ದಾಳಿ ಮಾಡಿದ ವೇಳೆ ಅವರಿಗೂ ನಷ್ಟವಾಗಿದೆ. ಎಲ್ಲಾ ಸಮಯದಲ್ಲೂ ನಮ್ಮ ಸೇನೆ ಅಲರ್ಟ್ ಇರಲಿದೆ ಪಾಕ್ ದಾಳಿಗೆ ಪ್ರತಿದಾಳಿ ಮಾಡಲು ಸಿದ್ಧರಾಗಿದ್ದೇವೆ ಎಂದು ಹೇಳಿದ್ದಾರೆ.

ಪಾಕಿಸ್ತಾನ ಸೇನೆಗೆ ಭಾರಿ ಹಾನಿಯಾಗಿದೆ: ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮಾತನಾಡಿ, ಭಾರತ ಸೇನೆಯು ಭಯೋತ್ಪಾದಕ ಶಿಬಿರಗಳು ಮತ್ತು ಭಾರತ ವಿರೋಧಿ ಚಟುವಟಿಕೆಗಳಿಗೆ ಬಳಸುವ ಉಪಕರಣಗಳನ್ನು ಮಾತ್ರ ಗುರಿಯಾಗಿಸಿಕೊಂಡಿತ್ತು. ನಮ್ಮ ಸೇನಾ ದಾಳಿಯಿಂದ ಪಾಕಿಸ್ತಾನದ ವಾಯು ನೆಲೆಗಳಿಗೆ ವ್ಯಾಪಕ ಹಾನಿಯಾಗಿದೆ. ಇದಲ್ಲದೆ, ವಾಯು ರಕ್ಷಣಾ ಶಸ್ತ್ರಾಸ್ತ್ರ ವ್ಯವಸ್ಥೆಗಳು ಹಾಳಾಗಿದೆ. ಇನ್ನು ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಪಾಕಿಸ್ತಾನಕ್ಕೆ ದೊಡ್ಡ ಹಿನ್ನಡೆಯಾಗಿದೆ ಎಂದು ಮಾಹಿತಿ ನೀಡಿದರು.

ಜಮ್ಮು ಸೇನಾ ನೆಲೆ ಮೇಲೆ ಭಯೋತ್ಪಾದಕರ ದಾಳಿ

ಜಮ್ಮು: ಭಾರತ– ಪಾಕಿಸ್ತಾನ್ ಕದನ ವಿರಾಮ ಘೋಷಣೆ ಬೆನ್ನಲ್ಲೇ ಜಮ್ಮುವಿನಲ್ಲಿ ಭಯೋತ್ಪಾದಕರು ಸೇನಾ ನೆಲೆಯ ಮೇಲೆ ದಾಳಿ ನಡೆಸಿದ್ದಾರೆ. ಜಮ್ಮುವಿನ ನಗ್ರೋರಾ ಸೇನಾ ನೆಲೆ ಮೇಲೆ ಭಯೋತ್ಪಾದಕರು ಶನಿವಾರ ರಾತ್ರಿ ಗುಂಡಿನ ದಾಳಿ ನಡೆಸಿದ್ದು, ಸೇನೆ ಮತ್ತು ಭಯೋತ್ಪಾದಕರ ನಡುವೆ ಕೆಲ ಕಾಲ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಉಂಟಾದ ಸಾವು–ನೋವುಗಳ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಸೈನಿಕರು ತಿರುಗೇಟು ನೀಡುತ್ತಿದ್ದಂತೆಯೇ ಭಯೋತ್ಪಾದಕರು ಫಲಾಯನ ನಡೆಸಿದ್ದು, ಅವರಿಗಾಗಿ ಸೇನೆ ಶೋಧ ಕಾರ್ಯಾಚರಣೆ ನಡೆಸುತ್ತಿದೆ.

ಸಮಾಜಕ್ಕೆ ಅರ್ಪಿಸಿಕೊಂಡವರನ್ನು ಜನ ಎಂದಿಗೂ ಮರೆಯುವುದಿಲ್ಲ

ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪ್ರದಾನ, ರಾಜಶೇಖರ ಕೋಟಿ ನೆನಪು ಕಾರ್ಯಕ್ರಮದಲ್ಲಿ ಗೊಲ್ಲಹಳ್ಳಿ ಶಿವಪ್ರಸಾದ್ ಅಭಿಮತ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಶನಿವಾರ ಕಲಬುರಗಿಯ ಎನ್.ಎಸ್. ಚಾಂದ್‌ಪಾಷ ಹಾಗೂ ಯಾದಗಿರಿಯ ಪಿ.ನಂದಕುಮಾರ್ ಅವರಿಗೆ ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿಯನ್ನು ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಪ್ರದಾನ ಮಾಡಿದರು.

ಮೈಸೂರು: ಸಮಾಜಕ್ಕೆ ಅರ್ಪಿಸಿಕೊಂಡಂತಹವರನ್ನು ಜನ ಎಂದಿಗೂ ಮರೆಯುವುದಿಲ್ಲ, ಸದಾ ಸ್ಮರಿಸುತ್ತಾರೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹೇಳಿದರು.

ಚಾಮರಾಜನಗರ ರಂಗವಾಹಿನಿ, ಮೈಸೂರಿನ ನೆಲೆ– ಹಿನ್ನೆಲೆ, ಡಾ. ರಾಮ ಮನೋಹರ ಲೋಹಿಯಾ ಟ್ರಸ್ಟ್ ವತಿಯಿಂದ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಏರ್ಪಡಿಸಿದ್ದ ಮುಳ್ಳೂರು ನಾಗರಾಜ ರಾಜ್ಯ ಮಟ್ಟದ ಕಾವ್ಯ ಪ್ರಶಸ್ತಿ ಪ್ರದಾನ, ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುಳ್ಳೂರು ನಾಗರಾಜ ಹಾಗೂ ರಾಜಶೇಖರ ಕೋಟಿ ಅವರನ್ನು ಇಂದಿಗೂ ಸ್ಮರಿಸುತ್ತಿರುವುದೇ ಇದಕ್ಕೆ ಸಾಕ್ಷಿ ಎಂದರು.

ಕೇವಲ ಸಂಸಾರಕ್ಕೆ ಸೀಮಿತರಾದವರನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಕೆಲವರು ಸಾಧಕರಿರುತ್ತಾರೆ, ಮತ್ತೆ ಕೆಲವರು ಸಮಯ ಸಾಧಕರಿರುತ್ತಾರೆ. ಸಾಧಕರು ಅವರಿಗೋಸ್ಕರ ಬದುಕುವುದಿಲ್ಲ. ಸಮಾಜಗೋಸ್ಕರ ಬದುಕುತ್ತಾರೆ ಎಂದರು.

ಮುಳ್ಳೂರು ನಾಗರಾಜ ಅವರು ಸರ್ಕಾರಿ ಕೆಲಸವನ್ನು ತಿರಸ್ಕರಿಸಿ, ಸಮಾಜಕ್ಕೆ ಅರ್ಪಿಸಿಕೊಂಡವರು. ತಮ್ಮ ಸಾಹಿತ್ಯದ ಮೂಲಕ ದಲಿತ ಸಂಘರ್ಷ ಸಮಿತಿಯ ಹೋರಾಟಕ್ಕೆ ಜೀವ ತುಂಬಿದವರು. ಕೋಟಿ ಅವರು ಪತ್ರಿಕೋದ್ಯಮದ ಮೂಲಕ ಎಲ್ಲಾ ಹೋರಾಟಗಳಿಗೆ ಪ್ರೋತ್ಸಾಹ ನೀಡಿದಂಥವರು ಎಂದು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಮುಳ್ಳೂರು ನಾಗರಾಜ ಅವರ ಕೊಡುಗೆಯನ್ನು ಸ್ಮರಿಸಿ ನಂಜನಗೂಡಿನ ಪ್ರಮುಖ ರಸ್ತೆಗೆ ಅವರ ಹೆಸರಿಡಲಾಗಿದೆ ಎಂದರು.

ಮುಳ್ಳೂರು ನಾಗರಾಜ ಅವರನ್ನು ಕುರಿತು ಕಲಬುರಗಿ ಕೇಂದ್ರೀಯ ವಿವಿ ಸಹಾಯಕ ಪ್ರಾಧ್ಯಾಪಕ ಡಾ.ಅಪ್ಪಗೆರೆ ಸೋಮಶೇಖರ್, ರಾಜಶೇಖರ ಕೋಟಿ ಅವರನ್ನು ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು.

ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪುರಸ್ಕೃತರಾದ ಎನ್.ಎಸ್.ಚಾಂದ್ ಪಾಷ, ಪಿ.ನಂದಕುಮಾರ್ ಮಾತನಾಡಿ, ಕೃತಜ್ಞತೆ ಸಲ್ಲಿಸಿದರು. ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಗಣಿ–ಭೂ ವಿಜ್ಞಾನ ಇಲಾಖೆ ಜಂಟಿ ನಿರ್ದೇಶಕಿ ಲಕ್ಷ್ಮಮ್ಮ, ರಂಗಕರ್ಮಿ ಕೆ.ಆರ್. ಗೋಪಾಲಕೃಷ್ಣ, ನಂಜನಗೂಡು ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಮುಖ್ಯ ಅತಿಥಿಗಳಾಗಿದ್ದರು.

ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಸ್ವಾಗತಿಸಿದರು. ಸಂಚಾಲಕ ರೂಬಿನ್ ಸಂಜಯ್, ಹಿರಿಯ ಪತ್ರಕರ್ತ ಮುಳ್ಳೂರು ರಾಜು ನಿರೂಪಿಸಿದರು. ನಂತರ ಹನೂರು ಚನ್ನಪ್ಪ ರಚನೆಯ 'ಬೆಲ್ಲದ ದೋಣಿ' ನಾಟಕ ಪ್ರದರ್ಶನ ನಡೆಯಿತು.

ಬೆಳದಿಂಗಳ ಸಂಗೀತದಲ್ಲಿ ವಯೋಲಿನ್ ವಾದನ







ಮೈಸೂರು, ಮೇ 10– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಮೇ 12ರಂದು (ಸೋಮವಾರ) ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–279ರ ಅಂಗವಾಗಿ ವಿದ್ವಾನ್ ಡಾ.ಮೈಸೂರು ಎಂ.ಮಂಜುನಾಥ್, ವಿದ್ವಾನ್ ಸುಮಂತ್ ಮಂಜುನಾಥ್, ಕುಮಾರಿ ಮಾಳವಿ ಮಂಜುನಾಥ್ ಅವರಿಂದ ವಯೊಲಿನ್ ವಾದನ ಏರ್ಪಡಿಸಲಾಗಿದೆ.

ಮೃದಂಗ ಸಹಕಾರ ನೀಡಲಿರುವ ವಿದ್ವಾನ್ ನೈವೇಲಿ ವೆಂಕಟೇಶ್, ವಿದ್ವಾಂಸರಾದ ರಾಮನಾಥಪುರಂ ಕಂದಸಾಮಿ ಪಿಳ್ಳೈ, ಪೆರುಂಪಲ್ಲಿ ವೆಂಕಟೇಶನ್, ತಿರು ನಾಗೇಶ್ವರಂ ಸುಬ್ರಹ್ಮಣ್ಯಂ ಬಳಿ ಶಿಷ್ಯ ವೃತ್ತಿ ಮಾಡಿದ್ದಾರೆ. ಖಂಜಿರ ವಾದನದಲ್ಲಿಯೂ ಎತ್ತಿದ ಕೈ.

ಅಪರೇಷನ್ ಸಿಂಧೂರ

ಮಾತುಕತೆಯಲ್ಲೂ ಪಾಕ್‌ಗೆ ಮರ್ಮಾಘಾತ?

ನವದೆಹಲಿ, ಮೇ 10– ಭಾರತ ಹಾಗೂ ಪಾಕ್ ನಡುವೆ ಮೇ 12ರಂದು ನಡೆಯಲಿರುವ ಮಾತುಕತೆಯಲ್ಲಿ ಹಲವು ಮಹತ್ವದ ವಿಚಾರಗಳ ಬಗ್ಗೆ ಚರ್ಚೆಯಾಗುವ ಸಾಧ್ಯತೆ ಇದೆ.

ಪಾಕಿಸ್ತಾನದಲ್ಲಿರುವ ಉಗ್ರರ ನೆಲೆಗಳನ್ನು ನೀವೇ ನಿರ್ನಾಮ ಮಾಡಬೇಕು, ಇಲ್ಲವೇ ನಾವು ಪಟ್ಟಿ ಮಾಡಿರುವ ಉಗ್ರರನ್ನು ತಮಗೆ ಒಪ್ಪಿಸಬೇಕೆಂಬ ಅತ್ಯಂತ ಪ್ರಮುಖ ಬೇಡಿಕೆಯನ್ನು ಭಾರತ ಮುಂದಿಡಬಹುದು. ಅಲ್ಲದೆ ದಶಕಗಳಿಂದ ಭಾರತದಲ್ಲಿ ನಡೆದಿರುವ ವಿಧ್ವಂಸಕ ಕೃತ್ಯಗಳಲ್ಲಿ ಪಾಕ್ ನೆಲದ ಉಗ್ರರ ಕೈವಾಡ ಇರುವ ಬಗ್ಗೆ ಸಾಕಷ್ಟು ಪುರಾವೆಗಳನ್ನು ಮುಂದಿಟ್ಟು, ಪಾಕಿಸ್ತಾನವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಧ್ಯತೆ ಇದೆ. ಭಾರತಕ್ಕೆ ಉಗ್ರರ ನುಸುಳುವಿಕೆಗೆ ಸಹಕರಿಸುವುದು, ಗಡಿಯಲ್ಲಿ ಪದೇ ಪದೆ ಯುದ್ಧ ಪ್ರಚೋದಿಸುವ ವರ್ತನೆ ಸೇರಿದಂತೆ ಅನೇಕ ವಿಚಾರಗಳನ್ನು ಭಾರತ ಪ್ರಸ್ತಾಪಿಸಬಹುದು.

ಇನ್ನು ಪಹಲ್ಗಾಮ್ ಘಟನೆಗೆ ಭಾರತದ ದಿಟ್ಟ ಕ್ರಮಗಳಿಂದ ಕಂಗೆಟ್ಟಿರುವ ಪಾಕಿಸ್ತಾನ, ನದಿ ನೀರು ಬಂದ್ ಮಾಡಿರುವುದು, ವ್ಯಾಪಾರ ವಹಿವಾಟು, ವೀಸಾ ಮೇಲಿನ ನಿರ್ಬಂಧ ತೆರವಿಗೆ ಮನವಿ ಮಾಡಬಹುದು. ಆದರೆ ಉಗ್ರರ ಸಂಹರಿಸುವ ನಿಟ್ಟಿನಲ್ಲಿ ನಿರ್ಣಾಯಕ ಹೋರಾಟಕ್ಕೆ ಸಿದ್ಧವಾಗಿರುವ ಭಾರತ, ಪಾಕಿಸ್ತಾನದ ಯಾವುದೇ ಬೇಡಿಕೆಗಳನ್ನು ಪರಿಗಣಿಸುವ ಸಾಧ್ಯತೆ ತೀರಾ ಕಡಿಮೆಯಿದ್ದು, ತನ್ನ ಕಠಿಣ ನಿಲುವುಗಳನ್ನು ಸಡಿಲಗೊಳಿಸದಿರಬಹುದು.


ಹೇಗೂ ಅಮೆರಿಕಾ ಮಧ್ಯಸ್ಥಿಕೆ ವಹಿಸಿರುವುದರಿಂದ ಅನಗತ್ಯ ಯುದ್ಧವನ್ನು ಮೈಮೇಲೆ ಎಳೆದುಕೊಳ್ಳಬೇಡಿ. ನಿಮ್ಮ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಶಾಂತಿ ಒಪ್ಪಂದಕ್ಕೆ ಬನ್ನಿ. ಯುದ್ಧದ ಸಾಧ್ಯತೆಗಳನ್ನು ದೂರ ಮಾಡಿ ಎಂದು ಪಾಕ್‌ಗೆ ಕಿವಿಹಿಂಡಿ ಹೇಳಬಹುದು.



ಶಹಬಾಜ್ ಷರೀಫ್

ತಾನಿರುವ ಪರಿಸ್ಥಿತಿಯಲ್ಲಿ ಪಾಕ್, ಯುದ್ಧ ನಡೆಸುವ ಪ್ರಯತ್ನಕ್ಕೆ ಮುಂದಾಗುವುದಿಲ್ಲ. ಅಂತಿಮವಾಗಿ ಕೆಲವೊಂದು ಚೌಕಾಸಿ ಮೂಲಕ ಭಾರತದೊಂದಿಗೆ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆಗಳು ದಟ್ಟವಾಗಿವೆ.

ಆಪರೇಷನ್ ಸಿಂಧೂರ್‌ನಲ್ಲಿ ಹತ್ಯೆಗೀಡಾದ ಐವರು ಪ್ರಮುಖ ಉಗ್ರರ ಗುರುತು ಪತ್ತೆ



ನವದೆಹಲಿ, ಮೇ10–ಮೇ 7 ರಂದು ಭಾರತ ಪಾಕಿಸ್ತಾನದಲ್ಲಿ 'ಆಪರೇಷನ್ ಸಿಂಧೂರ್' ಹೆಸರಲ್ಲಿ ನಡೆಸಿದ ದಾಳಿಯಲ್ಲಿ ಮೃತಪಟ್ಟ ನಿಷೇಧಿತ ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್–ಎ–ತೈಬಾ ಮತ್ತು ಜೈಶ್–ಎ–ಮೊಹಮ್ಮದ್‌ಗೆ ಸೇರಿದ ಐವರು ಉಗ್ರರ ಹೆಸರುಗಳನ್ನು ಬಹಿರಂಗಪಡಿಸಿದೆ.

ಅವರಲ್ಲಿ ಒಬ್ಬ ಎಲ್‌ಇಟಿಯ ಮುದಾಸರ್ ಖಾದಿಯಾನ್ ಖಾಸ್ ಅಲಿಯಾಸ್ ಮುದಾಸರ್ ಅಲಿಯಾಸ್ ಅಬು ಜುಂದಾಲ್. ಮುರಿಡ್ಕೆಯಲ್ಲಿರುವ ಮರ್ಕಜ್ ತೈಬಾದ ಉಸ್ತುವಾರಿ ವಹಿಸಿದ್ದ.

ಜೆಇಎಂ ಸಂಸ್ಥಾಪಕ ಮೌಲಾನಾ ಮಸೂದ್ ಅಜರ್ ಹಿರಿಯ ಸಹೋದರ ಹಫೀಜ್ ಮುಹಮ್ಮದ್ ಜಮೀಲ್ ಕೂಡ ಕೊಲ್ಲಲ್ಪಟ್ಟಿದ್ದಾನೆ. ಈತ ದಾಳಿಯಲ್ಲಿ ಹಾನಿಗೊಳಗಾದ ಬಹವಾಲ್ಪುರದ ಮರ್ಕಜ್ ಸುಭಾನ್ ಅಲ್ಲಾಹ್‌ನ ಉಸ್ತುವಾರಿ ವಹಿಸಿದ್ದ. ಯುವಕರಿಗೆ ಆಮೂಲಾಗ್ರ ಬೋಧನೆ ಮತ್ತು ಜೆಇಎಂಗೆ ನಿಧಿ ಸಂಗ್ರಹಣೆಯಲ್ಲಿ ಅವನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಎಂದು ಮೂಲಗಳು ತಿಳಿಸಿವೆ.

ಉಸ್ತಾದ್ ಜಿ, ಮೊಹಮ್ಮದ್ ಸಲೀಮ್ ಮತ್ತು ಘೋಸಿ ಸಹಾಬ್ ಎಂಬ ಅಡ್ಡ ಹೆಸರುಗಳನ್ನು ಹೊಂದಿದ್ದ, ಜೆಇಎಂ ಜೊತೆ ಸಂಬಂಧ ಹೊಂದಿದ್ದ ಮೊಹಮ್ಮದ್ ಯೂಸುಫ್ ಅಜರ್ ಕೂಡ ಕೊಲ್ಲಲ್ಪಟ್ಟಿದ್ದಾನೆ. ಮಸೂದ್ ಅಜರ್‌ನ ಸೋದರ ಮಾವ ಐಸಿ –814 ವಿಮಾನ ಅಪಹರಣ ಪ್ರಕರಣದಲ್ಲಿ ಬೇಕಾಗಿದ್ದ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಹಲವಾರು ಭಯೋತ್ಪಾದಕ ದಾಳಿಗಳಲ್ಲಿ ಭಾಗಿಯಾಗಿದ್ದ.

ಎಲ್‌ಇಟಿಯ ಖಾಲಿದ್ ಅಲಿಯಾಸ್ ಅಬು ಆಕಾಶ ಮತ್ತು ಜೆಇಎಂನ ಮೊಹಮ್ಮದ್ ಹಸನ್ ಖಾನ್ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಒಂಬತ್ತು ಭಯೋತ್ಪಾದಕ ತಾಣಗಳನ್ನು ಹೊಡೆದುರುಳಿಸಿದ ಕಾರ್ಯಾಚರಣೆಯಲ್ಲಿ ಕೊಲ್ಲಲ್ಪಟ್ಟ ಇತರ ಇಬ್ಬರು ಭಯೋತ್ಪಾದಕರು.

ಖಾಲಿದ್ ಜಮ್ಮು– ಕಾಶ್ಮೀರದಲ್ಲಿ ಅನೇಕ ಭಯೋತ್ಪಾದಕ ದಾಳಿಗಳಲ್ಲಿ ಭಾಗಿಯಾಗಿದ್ದನು, ಅಫ್ಘಾನಿಸ್ತಾನದಿಂದ ಶಸ್ತ್ರಾಸ್ತ್ರಗಳ ಕಳ್ಳಸಾಗಣೆಯಲ್ಲಿ ತೊಡಗಿದ್ದನು. ಫೈಸಲಾಬಾದ್‌ನಲ್ಲಿ ನಡೆದ ಅಂತ್ಯಕ್ರಿಯೆಯಲ್ಲಿ ಪಾಕಿಸ್ತಾನದ ಹಿರಿಯ ಸೇನಾ ಅಧಿಕಾರಿಗಳು ಮತ್ತು ಫೈಸಲಾಬಾದ್‌ನ ಉಪ ಆಯುಕ್ತರು ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ. ಖಾನ್ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಜೆಇಎಂನ ಕಾರ್ಯಾಚರಣಾ ಕಮಾಂಡರ್ ಮುಫ್ತಿ ಅಸ್ಗರ್ ಖಾನ್ ಕಾಶ್ಮೀರಿಯ ಮಗ. ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ.

ರಾಜ್ಯಾದ್ಯಂತ ಕಟ್ಟೆಚ್ಚರ ವಹಿಸಿ; ನಾಗರಿಕರ ರಕ್ಷಣೆಗೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಿ

ಜಿಲ್ಲಾಧಿಕಾರಿಗಳು, ಎಸ್ಪಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟಾದೇಶ

ಬೆಂಗಳೂರು, ಮೇ 10(ಕೆಎಂಶಿ)– ಭಾರತ–ಪಾಕಿಸ್ತಾನ ನಡುವಿನ ಉದ್ವಿಗ್ನತೆ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಆಯಕಟ್ಟಿನ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಿಂಚಿತ್ತೂ ಲೋಪ ಆಗದಂತೆ ಭದ್ರತೆ ಬಿಗಿಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಇಂದಿಲ್ಲಿ ಕಟ್ಟುನಿಟ್ಟಿನ ಆದೇಶ ಮಾಡಿದ್ದಾರೆ.

ಯುದ್ಧದ ಪರಿಸ್ಥಿತಿ ನಿರ್ಮಾಣವಾದರೆ ಆಹಾರ ಸಾಮಗ್ರಿ, ಔಷಧಿ ಸೇರಿದಂತೆ ಅಗತ್ಯ ವಸ್ತುಗಳ ಸಂಗ್ರಹಕ್ಕೆ ಮುಂದಾಗಿ ಎಂದು ಮುಖ್ಯಮಂತ್ರಿ ಅವರು, ಜಿಲ್ಲಾಡಳಿತಕ್ಕೆ ಆದೇಶಿಸಿದ್ದಾರೆ.

ಪ್ರಸ್ತುತ ಜಿಲ್ಲೆಗಳಲ್ಲಿನ ಆಹಾರ ಮತ್ತು ಔಷಧ ಸಂಗ್ರಹಣೆ ದಾಸ್ತಾನು ಎಷ್ಟಿದೆ ಎಂಬ ಮಾಹಿತಿ ಪಡೆದು ಇನ್ನೂ ಹೆಚ್ಚಿನ ಸಂಗ್ರಹಕ್ಕೆ ಮುಂದಾಗಿ, ಅಗತ್ಯವಿರುವ ಸಹಕಾರವನ್ನು ಸರ್ಕಾರ ನೀಡಲಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಜಿಲ್ಲಾ ಆಸ್ಪತ್ರೆಗಳವರೆಗೆ ಎಂತಹದ್ದೇ ಸಂದರ್ಭ ಎದುರಾದರೂ ಚಿಕಿತ್ಸೆ ಒದಗಿಸುವ ಸಿದ್ಧತೆ ಮಾಡಿಕೊಳ್ಳಿ, ಕುಡಿಯುವ ನೀರಿಗೆ ಆದ್ಯತೆ ಕೊಡಿ, ಜಲಾಗಾರಗಳ ರಕ್ಷಣೆಗೆ ಗಮನ ನೀಡಿ ಎಂದಿದ್ದಾರೆ.

24 ಗಂಟೆಯೂ ಸುರಕ್ಷತಾ ಕಾರ್ಯಕ್ರಮ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ನಾಗರಿಕರ ರಕ್ಷಣೆ ಕುರಿತು ಹಿರಿಯ ಪೊಲೀಸ್ ಅಧಿಕಾರಿಗಳು, ಪೊಲೀಸ್ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿಗಳು, ಸದ್ಯದ ಪರಿಸ್ಥಿತಿಯ ಮಾಹಿತಿ ಪಡೆದು, ತೀವ್ರ ನಿಗಾ ವಹಿಸುವಂತೆ ಸೂಚಿಸಿದರು.

ಕೇಂದ್ರ ಗೃಹ ಇಲಾಖೆ ರಾಜ್ಯಗಳಿಗೆ ನೀಡಿರುವ ಸಲಹೆ–ಸೂಚನೆ ಮತ್ತು ಕಟ್ಟೆಚ್ಚರದ ಮಾಹಿತಿ ಒಳಗೊಂಡ ಸುತ್ತೋಲೆ ಪ್ರತಿಗಳನ್ನು ರಾಜ್ಯ ಗುಪ್ತಚರ ಅಧಿಕಾರಿಗಳು ಎಲ್ಲಾ ಜಿಲ್ಲೆಗಳ ಪ್ರಮುಖ ಅಧಿಕಾರಿಗಳಿಗೆ ತಲುಪಿಸಿದ್ದಾರೆ.

ಯುದ್ಧದ ಈ ಸಮಯದಲ್ಲಿ ಅಧಿಕಾರಿಗಳು ವಿಶ್ರಮಿಸದೆ, ದಿನದ 24 ಗಂಟೆಯೂ ಬಿಗಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.



ಜನರ ರಕ್ಷಣೆ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ, ಇದರಿಂದ ಯಾವುದೇ ಅಧಿಕಾರಿ ನುಣುಚಿಕೊಳ್ಳಲು ಸಾಧ್ಯವಿಲ್ಲ.

ಭಯೋತ್ಪಾದನಾ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ಮತ್ತು ಕೋಮು ಸೌಹಾರ್ದಕ್ಕೆ ಧಕ್ಕೆ ಬರದಂತೆ ನಿಗಾ ವಹಿಸಬೇಕು. ಕಾಲಾನುಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಗುಪ್ತಚರ ವಿಭಾಗ ನೀಡುವ ಎಚ್ಚರಿಕೆಗಳನ್ನು ಚಾಚೂ ತಪ್ಪದೆ ಪಾಲಿಸಬೇಕು.

ಸುರಕ್ಷತಾ ಕಾರ್ಯಗಳಲ್ಲಿ ಲೋಪ ಆಗಬಾರದು: ರಾಷ್ಟ್ರ ಸುರಕ್ಷತಾ ಕಾರ್ಯಗಳಲ್ಲಿ ಯಾವುದೇ ಲೋಪ ಸಹಿಸಲು ಸಾಧ್ಯವಿಲ್ಲ. ನಿಮ್ಮ ಆಡಳಿತ ವ್ಯಾಪ್ತಿಗೆ ಬರುವ ಸಾರ್ವಜನಿಕ ಆಸ್ತಿ–ಪಾಸ್ತಿಗಳ ರಕ್ಷಣಾ ಜವಾಬ್ದಾರಿ ನಿಮ್ಮಗಳದ್ದಾಗಿದೆ ಎಂದು ಜಿಲ್ಲಾಡಳಿತಗಳಿಗೆ ಸೂಚಿಸಿದ್ದಾರೆ.

ವಿದೇಶಿ ರಾಜತಾಂತ್ರಿಕ ಕಚೇರಿಗಳು, ಸಂಶೋಧನಾ ಕೇಂದ್ರಗಳು, ವಿಮಾನ ನಿಲ್ದಾಣಗಳು, ಜಲಾಶಯಗಳು, ಉಪಗ್ರಹ ಕೇಂದ್ರಗಳು, ಜಲವಿದ್ಯುತ್ ಹಾಗೂ ಶಾಖೋತ್ಪನ್ನ ಸ್ಥಾವರಗಳು ಶತ್ರು ರಾಷ್ಟ್ರದ ವಿಧ್ವಂಸಕ ಕೃತ್ಯದ ಗುರಿಯಾಗಿರುತ್ತವೆ, ಇವುಗಳ ರಕ್ಷಣಾ ಜವಾಬ್ದಾರಿ ಕೇಂದ್ರದ ಜೊತೆಗೆ ರಾಜ್ಯಗಳದ್ದೂ ಆಗಿರುತ್ತದೆ.

ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುವ ಸಾಫ್ಟ್‌ವೇರ್ ಸಂಸ್ಥೆಗಳು, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕೇಂದ್ರಗಳು, ಪೈಪ್‌ಲೈನ್ ಕೇಂದ್ರಗಳು, ಭಾರಿ ಕೈಗಾರಿಕೆಗಳೂ ಶತ್ರು ರಾಷ್ಟ್ರ ನಾಶಪಡಿಸಲು ಯತ್ನಿಸುವ ತಾಣಗಳಾಗಿರುತ್ತವೆ. ಆದ್ದರಿಂದ ಇವುಗಳ ರಕ್ಷಣಾ ಜವಾಬ್ದಾರಿಯೂ ಹೆಚ್ಚಿನದ್ದಾಗಿರುತ್ತದೆ.

ಅಲ್ಲದೆ, ರಾಷ್ಟ್ರೀಯ ಸ್ಮಾರಕಗಳು, ಪ್ರವಾಸೀ ತಾಣಗಳ ರಕ್ಷಣೆ ಹಾಗೂ ಈ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರ ಸುರಕ್ಷತೆಯೂ ನಮ್ಮ ಹೊಣೆಗಾರಿಕೆ ಆಗಿರುತ್ತದೆ.

ಕೋಮು ಸೌಹಾರ್ದತೆ ಕದಡಲು ಶತ್ರು ರಾಷ್ಟ್ರಕ್ಕೆ ದೇವಾಲಯಗಳು, ಗುರುದ್ವಾರ, ಮಸೀದಿ ಹಾಗೂ ಚರ್ಚ್‌ಗಳು ಗುರಿ ಆಗಿರುತ್ತವೆ ಎಂಬುದನ್ನು ಗಮನದಲ್ಲಿಟ್ಟು ಕೊಂಡು ಇವುಗಳ ಭದ್ರತೆ ಮತ್ತು ಸುರಕ್ಷತೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಕಿವಿಮಾತು ಹೇಳಿದರು.

ಸಾರ್ವಜನಿಕ ಸ್ಥಳಗಳ ಸುರಕ್ಷತೆಗೆ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು. ಸಮಾಜಘಾತುಕ ಶಕ್ತಿಗಳ ಚಲನವಲನದ ಮೇಲೆ ಸದಾ ನಿಗಾವಹಿಸಬೇಕು.

ಸ್ಫೋಟಕಗಳಂತಹ ಅಪಾಯಕಾರಿ ವಸ್ತುಗಳು ಕಂಡ ತಕ್ಷಣ ಪೊಲೀಸರಿಗೆ ತಿಳಿಸುವಂತೆ ಹಾಗೂ ನಾಗರಿಕರು ತಮ್ಮ ಕರ್ತವ್ಯ ಮತ್ತು ಜವಾಬ್ದಾರಿ ಅರಿತು ಕಾನೂನು ವ್ಯಾಪ್ತಿಯಲ್ಲಿ ನಿಭಾಯಿಸುವ ಅರಿವು ಮೂಡಿಸುವ ಕಾರ್ಯ ಅಧಿಕಾರಿಗಳದ್ದಾಗಿದೆ.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳು ಪ್ರಮುಖ ಪಾತ್ರ ವಹಿಸಿದ್ದು, ಈ ಮೂಲಕ ಸಾರ್ವಜನಿಕರಿಗೆ ತಪ್ಪು ಸಂದೇಶಗಳು ರವಾನೆ ಆಗದಂತೆ ಎಚ್ಚರ ವಹಿಸಬೇಕು.

ಭಾರತ ವಿರೋಧಿ ಹಾಗೂ ದೇಶ ದ್ರೋಹಿ ಚಟುವಟಿಕೆಗಳು ಕಂಡಬಂದ ತಕ್ಷಣ ಅಂತಹ ವ್ಯಕ್ತಿ ಯಾರೇ ಆಗಿದ್ದರೂ ಕೂಡಲೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಮೂಲಕ ರಾಷ್ಟ್ರದ ಭದ್ರತೆಯನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದರು.

ಸಾರ್ವಜನಿಕ ಶಾಂತಿಗೆ ಭಂಗ ತರುವ ಯಾವುದೇ ವಿಚಾರಗಳಿದ್ದರೂ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು. ಸರ್ಕಾರದ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು, ಸಾರ್ವಜನಿಕರ ಹಾಗೂ ಸಾರ್ವಜನಿಕ ಆಸ್ತಿಗಳ ರಕ್ಷಣೆ ಎಲ್ಲರ ಹೊಣೆಗಾರಿಕೆ ಆಗಿರುತ್ತದೆ ಎಂದರು.

'ಆಪರೇಷನ್ ಸಿಂಧೂರ' ಹಿನ್ನೆಲೆ

ಮೈಸೂರಲ್ಲಿ ವ್ಯಾಪಕ ಕಟ್ಟೆಚ್ಚರ



ಮೈಸೂರು, ಮೇ 10(ಆರ್‌ಕೆ)– ಪಾಕಿಸ್ತಾನ ಉಗ್ರರ ತಾಣಗಳ ವಿರುದ್ಧ 'ಆಪರೇಷನ್ ಸಿಂಧೂರ' ಮೂಲಕ ಭಾರತ ದಾಳಿ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ವ್ಯಾಪಕ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ.

ಯುದ್ಧದ ಪರಿಸ್ಥಿತಿಯಿಂದಾಗಿ ಮೈಸೂರು ಪೊಲೀಸರು ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು, ಮಂಡಕಳ್ಳಿ ವಿಮಾನ ನಿಲ್ದಾಣ, ರೈಲು, ಬಸ್ ನಿಲ್ದಾಣ, ಚಾಮುಂಡಿಬೆಟ್ಟ, ಅರಮನೆ, ಮೃಗಾಲಯ, ಜಗನ್ಮೋಹನ ಅರಮನೆ ಸೇರಿದಂತೆ ನಗರದಾದ್ಯಂತ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿ ನಿಗಾ ವಹಿಸಿದ್ದಾರೆ.

ಎಲ್ಲಾ ಠಾಣೆಗಳ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳು ನಿತ್ಯ ದಿನದ 24 ಗಂಟೆಯೂ ಗಸ್ತಿನಲ್ಲಿದ್ದು, ವಿಧ್ವಂಸಕ ಕೃತ್ಯಗಳು ನಡೆಯದಂತೆ ಎಚ್ಚರ ವಹಿಸಿದ್ದಾರೆ. ದೇವಾಲಯಗಳು, ಚರ್ಚ್, ಪ್ರಾರ್ಥನಾ ಮಂದಿರ, ವಾಣಿಜ್ಯ ಕಟ್ಟಡ, ಮಾಲ್‌ಗಳಿಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ಕರ್ತವ್ಯದ ಬಗ್ಗೆ ಗಮನಹರಿಸುತ್ತಿರುವ ಪೊಲೀಸರು, ಯಾವುದೇ ಅನಾಹುತಗಳು ನಡೆಯದಂತೆ ಕಟ್ಟೆಚ್ಚರ ವಹಿಸಿದ್ದಾರೆ.

ವಿಶೇಷ ಭದ್ರತೆ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್, ಮೈಸೂರು ನಗರದ ಹೋಟೆಲು, ಲಾಡ್ಜ್‌ಗಳು, ಹೋಂ ಸ್ಟೇಗಳು, ಪೇಯಿಂಗ್ ಗೆಸ್ಟ್‌ಹೌಸಗಳ ಮೇಲೆ ನಿಗಾ ಇರಿಸಿದ್ದು, ಸಿಸಿಟಿವಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿರಿಸಬೇಕೆಂದು ಸೂಚನೆ ನೀಡಲಾಗಿದೆ ಎಂದರು.


ಮೈಸೂರು ನಗರ ಸಂಪರ್ಕಿಸುವ ರಾಜ್ಯ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಚೆಕ್‌ಪೋಸ್ಟ್ ರಚಿಸಿ ನಿತ್ಯ 24 ಗಂಟೆಯೂ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆಯಲ್ಲದೇ, ಬಸ್ ಸ್ಟ್ಯಾಂಡ್, ರೈಲ್ವೇ ಸ್ಟೇಷನ್, ವಿಮಾನ ನಿಲ್ದಾಣದ ಬಳಿಯ ವೆಹಿಕಲ್ ಪಾರ್ಕಿಂಗ್ ಸ್ಥಳಗಳಲ್ಲಿ ಪರಿಶೀಲನೆ ನಡೆಸಿ ಸಂಶಯ ಬಂದ ವಾಹನ, ವ್ಯಕ್ತಿಗಳನ್ನು ವಶಕ್ಕೆ ಪಡೆಯಲಾಗುತ್ತಿದೆ ಎಂದು ಅವರು ತಿಳಿಸಿದರು.

ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್ (ಸಿಐಎಸ್‌ಎಫ್) ಮತ್ತು ಕರ್ನಾಟಕ ರಾಜ್ಯ ಪೊಲೀಸ್ ಇಲಾಖಾ ಸಮನ್ವಯತೆಯಿಂದ ಭದ್ರತಾ ಕಾರ್ಯ ಮುಂದುವರಿದಿದ್ದು, ಆ್ಯಂಟಿ ಸಬೋಟೇಜ್ ಚೆಕ್ ಟೀಂ (ಎಎಸ್‌ಸಿಟಿ), ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ತಂಡ, ಶ್ವಾನ ದಳವನ್ನು ಬಳಸಿಕೊಂಡು ತಪಾಸಣೆ ನಡೆಸಲಾಗುತ್ತಿದೆ ಎಂದು ಮುತ್ತುರಾಜ್ ತಿಳಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಹರಿದು ಬರುವ ಆಪರೇಷನ್ ಸಿಂಧೂರ ಸಂಬಂಧಿಸಿದ ಮಾಹಿತಿಗಳನ್ನು ಪರಿಶೀಲಿಸದೇ ಬೇರೆಯವರಿಗೆ ಷೇರ್ ಮಾಡಬಾರದು ಹಾಗೂ ಅದೇ ಮಾಹಿತಿಯನ್ನು ಯಥಾವತ್ತಾಗಿ ಮುದ್ರಣ ಮಾಧ್ಯಮಗಳಲ್ಲಿ ಪ್ರಸರಣ ಮಾಡಿ ಸಾರ್ವಜನಿಕರಲ್ಲಿ ಗೊಂದಲ, ಆತಂಕ ಸೃಷ್ಟಿಸಬಾರದೆಂದು ತಿಳಿಸಿದ್ದಾರೆ.

ಪಾಕ್ ಶೆಲ್ ದಾಳಿಗೆ ಜಮ್ಮು–ಕಾಶ್ಮೀರದ ಹೆಚ್ಚುವರಿ ಜಿಲ್ಲಾ ಅಭಿವೃದ್ಧಿ ಆಯುಕ್ತ ಸಾವು

ಶ್ರೀನಗರ, ಮೇ 10–ರಜೌರಿ ಜಿಲ್ಲೆಯ ಕೈಗಾರಿಕಾ ಪ್ರದೇಶದಲ್ಲಿರುವ ಜಿಲ್ಲಾಧಿಕಾರಿಗಳ ನಿವಾಸದ ಮೇಲೆ ಪಾಕಿಸ್ತಾನ ನಡೆಸಿದ ಶೆಲ್ ದಾಳಿಯಲ್ಲಿ ಗಂಭೀರ ಗಾಯಗೊಂಡಿದ್ದ ಹೆಚ್ಚುವರಿ ಜಿಲ್ಲಾ ಅಭಿವೃದ್ಧಿ ಆಯುಕ್ತ ರಾಜ್‌ಕುಮಾರ್ ಥಾಪ್ಪಾ ಮತ್ತು ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ.



'ರಜೌರಿಯಿಂದ ಆಘಾತಕಾರಿ ಸುದ್ದಿಯೊಂದು ಬಂದಿದೆ. ನಾವು ಜಮ್ಮು ಮತ್ತು ಕಾಶ್ಮೀರ ಆಡಳಿತ ಸೇವೆಗಳ ಅಧಿಕಾರಿಯನ್ನು ಕಳೆದುಕೊಂಡಿದ್ದೇವೆ. ನಿನ್ನೆಯಷ್ಟೇ ಅವರು ಜಿಲ್ಲೆಯಾದ್ಯಂತ ಉಪ ಮುಖ್ಯಮಂತ್ರಿಯೊಂದಿಗೆ ಇದ್ದರು. ಅಲ್ಲದೇ ನಾನು ಅಧ್ಯಕ್ಷತೆ ವಹಿಸಿದ್ದ ಆನ್‌ಲೈನ್ ಸಭೆಯಲ್ಲಿ ಭಾಗವಹಿಸಿದ್ದರು. ಇಂದು ಅಧಿಕಾರಿಯ ನಿವಾಸದ ಮೇಲೆ ಪಾಕ್ ಶೆಲ್ ದಾಳಿ ನಡೆಸಿದ್ದು, ನಮ್ಮ ಹೆಚ್ಚುವರಿ ಜಿಲ್ಲಾ ಅಭಿವೃದ್ಧಿ ಆಯುಕ್ತ ರಾಜ್‌ಕುಮಾರ್ ಥಾಪ್ಪಾ ಸಾವನ್ನಪ್ಪಿದ್ದಾರೆ. ಈ ಭೀಕರ ಜೀವಹಾನಿಯಿಂದ ನನಗೆ ಆಘಾತವಾಗಿದೆ. ಈ ದುಃಖವನ್ನು ವ್ಯಕ್ತಪಡಿಸಲು ನನಗೆ ಪದಗಳಿಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಓಮರ್ ಅಬ್ದುಲ್ಲಾ ತಮ್ಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪಾಕ್ ಶೆಲ್ ದಾಳಿಯಲ್ಲಿ ಬಿಎಸ್‌ಎಫ್ ಯೋಧ ಹುತಾತ್ಮ, ಏಳು ಮಂದಿಗೆ ಗಾಯ

ಜಮ್ಮು: ಜಮ್ಮುವಿನ ಅಂತಾರಾಷ್ಟ್ರೀಯ ಗಡಿಯಲ್ಲಿ ಶನಿವಾರ ಪಾಕಿಸ್ತಾನ ನಡೆಸಿದ ಗುಂಡಿನ ದಾಳಿಯಲ್ಲಿ ಬಿಎಸ್‌ಎಫ್ ಯೋಧರೊಬ್ಬರು ಹುತಾತ್ಮರಾಗಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಆರ್‌ಎಸ್ ಪುರ ಸೆಕ್ಟರ್‌ನಲ್ಲಿ ಈ ಘಟನೆ ನಡೆದಿದೆ. ಸಬ್‌ಇನ್ಸ್‌ಪೆಕ್ಟರ್ ಮೊಹಮ್ಮದ್ ಇಮ್ತೇಯಾಜ್ ಅವರು ಹುತಾತ್ಮರಾಗಿರುವುದಾಗಿ ಹಿರಿಯ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪಾಕಿಸ್ತಾನವು ಆರಂಭಿಸಿದ ಗಡಿಯಾಚೆಗಿನ ಗುಂಡಿನ ದಾಳಿಯಲ್ಲಿ ಇಮ್ತೇಯಾಜ್ ಹುತಾತ್ಮರಾದರೆ, ಇತರ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸಬ್ ಇನ್ಸ್‌ಪೆಕ್ಟರ್ ಎಂಡಿ ಇಮ್ತೇಯಾಜ್ ಅವರು ರಾಷ್ಟ್ರದ ಸೇವೆಯಲ್ಲಿ ಮಾಡಿದ ಅತ್ಯುನ್ನತ ತ್ಯಾಗವನ್ನು ಗೌರವಿಸುತ್ತೇವೆ ಎಂದು ಎಂದು ಪಡೆಯ ಜಮ್ಮು ಗಡಿಭಾಗವು ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ತಿಳಿಸಿದೆ.

ಪಾಕ್ ಶೆಲ್ ದಾಳಿಗೆ ಬಲಿಯಾದವರ ಕುಟುಂಬಕ್ಕೆ ತಲಾ 10 ಲಕ್ಷ ಪರಿಹಾರ

ಜಮ್ಮು-ಕಾಶ್ಮೀರ ಸಿಎಂ ಒಮರ್ ಅಬ್ದುಲ್ಲಾ ಘೋಷಣೆ



ರಜೌರಿ ಎಡಿಡಿಸಿ ರಾಜ್ ಕುಮಾರ್ ಥಾಪಾ ಅವರ ಕುಟುಂಬವನ್ನು ಭೇಟಿಯಾದ ಜಮ್ಮು–ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ

ಜಮ್ಮು, ಮೇ.10– ಪಾಕಿಸ್ತಾನ ನಡೆಸಿದ ಶೆಲ್ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ತಲಾ 10 ಲಕ್ಷ ಪರಿಹಾರವನ್ನು ಶನಿವಾರ ಘೋಷಿಸಿದ್ದಾರೆ.

ಮೇ 7ರಂದು ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕರ 9 ಶಿಬಿರಗಳ ಮೇಲೆ ದಾಳಿ ನಡೆಸಿದ್ದವು. ಇದಾದ ನಂತರ ಪೂಂಚ್, ರಾಜೌರಿ, ಜಮ್ಮು ಮತ್ತು ಬಾರಾಮುಲ್ಲಾ ವಲಯಗಳಲ್ಲಿ ಪಾಕ್ ಸೇನೆ ನಡೆಸಿದ ಶೆಲ್ ದಾಳಿಯಲ್ಲಿ ಹೆಚ್ಚುವರಿ ಜಿಲ್ಲಾ ಅಭಿವೃದ್ಧಿ ಆಯುಕ್ತ ಮತ್ತು 19 ಮಂದಿ ನಾಗರಿಕರು ಮೃತಪಟ್ಟಿದ್ದಾರೆ.

ಬುಧವಾರ ಪೂಂಚ್‌ನಲ್ಲಿ 12, ಶುಕ್ರವಾರ ಉರಿ ಮತ್ತು ಪೂಂಚ್‌ನಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ. ಶನಿವಾರ ಬೆಳಿಗ್ಗೆ ಸರ್ಕಾರಿ ಹಿರಿಯ ಅಧಿಕಾರಿ ಸೇರಿದಂತೆ ಐವರು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ.

ಇತ್ತೀಚೆಗೆ ಪಾಕಿಸ್ತಾನ ನಡೆಸಿದ ಶೆಲ್ ದಾಳಿಯಿಂದ ಅಮಾಯಕರ ಜೀವಹಾನಿಯಾಗಿದ್ದು, ತೀವ್ರ ನೋವುಂಟಾಗಿದೆ. ಜನರ ಕಷ್ಟವನ್ನು ದೂರ ಮಾಡಲು ನಮ್ಮ ಸರ್ಕಾರ ಸಾಧ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಮುಖ್ಯಮಂತ್ರಿ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೈಸೂರು ಅರಮನೆ ಆವರಣದಲ್ಲಿ ರಕ್ಷಣಾ ಕಾರ್ಯಾಚರಣೆ!

ಆಪತ್ಕಾಲದ ಪರಿಸ್ಥಿತಿ ಎದುರಿಸುವ ಪೂರ್ಣ ಪ್ರಮಾಣದ ಯಶಸ್ವಿ ತಾಲೀಮು

ಮೈಸೂರು, ಮೇ 10(ಎಂಕೆ)– ವಿಶ್ವವಿಖ್ಯಾತ ಮೈಸೂರು ಅರಮನೆ ಆವರಣದಲ್ಲಿ ದಿಢೀರ್ ಏರ್‌ಸ್ಟ್ರೇಕ್.... ಸರಣಿ ಬಾಂಬ್ ಸ್ಫೋಟಕ್ಕೆ ನಲುಗಿದ ನೂರಾರು ಪ್ರವಾಸಿಗರು... ಸಮರೋಪಾದಿಯಲ್ಲಿ ನಡೆದ ರಕ್ಷಣಾ ಕಾರ್ಯಾಚರಣೆ.... ಭಾರೀ ಭದ್ರತೆ ನಿಯೋಜನೆ...!!!

ಹೌದು! ಜಗತ್ಪ್ರಸಿದ್ಧ ಮೈಸೂರು ಅರಮನೆ ಆವರಣದಲ್ಲಿ ಶನಿವಾರ ಮದ್ದು–ಗುಂಡಿನ ಶಬ್ದಗಳು ಮೊಳಗಿದವು. ಬಾಂಬ್ ದಾಳಿಗೆ ಗಾಯಗೊಂಡು ಒದ್ದಾಡುತ್ತಿದ್ದ ನೂರಾರು ಮಂದಿಯನ್ನು ಸಮರೋಪಾದಿಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ರಕ್ಷಣೆ ಮಾಡಲಾಯಿತಲ್ಲದೆ ಬಾಂಬ್ ದಾಳಿಗೆ ಹೊತ್ತಿ ಉರಿಯುತ್ತಿದ್ದ ಗುಡಿಸಲನ್ನು ಕ್ಷಣಾರ್ಧದಲ್ಲಿಯೇ ನಂದಿಸಿ, ಅಪಾರ ಹಾನಿಯನ್ನು ಸ್ವಲ್ಪದರಲ್ಲಿಯೇ ತಡೆಗಟ್ಟಲಾಯಿತು.

ಸಂಜೆ 5 ಗಂಟೆಗೆ ಸುಮಾರಿಗೆ ಅರಮನೆ ಸುತ್ತಮುತ್ತ ಸಂಶಯಾಸ್ಪದ ಜೆಟ್ ಹಾರಾಡುತ್ತಿದೆ ಎಂಬ ಮಾಹಿತಿ ವಿಮಾನ ಪ್ರಾಧಿಕಾರದಿಂದ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂಗೆ ರವಾನೆಯಾಗುತ್ತಿದ್ದಂತೆ ಅರಮನೆ ಆವರಣದ 8 ಕಡೆಗಳಲ್ಲಿ ಬಾಂಬ್ ದಾಳಿ ನಡೆಸಲಾಯಿತು. ಭಾರೀ ಅಪಾಯದ ಮುನ್ಸೂಚನೆ ನೀಡುವ ಸೈರನ್ ಮೊಳಗುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಬಾಂಬ್ ನಿಷ್ಕ್ರೀಯ ದಳ, ಶ್ವಾನದಳ, ಕಮಾಂಡೊ ಪಡೆ, ಪೊಲೀಸ್ ಇಲಾಖೆಯಿಂದ ಹೈ ಅಲರ್ಟ್ ಘೋಷಣೆಯೊಂದಿಗೆ ಭಾರೀ ಭದ್ರತೆ ಒದಗಿಸಲಾಯಿತು. ಹಾಗೆಯೇ ನಗರದ ಜನಸಂದಣಿ ಹೆಚ್ಚಾಗಿರುವ ಪ್ರವಾಸಿ ತಾಣಗಳು, ರೈಲು ನಿಲ್ದಾಣ, ಬಸ್ ನಿಲ್ದಾಣ, ಆರ್‌ಬಿಐ, ಸಿಎಫ್‌ಟಿಆರ್‌ಐ, ಇನ್‌ಫೋಸಿಸ್ ಸೇರಿದಂತೆ ಪ್ರಮುಖ ಸ್ಥಳಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಲಾಯಿತು.

ಹಾಗೆಯೇ ಶರವೇಗದಲ್ಲಿ ಬಂದ ಅಗ್ನಿಶಾಮಕ ಸಿಬ್ಬಂದಿ, ಬಾಂಬ್ ದಾಳಿಗೆ ಹೊತ್ತಿ ಉರಿಯುತ್ತಿದ್ದ ಗುಡಿಸಲ ಬೆಂಕಿಯನ್ನು ಕ್ಷಣಾರ್ಧದಲ್ಲಿ ನಂದಿಸಿ, ಗಾಯಗೊಂಡಿದ್ದ ಪ್ರವಾಸಿಗರು ಮತ್ತು ನಾಗರಿಕರನ್ನು ಆರೋಗ್ಯ ಇಲಾಖೆ ಸಿಬ್ಬಂದಿ ಜೊತೆಗೂಡಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ಟೆಂಟ್‌ಗೆ ಹಾಗೂ ಹೆಚ್ಚಿನ ಚಿಕಿತ್ಸೆಗೆ ಕೆ.ಆರ್.ಆಸ್ಪತ್ರೆಗೆ ರವಾನಿಸಿದರು. ಹಾಗೆಯೇ ಕತ್ತಲಾಗುತ್ತಿದ್ದಂತೆ ಬ್ಲಾಕ್ ಔಟ್(ವಿದ್ಯುತ್ ದೀಪಗಳನ್ನು ಆಫ್ ಮಾಡಿ) ಮಾಡಿ ನಾಗರಿಕರ ಸಂರಕ್ಷಣಾ ಕಾರ್ಯ ಚಟುವಟಿಕೆ ಮುಂದುವರೆಸುವ ಮೂಲಕ ಯುದ್ಧದ ತುರ್ತು ಸಂದರ್ಭದಲ್ಲಿ ನಾಗರಿಕರ ಸಂರಕ್ಷಣೆಗೆ ಮೈಸೂರು ಜಿಲ್ಲಾಡಳಿತ ಸಿದ್ಧವಾಗಿದೆ ಎಂಬುದನ್ನು ಖಚಿತ ಪಡಿಸುವುದರ ಜೊತೆಗೆ ಸುರಕ್ಷತೆಯ ಎಚ್ಚರಿಕೆಯ ಸಂದೇಶ ರವಾನಿಸಲಾಯಿತು.



ಮೈಸೂರು ಅರಮನೆ ಆವರಣದಲ್ಲಿ ಜಿಲ್ಲಾಡಳಿತದ ವತಿಯಿಂದ ಶನಿವಾರ ಡಿಫೆನ್ಸ್ ಮಾಕ್ ಡ್ರಿಲ್ ನಡೆಸಲಾಯಿತು.

ಭಾರತ–ಪಾಕಿಸ್ತಾನದ ನಡುವೆ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿ ಹಿನ್ನಲೆ ಕೇಂದ್ರ ಗೃಹ ಸಚಿವಾಲಯದ ನೀಡಿರುವ ಸೂಚನೆ ಮೇರೆಗೆ, ಮೈಸೂರು ಜಿಲ್ಲಾಡಳಿತ ನಡೆಸಿದ ನಾಗರಿಕ ರಕ್ಷಣಾ ಅಣಕು ಕವಾಯತು (ಡಿಫೆನ್ಸ್ ಮಾಕ್ ಡ್ರಿಲ್ ಅಥವಾ ಆಪರೇಷನ್ ಅಭ್ಯಾಸ್) ತುರ್ತು ಸಂದರ್ಭದಲ್ಲಿ ನಾಗರಿಕರ ಸಂರಕ್ಷಣೆ, ಭದ್ರತೆ, ಚಿಕಿತ್ಸೆ, ಸುರಕ್ಷಿತ ಪ್ರದೇಶಕ್ಕೆ ರವಾನಿಸುವ ಕಾರ್ಯವಿದಾನಗಳನ್ನು ಸಮರೋಪಾದಿಯಲ್ಲಿ ನಿರ್ವಹಿಸುವುದೇಗೆ ಎಂಬುದನ್ನು ನೈಜ ದೃಶ್ಯಗಳನ್ನು ಸೃಷ್ಟಿಸಿ ಜನಜಾಗೃತಿ ಮೂಡಿಸಲಾಯಿತು.

ಸಂಶಯಾಸ್ಪದ ಜೆಟ್ ಹಾರಾಟ, ದಿಢೀರ್ ಬಾಂಬ್ ದಾಳಿಯಾದ ತಕ್ಷಣವೇ ಎಚ್ಚರಿಕೆ ಸೈರನ್‌ಗಳು ಮೊಳಗುತ್ತಿದ್ದಂತೆ ಹೇಗೆ ಪ್ರತಿಕ್ರಿಯಿಸಬೇಕು, ಬಾಂಬ್ ಸ್ಫೋಟಗೊಂಡರೆ ಏನು ಮಾಡಬೇಕು, ಬೆಂಕಿ ಹೊತ್ತಿಕೊಂಡಾಗ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳುವುದು ಹೇಗೆ, ಅವಶೇಷಗಳ ಅಡಿ ಸಿಲುಕಿದವರನ್ನು ಹೇಗೆ ರಕ್ಷಿಸಬೇಕು, ವೈದ್ಯಕೀಯ ತುರ್ತು ಸೇವೆಗಳನ್ನು ಒದಗಿಸುವುದು ಹೇಗೆ ಎಂಬುದನ್ನು ಕಲಿಸಲಾಯಿತು.

ಮಾಕ್ ಡ್ರಿಲ್ ಯಶಸ್ವಿ: ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಅರಮನೆ ಆವರಣದಲ್ಲಿ ನಡೆದ ಅಣಕು ಪ್ರದರ್ಶನ ಯಶಸ್ವಿಯಾಯಿತು. ಹೋಮ್ ಗಾರ್ಡ್, ಸಿಐಎಸ್‌ಎಫ್, ಆರೋಗ್ಯ ಇಲಾಖೆಯ ವೈದ್ಯರು–ಸಿಬ್ಬಂದಿ ಸೇರಿದಂತೆ ವಿವಿಧ ಇಲಾಖೆಗಳ ಒಟ್ಟು 500 ಕ್ಕೂ ಹೆಚ್ಚು ಸಿಬ್ಬಂದಿ ಮಾಕ್ ಡ್ರಿಲ್‌ನಲ್ಲಿ ಭಾಗವಹಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಮುತ್ತುರಾಜ್, ಸುಂದರ್‌ರಾಜ್, ಎಸ್‌ಪಿ ವಿಷ್ಣುವರ್ಧನ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಮೈಸೂರು ಪ್ರಾಂತ್ಯ ಮುಖ್ಯ ಅಗ್ನಿಶಾಮಕ ಅಧಿಕಾರಿ ಎಸ್.ಜಯರಾಮಯ್ಯ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್, ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಕೆ.ಪಿ.ಗುರುರಾಜ್, ಕೆ.ರಮೇಶ್, ಸಂತೋಷ್ ಕುಮಾರ್, ಸೆನ್ ಎಸಿಪಿ ಸ್ನೇಹರಾಜ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಜನರ ರಕ್ಷಣೆ ಉದ್ದೇಶಿತ ಪೂರ್ವ ತಯಾರಿ...!

ಕೇಂದ್ರ ಸರ್ಕಾರದ ಆದೇಶದಂತೆ ಹಾಗೂ ರಾಜ್ಯ ಸರ್ಕಾರದ ಸೂಚನೆಯಂತೆ ಜಿಲ್ಲೆಯಲ್ಲಿ ಅಣಕು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಅಣಕು ಪ್ರದರ್ಶನದ ಮುಖ್ಯ ಉದ್ದೇಶ, ಬಾಂಬ್ ಸ್ಫೋಟಗೊಂಡ ತುರ್ತು ಸಂದರ್ಭದಲ್ಲಿ ಸಾರ್ವಜನಿಕರ ರಕ್ಷಣಾ ಕ್ರಮಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿ ಕಾಂತ್ ರೆಡ್ಡಿ ತಿಳಿಸಿದರು.

ಡಿಫೆನ್ಸ್ ಮಾಕ್ ಡ್ರಿಲ್ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ತುರ್ತು ಪರಿಸ್ಥಿತಿ ವೇಳೆ ವಿವಿಧ ಇಲಾಖೆಗಳಿಂದ ಯಾವ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡಬೇಕು. ಸಾರ್ವಜನಿಕರು ಯಾವ ರೀತಿಯಲ್ಲಿ ಇರಬೇಕು ಎಂಬುದನ್ನು ತಿಳಿಸಲು ಬೇರೆ ಬೇರೆ ಇಲಾಖೆಗಳು ಮತ್ತು ಭದ್ರತಾ ಪಡೆಯ ತಂಡಗಳು ಹೇಗೆ ಕಾರ್ಯನಿರ್ವಹಣೆ ಮಾಡಬೇಕು ಮತ್ತು ಎಂತಹದ್ದೇ ಪರಿಸ್ಥಿತಿ ಎದುರಾದರು ಸಹ ಎಲ್ಲರೂ ಸೇರಿ ಅದನ್ನು ಹೇಗೆ ನಿಭಾಯಿಸಬೇಕು ಎಂಬುದರ ಪೂರ್ವ ತಯಾರಿ ಇದಾಗಿದೆ ಎಂದು ತಿಳಿಸಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಪೊನ್ನಣ್ಣ ಭೂಮಿಪೂಜೆ

ಮಡಿಕೇರಿ, ಮೇ 10– ಪೊನ್ನಂಪೇಟೆ ತಾಲೂಕಿನ ಬಲ್ಯಮಂಡೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಮಳೆ ಹಾನಿಯಿಂದ ಹದಗೆಟ್ಟಿರುವ ಹರಿಹರ ಹಾಗೂ ತಾವರೆಕೆರೆ ಸಂಪರ್ಕ ರಸ್ತೆ, ಚಿಕ್ಕ ಮುಂಡೂರು ಹಾಗೂ ಕೋಣಂಗೇರಿ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಭೂಮಿಪೂಜೆ ನೆರವೇರಿಸಿದರು.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ಸುಮಾರು 20 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ರಸ್ತೆಗಳ ಮರು ಡಾಂಬರೀಕರಣ ಕಾಮಗಾರಿ ನಡೆಯಲಿದೆ. ಭೂಮಿಪೂಜೆ ನೆರವೇರಿಸಿದ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ ಮಳೆ ಹಾನಿಯಿಂದ ಹದಗೆಟ್ಟಿರುವ ರಸ್ತೆ ಕಾಮಗಾರಿಗಳಿಗೆ 10 ಕೋಟಿ ರೂ.ಗಳ ಅನುದಾನದಲ್ಲಿ ಬಲ್ಯಮಂಡೂರು ಭಾಗದಲ್ಲಿ 20 ಲಕ್ಷ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಭೂಮಿಪೂಜೆ ನೆರವೇರಿಸಲಾಗಿದೆ. ಹರಿಹರ ಮತ್ತು ತಾವರೆಕೆರೆ ಸಂಪರ್ಕ ರಸ್ತೆ ಹಾಗೂ ಚಿಕ್ಕಮಂಡೂರು ಹಾಗೂ ಕೋಣಂಗೇರಿ ಸಂಪರ್ಕ ರಸ್ತೆಯ ಮರು ಡಾಂಬರೀಕರಣ ಕಾಮಗಾರಿ ಆದಷ್ಟು ಶೀಘ್ರ ಪೂರ್ಣಗೊಳ್ಳಲಿದೆ ಎಂದರು.



ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಪೊನ್ನಣ್ಣ ಭೂಮಿಪೂಜೆ ನೆರವೇರಿಸಿದರು.

ಸ್ಥಳೀಯ ಗ್ರಾಮಸ್ಥರ ಕೋರಿಕೆಯಂತೆ ಚಂಡಂಗಡ, ಉಪ್ಪಂಗಡ, ಅಚ್ಚಾರಮಾಡ, ದೇಯಂಡ ಕುಟುಂಬಸ್ಥರ ಮನೆಗಳಿಗೆ ತೆರಳುವ ತೀರಾ ಹದಗೆಟ್ಟಿರುವ ಹಿಡಿಗೇರಿ ರಸ್ತೆಯನ್ನು ಶಾಸಕರು ವೀಕ್ಷಿಸಿದರು. ಚಂಡಂಗಡ ಕುಟುಂಬಸ್ಥರ ದೇವರಾದ ಮಂದಣ್ಣ ಮೂರ್ತಿ ದೇವಸ್ಥಾನಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ ನೀಡಿದರು. ಚಂಡಂಗಡ ಪ್ರವೀಣ್ ದೇವಸ್ಥಾನದ ಬಗ್ಗೆ ಶಾಸಕರಿಗೆ ಮಾಹಿತಿ ನೀಡಿದರು. ದೇವಸ್ಥಾನದ ಅಭಿವೃದ್ಧಿಗೆ ವೈಯಕ್ತಿಕವಾಗಿ ಆರ್ಥಿಕ ಸಹಕಾರ ಒದಗಿಸುವುದಾಗಿ ಭರವಸೆ ನೀಡಿದರು.

ಬಲ್ಯಮಂಡೂರು ಕಾಂಗ್ರೆಸ್ ವಲಯ ಅಧ್ಯಕ್ಷಕೊಟ್ಟಂಗಡ ರಾಜ ಕಾರ್ಯಪ್ಪ ಕಾಂಗ್ರೆಸ್ ಹಿರಿಯ ಮುಖಂಡರಾದ ಪೊನ್ನಪ್ಪ ದೆಯಂಡ ಲಾಲ ತಮ್ಮಯ್ಯ, ಸಂತೋಷ್, ಕೊಟ್ಟಂಗಡ ಡಿಕ್ಕಿ, ಕಟ್ಟಿ, ಪಿ ಪ್ರಕಾಶ್, ಸೂರಜ್, ಮಧು, ಚಂಡಂಗಡ ಪ್ರವೀಣ್, ಪೆಮ್ಮಂಡ ಮಂಜು ಬೋಪಣ್ಣ, ಅಚಾರಮಾಡ ಜಾರೀಶ್ ಪಕ್ಷದ ಪ್ರಮುಖರು, ಗ್ರಾಮಸ್ಥರು, ಹಾಜರಿದ್ದರು.

ಗ್ರಾಮೀಣ ಹಾಕಿ ಪಂದ್ಯ: ಮರಂದೋಡ ತಂಡಕ್ಕೆ ಪ್ರಶಸ್ತಿ



ಮಲ್ಮ ಹಾಕಿ ಕ್ಲಬ್, ಕುಂಜಿಲ ಕಕ್ಕಬ್ಬೆ ಪಂಚಾಯಿತಿ ಆಯೋಜಿಸಿದ್ದ ಗ್ರಾಮೀಣ ಕೀಡಾಕೂಟದ ಹಾಕಿ ಪಂದ್ಯದಲ್ಲಿ ಪ್ರಥಮ ಸ್ಥಾನ ಪಡೆದ ಮರಂದೋಡ ತಂಡ

ನಾಪೋಕ್ಲು, ಮೇ 10– ಮಲ್ಮ ಹಾಕಿ ಕ್ಲಬ್ ಹಾಗೂ ಕುಂಜಿಲ ಕಕ್ಕಬ್ಬೆ ಪಂಚಾಯಿತಿ ವತಿಯಿಂದ ಕಕ್ಕಬ್ಬೆ ಪ್ರೌಢ ಶಾಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಗ್ರಾಮೀಣ ಕೀಡಾಕೂಟದ ಹಾಕಿ ಪಂದ್ಯದಲ್ಲಿ ಪ್ರಥಮ ಸ್ಥಾನ ಮರಂದೋಡ ತಂಡ ಗಳಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ದ್ವಿತೀಯ ಸ್ಥಾನವನ್ನು ಕುಂಜಿಲ ತಂಡ ಗಳಿಸಿತು. ಥ್ರೋಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನೂ ನಾಲಡಿ ತಂಡ ಗಳಿಸಿದರೆ, ದ್ವಿತೀಯ ಸ್ಥಾನವನ್ನು ಕುಂಜಿಲ ತಂಡ ಗಳಿಸಿತು. ವಾಲಿಬಾಲ್ ಪಂದ್ಯದಲ್ಲಿ ಪ್ರಥಮ ಸ್ಥಾನವನ್ನು ಕುಂಜಿಲ ತಂಡ ಹಾಗೂ ದ್ವಿತೀಯ ಸ್ಥಾನವನ್ನು ಯವಕಪಾಡಿ ತಂಡಗಳು ಪಡೆದುಕೊಂಡವು.

ಕ್ರೀಡಾಕೂಟದಲ್ಲಿ ಮಲ್ಮ ಸಂಘದ ಅಧ್ಯಕ್ಷ ಮಾದಂಡ ಸಂದೇಶ ವಹಿಸಿದ್ದರು. ಅತಿಥಿಗಳಾಗಿ ಅಂಜಪರವಂಡ ಕುಶಾಲಪ್ಪ, ಬಡಕದ ಸುರೇಶ್, ಚಂಡಿರ ರಾಲಿ ಗಣಪತಿ, ಬೋಳಿಯಾಡಿರ ಸಂತು ಸುಬ್ರಮಣಿ, ಕಲಿಯಂಡ ಸಂಪನ್ ಅಯ್ಯಪ್ಪ, ಪಂಚಾಯಿತಿ ಪಿ. ಡಿ. ಓ.ಅಶೋಕ್, ಚೊಯಮಂಡ ಹರೀಶ್ ಮೊಣ್ಣಪ್ಪ, ಸೌಕ ವೈಕೂಲ್, ಮಾಮು ಕುಂಜಿಲ, ಪರದಂಡ ಸದಾನಾಣಯ್ಯ, ಕುಡಿಯರ ದಿಲೀಪ್, ಮಾದಂಡ ಜಗ ಮೊದಲಾದವರು ಉಪಸ್ಥಿತರಿದ್ದರು ವೇದಿಕೆಯಲ್ಲಿದ್ದ ಗಣ್ಯರು ವಿಜೇತ ತಂಡಗಳಿಗೆ ಬಹುಮಾನವನ್ನು ವಿತರಿಸಿ ಶುಭ ಹಾರೈಸಿದರು.

ಕುಶಾಲನಗರದಲ್ಲಿ ಇಂದಿರಾ ಕ್ಯಾಂಟಿನ್ ಶಾಸಕ ಡಾ.ಮಂತರ್ ಗೌಡ ಲೋಕಾರ್ಪಣೆ



ಇಂದಿರಾ ಕ್ಯಾಂಟಿನ್ ಅನ್ನು ಶಾಸಕ ಡಾ.ಮಂತರ್ ಗೌಡ ಲೋಕಾರ್ಪಣೆಗೊಳಿಸಿದರು.

ಮಡಿಕೇರಿ/ ಕುಶಾಲನಗರ, ಮೇ 10– ಕುಶಾಲನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ನೂತನವಾಗಿ ನಿರ್ಮಿಸಿರುವ ಇಂದಿರಾ ಕ್ಯಾಂಟಿನ್ ಅನ್ನು ಶಾಸಕ ಡಾ.ಮಂತರ್ ಗೌಡ ಲೋಕಾರ್ಪಣೆ ಗೊಳಿಸಿದರು.

ಸಾಂಪ್ರದಾಯಿಕವಾಗಿ ಪೂಜೆಯ ನಂತರ ಕಟ್ಟಡವನ್ನು ಉದ್ಘಾಟಿಸಿ ಅಡುಗೆ ಕೋಣೆ ಪರಿಶೀಲಿಸಿದ ಶಾಸಕರು ಶುಚಿ, ರುಚಿ ಮತ್ತು ಗುಣಮಟ್ಟ ಕಾಯ್ದುಕೊಂಡು ಬರುವಂತೆ ಗುತ್ತಿಗೆದಾರನಿಗೆ ಸೂಚಿಸಿದರು. ಅಲ್ಲಿಯೇ ಲಘು ಉಪಹಾರ ಸವಿದರು.

ಹಸಿವು ಮುಕ್ತ ರಾಜ್ಯ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಮಹತ್ವಾಕಾಂಕ್ಷೆಯ ಯೋಜನೆ ಜಾರಿಗೆ ತಂದಿರುವುದರಿಂದ ಬಡವರಿಗೆ, ಕಾರ್ಮಿಕರಿಗೆ ಹೆಚ್ಚಿನ ಅನುಕೂಲ ಉಂಟಾಗಲಿದೆ. ಇದನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕೆಂದು ಹೇಳಿದರು. ಹೆಚ್ಚು ದುಡ್ಡು ಕೊಟ್ಟರೆ ಹೆಚ್ಚು ರುಚಿ ಎನ್ನುವ ಭಾವನೆ ಇದೆ. ಅದು ತಪ್ಪು ಎನ್ನುವುದು ಇಂದಿರಾ ಕ್ಯಾಂಟಿನ್ ಮೂಲಕ ಸಾಬೀತಾಗಬೇಕಿದೆ ಎಂದರು.

ಅನುಷ್ಠಾನ ಸಮಿತಿಯ ಅಧ್ಯಕ್ಷ ವಿ.ಪಿ. ಶಶಿಧರ್ ಮಾತನಾಡಿ, ಇದು ಬಡಜನರ ಹೊಟ್ಟೆ ತುಂಬಿಸಲಿದೆ. ಕಡಿಮೆ ದರದಲ್ಲಿ ಉಪಹಾರ, ಊಟ ಪೂರೈಸುವ ರಾಜ್ಯ ಸರ್ಕಾರದ ಮಹತ್ವದ ಯೋಜನೆ ಇಂದಿರಾ ಕ್ಯಾಂಟಿನ್ ಬಡವರಿಗೆ ಅಶಾಕಿರಣ ಎಂದರು.

ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ ಚಂದ್ರು, ಉಪಾಧ್ಯಕ್ಷೆ ಪುಟ್ಟಲಕ್ಷ್ಮಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಬಿ.ಸುರೇಶ್, ಕುಡಾ ಅಧ್ಯಕ್ಷ ಪ್ರಮೋದ್ ಮುತ್ತಪ್ಪ, ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಕೆಪಿಸಿಸಿ ಸದಸ್ಯರಾದ ಮಂಜುನಾಥ್ ಗುಂಡೂರಾವ್, ನಟೇಶ್ ಗೌಡ, ಪುರಸಭೆ ಸದಸ್ಯರಾದ ವಿ.ಎಸ್.ಆನಂದಕುಮಾರ್, ಎಂ.ಕೆ.ದಿನೇಶ್, ಶಿವಶಂಕರ್, ಎಂ.ಎಂ. ಪ್ರಕಾಶ್, ಜಯಲಕ್ಷ್ಮಮ್ಮ ನಂಜುಂಡಸ್ವಾಮಿ, ಶೇಖ್ ಕಲೀಮುಲ್ಲಾ, ಸುರಯ್ಯಭಾನು, ಹರೀಶ್, ತಹಸೀಲ್ದಾರ್ ಕಿರಣ್ ಗೌರಯ್ಯ, ಜಿಪಂ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಪುರಸಭೆ ಮುಖ್ಯಾಧಿಕಾರಿ ಗಿರೀಶ್, ಮುಖಂಡರಾದ ಸುನಿತಾ ಮಂಜುನಾಥ್, ರಂಜನ್ ಹೆಬ್ಬಾಲೆ, ಟಿ.ಬಿ. ಜಗದೀಶ್, ಬಿ.ಡಿ. ಅಣ್ಣಯ್ಯ, ಎಸ್.ಎಸ್. ಚಂದ್ರಶೇಖರ್, ಚಂದನ್ ಮತ್ತಿತರರು ಹಾಜರಿದ್ದರು.

ಮೇ 15, ಮಹಾಸಭೆ

ಕುಶಾಲನಗರ: ಕೊಡಗು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದ ಸರ್ಕಾರಿ ನಿವೃತ್ತ ನೌಕರರ ಸಂಘದ 2025–26ನೇ ಸಾಲಿನ ವಾರ್ಷಿಕ ಮಹಾಸಭೆ ಮೇ 15 ರಂದು ಗುರುವಾರ ಇಲ್ಲಿನ ಮಹಾಲಕ್ಷ್ಮಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಅಂದು ಬೆಳಿಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ಸಿದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಸಂಘದ ಕಾರ್ಯ ಚಟುವಟಿಕೆ, ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ಮಂಡನೆ ಸೇರಿದಂತೆ ಸಂಘದ ಮುಂದಿನ ಯೋಜನೆ ಹಾಗೂ ಅಭಿವೃದ್ಧಿ ಕುರಿತು ಚರ್ಚೆ ನಡೆಯಲಿದೆ. ಆದ್ದರಿಂದ ಸಂಘದ ಎಲ್ಲ ಸದಸ್ಯರು ಸಭೆಗೆ ಹಾಜರಾಗಿ ಯಶಸ್ವಿಗೊಳಿಸಬೇಕು ಎಂದು ಸಂಘದ ಕಾರ್ಯದರ್ಶಿ ರಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜೃಂಭಣೆಯಿಂದ ನಡೆದ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ವಿರಾಜಪೇಟೆ, ಮೇ 10– ಪಟ್ಟಣದ ಚತ್ರಕೆರೆ ಬಳಿಯಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ಬೆಳ್ಳಿ ಮಹೋತ್ಸವದ ಅಂಗವಾಗಿ ಪ್ರತಿಷ್ಠಾ ಬ್ರಹ್ಮ ಕಲಶೋತ್ಸವ ಶ್ರದ್ಧಾ ಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

ದೇವಾಲಯದ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಅಂಗವಾಗಿ ಸಭಾಂಗಣದಲ್ಲಿ ಪುತ್ತೂರು ಮತ್ತು ಸುಬ್ರಮಣ್ಯದ ಕಲ್ಲಡ ವೇದ ಮೂರ್ತಿ ಬ್ರಹ್ಮಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರವರ ನೇತೃತ್ವದಲ್ಲಿ 9 ರಂದು ತೋರಣ ಮುಹೂರ್ತ, ಸಾಮೂಹಿಕ ಪ್ರಾರ್ಥನೆ ಪುಣ್ಯಾಹ, ಋತ್ವೀಕರಣ ವಾಸ್ತು ಪೂಜೆ, ಹೋಮ, ಬಲಿ ರಾಕ್ಷೋಘ್ನ ಹೋಮ ಸುದರ್ಶನ ಹೋಮ, ಬಕುಳ ಶಾಂತಿ ಬಿಂಬ ಶುದ್ಧಿ ನಡೆದವು. ಇಂದು ಮುಂಜಾನೆ ಗಣಪತಿ ಹೋಮ ಬಳಿಕ ಪುಣ್ಯಾಹ ತೆಂಗಿನಕಾಯಿ ಗಣ ಹವನ, ನವಗ್ರಹ ಶಾಂತಿ ವಾಯುಸ್ತುತಿ ಹೋಮ, ವಿಷ್ಣು ಹೋಮ, ಪ್ರತಿಷ್ಠಾ ಹೋಮ, ಕಲಶ ಪ್ರತಿಷ್ಠೆ ಪೂಜೆ, ಕಲಶಾಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಸೇವಾ ಪೂಜಾ ಕಾರ್ಯಗಳು ನಡೆಯಿತು.



ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದ ಪ್ರತಿಷ್ಠಾ ಬ್ರಹ್ಮಕಲಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮಧ್ಯಾಹ್ನ ಮಹಾಪೂಜೆ ಬಳಿಕ ಪ್ರಸಾದ ವಿತರಣೆ ಹಾಗೂ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಸಂದರ್ಭ ದೇವಸ್ಥಾನ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಜರಿದ್ದರು. ಪಟ್ಟಣ ಹಾಗೂ ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು.

ಮುಂಗಾರು; ಮುನ್ನೆಚ್ಚರಿಕಾ ಕ್ರಮ ವಹಿಸಲು ಜಿಲ್ಲಾಧಿಕಾರಿ ಸೂಚನೆ

ಮಡಿಕೇರಿ: ಮುಂಗಾರು ಸಂಬಂಧಿಸೋಡಲ್ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳು ಈಗಿನಿಂದಲೇ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ 'ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ'ಯ ಅಧ್ಯಕ್ಷತೆ ವಹಿಸಿದ್ದ ಅವರು, ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ಮುಂಗಾರು ಆರಂಭವಾಗುವ ಸಾಧ್ಯತೆ ಇದೆ. ಆದ್ದರಿಂದ ವ್ಯಾಪಕ ಮಳೆಯಿಂದ ಸಂಭವಿಸಬಹುದಾದ ಅನಾಹುತ ತಡೆಯುವ ನಿಟ್ಟಿನಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದರು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಜನರ ಸುರಕ್ಷತೆ ಕಾಪಾಡುವ ನಿಟ್ಟಿನಲ್ಲಿ ಅಗ್ನಿಶಾಮಕ ಸಿಬ್ಬಂದಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಎನ್‌ಡಿಆರ್‌ಎಫ್ ತಂಡದ ಜೊತೆ ಸಮನ್ವಯ ಸಾಧಿಸಬೇಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಔಷಧಿಗಳನ್ನು ದಾಸ್ತಾನು ಮಾಡಿಕೊಳ್ಳುವಂತೆ ಹೇಳಿದರು.

ವಿವಿಧ ಇಲಾಖೆ ಅಧಿಕಾರಿಗಳು ತಮ್ಮ ತಮ್ಮ ಇಲಾಖಾ ವ್ಯಾಪ್ತಿಯಲ್ಲಿ ಆಗಬೇಕಿರುವ ಕಾರ್ಯಗಳ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಎಡಿಸಿ ಆರ್.ಐಶ್ವರ್ಯ, ಎಸಿ ವಿನಾಯಕ ನರ್ವಾಡೆ, ವಿವಿಧ ಅಧಿಕಾರಿಗಳು ಇದ್ದರು.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಕರೆ



ಮಹಿಳಾ ಅಭಿವೃದ್ಧಿ ಟ್ರಸ್ಟ್ ಗುಬ್ಬಿ ತೋಟದಪ್ಪನವರ ವೀರಶೈವ– ಲಿಂಗಾಯತ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಯಿತು.

ಚಾಮರಾಜನಗರ, ಮೇ 10–ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಗುಬ್ಬಿ ತೋಟದಪ್ಪ ವಿದ್ಯಾರ್ಥಿ ನಿಲಯ ಆರಂಭಿಸಿರುವುದು ಪ್ರಶಂಸನೀಯ ಎಂದು ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದ್ದಾರೆ

ನಗರದ ಸಮೀಪದಲ್ಲಿನ ಕರಿನಂಜನಪುರದಲ್ಲಿ ಮಹಿಳಾ ಅಭಿವೃದ್ಧಿ ಟ್ರಸ್ಟ್‌ನಿಂದ ಗುಬ್ಬಿ ತೋಟದಪ್ಪನವರ ವೀರಶೈವ– ಲಿಂಗಾಯತ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗುಬ್ಬಿ ತೋಟದಪ್ಪ ವಿದ್ಯಾರ್ಥಿ ನಿಲಯದ ಮೂಲಕ ಹೆಣ್ಣು ಮಕ್ಕಳಿಗೆ ವಸತಿ, ಊಟದ ಜೊತೆಗೆ ಗುಣ ಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಅವರಿಗೆ ಉನ್ನತ ಶಿಕ್ಷಣವನ್ನು ಕೊಡಿಸಿ, ಸ್ವಾವಲಂಬನೆ ಬದುಕು ರೂಪಿಸಿಕೊಳ್ಳಲು ಎಲ್ಲಾ ರೀತಿಯ ಸಹಕಾರ ನೀಡುತ್ತಿರುವ ಸಂಸ್ಥೆಯ ಕಾರ್ಯಕ್ಕೆ ಅಭಾರಿಯಾಗಿದ್ದೇನೆ ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಗುಬ್ಬಿ ತೋಟದಪ್ಪ ಮಾಡಿರುವ ಸೇವೆ ಮತ್ತು ದಾನ ಧರ್ಮದಿಂದ ಅವರ ಹೆಸರು ಚಿರಸ್ಥಾಯಿಯಾಗಿದೆ ಅಂದಿನ ಕಾಲದಲ್ಲೇ ಮೈಸೂರು ಮಹಾರಾಜರಿಗೆ ಲಕ್ಷ ದೇಣಿಗೆ ನೀಡಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದ್ದರೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಸಿ.ಪುಟ್ಟರಂಗಶೆಟ್ಟಿ, ಟ್ರಸ್ಟ್‌ನ ಅಧ್ಯಕ್ಷ ಕಾಳನಹುಂಡಿ ಗುರುಸ್ವಾಮಿ, ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿಲಯದ ರಾಜ್ಯಾಧ್ಯಕ್ಷ ರೇವಣ್ಣಸಿದ್ದಯ್ಯ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಕಾಡಾಧ್ಯಕ್ಷ ಮರಿಸ್ವಾಮಿ, ಎಡಿಸಿ ಗೀತಾ ಹುಡೇದ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಚುಡಾಧ್ಯಕ್ಷ ಮಹಮದ್ ಅಸ್ಗರ್, ನಗರಸಭೆ ಅಧ್ಯಕ್ಷ ಸುರೇಶ್, ಸದಸ್ಯ ಮನೋಜ್‌ಪಟೇಲ್, ಪೌರಾಯುಕ್ತ ರಾಮದಾಸ್, ನಿವೇಶನ ದಾನಿಗಳಾದ ಪಿ.ವಿಜಯಾಂಬ, ಎಚ್.ಜಿ.ಕುಮಾರಸ್ವಾಮಿ ಇದ್ದರು.

ವಿಜೃಂಭಣೆಯ ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ

ಯಳಂದೂರು, ಮೇ 10–ತಾಲೂಕಿನ ಪ್ರಸಿದ್ಧ ಇತಿಹಾಸ ಪ್ರಸಿದ್ಧ ತಾಣ ಬಿಳಿಗಿರಿರಂಗನ ಬೆಟ್ಟದಲ್ಲಿ ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮ ರಥೋತ್ಸವವು (ದೊಡ್ಡಜಾತ್ರೆ) ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ದೇವಸ್ಥಾನದಲ್ಲಿ ನಿನ್ನೆಯಿಂದಲೇ ಹಲವು ಅಭಿಷೇಕ, ಪೂಜಾ ಕೈಂಕರ್ಯಗಳು ನೆರವೇರಿದವು. ಇಂದು ಬೆಳಗ್ಗೆ ನಿತ್ಯಾರಾಧನೆ, ಕಲ್ಯಾಣೋತ್ಸವ, ಪ್ರಸ್ಥಾನ ಮಂಟಪೋತ್ಸವಗಳು ನಡೆಯಿತು. ಬೆಳಗ್ಗೆ 11.02ರಿಂದ 11.15 ಗಂಟೆಯೊಳಗೆ ಸಲ್ಲುವ ಶುಭ ಕರ್ಕಾಟಕ ಲಗ್ನದ ಕನ್ಯಾ ಬುಧ ನವಾಂಶದ ಶುಭ ಮುಹೂರ್ತದಲ್ಲಿ ಉತ್ಸವಮೂರ್ತಿಯನ್ನು ರಥದಲ್ಲಿ ಕೂರಿಸಿ ಪೂಜೆ ಸಲ್ಲಿಸಿ ಗರುಡನ ಪ್ರದಕ್ಷಿಣೆಯ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ನೆರೆದಿದ್ದ ಸಾವಿರಾರು ಭಕ್ತರು ಗೋವಿಂದ... ಗೋವಿಂದ ಎಂದು ಜಯಕಾರ ಹಾಕುತ್ತಾ ರಥವನ್ನು ಎಳೆದು ಭಕ್ತಿ ಮೆರೆದರು. ಜಿಲ್ಲೆಯ ವಿವಿದೆಡೆಗಳಿಂದ ಆಗಮಿಸಿದ್ದ ಭಕ್ತರು ರಥೋತ್ಸವದ ವೇಳೆ ದವಸ, ಧಾನ್ಯ ತೇರಿಗೆ ಅರ್ಪಿಸಿದರೆ, ನವ ದಂಪತಿಗಳು ಹಣ್ಣು, ಜವನಗಳನ್ನು ತೇರಿಗೆ ಎಸೆಯುವ ಮೂಲಕ ಹರಕೆ ತೀರಿಸಿದರು.



ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮ ರಥೋತ್ಸವವು (ದೊಡ್ಡಜಾತ್ರೆ) ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಬ್ಯಾಟಮಣೆ ಸೇವೆ: ಹಳ್ಳಿಗಳಿಂದ ಬಂದಿದ್ದ ಭಕ್ತರು ರಥೋತ್ಸವ ಮುಗಿದ ಬಳಿಕ ತೇರಿನ ಬೀದಿ ಹಾಗೂ ದೇವಸ್ಥಾನದ ಸುತ್ತಮುತ್ತ ಅಕ್ಕಿ, ಬೆಲ್ಲ, ಕಾಯಿ, ಹಸಿಕಡ್ಲೆಯನ್ನು ನೀರಿನಲ್ಲಿ ನೆನೆಸಿ ಜೊತೆಗೆ ಕಜ್ಜಾಯ ಬೆರೆಸಿ ಆಪರ, ಗೋಪರ ಎಂದು ಕೂಗುವ ಮೂಲಕ ಪ್ರಸಾದವಾಗಿ ಸ್ವೀಕರಿಸಿದರು.

ಸೋಲಿಗರಲ್ಲಿ ಸಂಭ್ರಮ : ಸೋಲಿಗರ ಕುಸಮಾಲೆಯನ್ನು ವರಿಸಿರುವ ಬಿಳಿಗಿರಿ ರಂಗನಾಥಸ್ವಾಮಿಯನ್ನು ಸೋಲಿಗರು ಭಾವ ಎಂದೇ ಕರೆಯುತ್ತಾರೆ. ರಥೋತ್ಸವ ಹಿನ್ನೆಲೆಯಲ್ಲಿ ಬಿಳಿಗಿರಿರಂಗನಬೆಟ್ಟದ ಪೋಡುಗಳಲ್ಲಿ ವಾಸಿಸುವ ಸಾವಿರಾರು ಸೋಲಿಗರು ತೇರಿಗೆ ಆಗಮಿಸಿ ಸಂಭ್ರಮಿಸಿದರು.

ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ: ಡಾ. ಚಿದಂಬರ

ಚಾಮರಾಜನಗರ: ಸದ್ಯದಲ್ಲಿಯೇ ಮಳೆಗಾಲ ಆರಂಭವಾಗುತ್ತಿದ್ದು, ಪ್ರತಿಯೊಬ್ಬರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ಡಿಹೆಚ್‌ಓ ಡಾ. ಎಸ್. ಚಿದಂಬರ ತಿಳಿಸಿದರು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ಮಳೆಗಾಲ ಹತ್ತಿರವಾಗುತ್ತಿರುವ ಹಿನ್ನೆಲೆಯಲ್ಲಿ ಮನೆಗಳ ಹೊರಭಾಗ, ಇತರೆ ಸ್ಥಳಗಳಲ್ಲಿ ನೀರು ನಿಂತು ಸೊಳ್ಳೆಗಳ ಆವಾಸಸ್ಥಾನವಾಗಲು ಅವಕಾಶವಾಗದಂತೆ ಎಚ್ಚರ ವಹಿಸಬೇಕು ಎಂದರು.

ಜಿಲ್ಲಾ ಅಧಿಕಾರಿಗಳಾದ ಡಾ. ರಾಜೇಶ್ ಕುಮಾರ್, ದೊರೆಸ್ವಾಮಿ ನಾಯಕ್, ಡಾ. ಶ್ರೀನಿವಾಸ್, ಸರ್ಕಾರಿ ನರ್ಸಿಂಗ್ ಕಾಲೇಜಿನ ಉಪನ್ಯಾಸಕಿ ಪ್ರೇಮಾ, ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಕಮಲಾ, ಆರೋಗ್ಯ ಇಲಾಖೆಯ ದ್ವಾರಕೀಶ್, ಭಾಸ್ಕರ್, ನಾರಾಯಣಸ್ವಾಮಿ, ಇತರರು ಇದೇ ವೇಳೆ ಇದ್ದರು.

ಚಾಮರಾಜೇಶ್ವರ ದೇವಸ್ಥಾನದಿಂದ ಆರಂಭಗೊಂಡ ಜಾಥಾ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯವಾಯಿತು.



ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮಲೇರಿಯಾ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸಲು ಜಾಥಾ ನಡೆಸಿದರು.

ಕೊಳ್ಳೇಗಾಲ ಪಿಎಸಿಸಿ ಸಂಘಕ್ಕೆ ಅವಿರೋಧ ಆಯ್ಕೆ



ಅವಿರೋಧವಾಗಿ ಆಯ್ಕೆಯಾದ ಕಸಬಾ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸದಸ್ಯರು ಅಭಿನಂದಿಸಿದರು.

ಕೊಳ್ಳೇಗಾಲ: ಕಸಬಾ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಮಧುವನಹಳ್ಳಿ ಗ್ರಾಮದ ರಮೇಶ್, ಉಪಾಧ್ಯಕ್ಷರಾಗಿ ಮುಳ್ಳೂರು ಗ್ರಾಮದ ಶೇಖರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇಂದು ನಡೆದ ಚುನಾವಣೆಯಲ್ಲಿ ಎಸ್ ರಮೇಶ್ ಮತ್ತು ಶೇಖರ್ ಅವರನ್ನು ಹೊರತುಪಡಿಸಿ ಉಳಿದವರಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಸ್.ನಾಗೇಶ್ ಪ್ರಕಟಿಸಿದರು

13 ಸದಸ್ಯ ಬಲದ ಪೈಕಿ ಯಾರು ಅಧ್ಯಕ್ಷರಾಗುತ್ತಾರೆ, ಯಾರು ಆಯ್ಕೆಯಾದರೆ ಯಾರಿಗೆ ಲಾಭ ಎಂಬಿತ್ಯಾದಿ ಲೆಕ್ಕಾಚಾರ ಶುರುವಾಗಿತ್ತು. ಅಲ್ಲದೆ ಈ ಚುನಾವಣೆ ವೇಳೆ 2 ಗುಂಪುಗಳಾಗುವ ಸಾಧ್ಯತೆ ಇದೆ ಎನ್ನಲಾಗಿತ್ತು. ಆದರೆ ಒಪ್ಪಂದಗಳ ಹಿನ್ನೆಲೆ ಅವಿರೋಧ ಆಯ್ಕೆಗೆ ಒಗ್ಗಟ್ಟು ಪ್ರದರ್ಶಿಸಿದರೆನ್ನಲಾಗಿದೆ. ಈ ನಡುವೆಯೂ ಸಹ ಚುನಾವಣೆಯಲ್ಲಿ ಶೀಲಾ ರಾಜಶೇಖರ್, ಮಂಜುನಾಥ್, ಮುಳ್ಳೂರು ಇಂದ್ರ ಗೈರು ಹಾಜರಾಗಿದ್ದು, ಚರ್ಚೆಗೆ ಗ್ರಾಸವಾಯಿತು. ಆದರೆ 9 ಮಂದಿ ನಿರ್ದೇಶಕರಾದ ಮಹದೇವಸ್ವಾಮಿ. (ಸುರೇಶ್), ಎಸ್.ರವಿಕುಮಾರ್, ಎಂ.ಕೆ ಪುಟ್ಟಸ್ವಾಮಿ, ಎಂ.ಎಸ್.ಅನ್ನಪೂರ್ಣ, ಹಂಪಾಪುರ ಲೋಕೇಶ್, ಮಠದ ಬೀದಿಯ ಸಿ.ಬಸವರಾಜು, ಬ್ಯಾಂಕ್ ಮೇಲ್ವಿಚಾರಕ ಕುಮಾರ್, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಬಿ. ನಾಗರಾಜು ಚುನಾಯಿತರಾದವರನ್ನು ಅಭಿನಂದಿಸಿದರು

ನೂತನ ಅಧ್ಯಕ್ಷ ರಮೇಶ್ ಮಾತನಾಡಿ, ರೈತರ ಹಿತ ಕಾಯುವ ಕೆಲಸ ಮಾಡುವೆ, ಜನಪ್ರತಿನಿಧಿಗಳು, ಎಲ್ಲಾ ನಿರ್ದೇಶಕರ ಸಹಕಾರ ಪಡೆದು ಸಂಘದ ಅಭ್ಯುದಯಕ್ಕೆ ಹಾಗೂ ರೈತರ ಹಿತಕ್ಕಾಗಿ ಸ್ಪಂದಿಸುವೆ ಎಂದು ಭರವಸೆ ನೀಡಿದರು.

ಕೊಳ್ಳೇಗಾಲ ತಾಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕೊಳ್ಳೇಗಾಲ, ಮೇ 10–ಸತ್ತೇಗಾಲ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ, ಪಾಳ್ಯ, ಸಿಪಿ ದೊಡ್ಡಿ, ಸತ್ತೇಗಾಲ, ಧನಗೆರೆ, ಗುಂಡೇಗಾಲ, ಶಿವನಸಮುದ್ರ, ಹ್ಯಾಂಡ್ ಪೋಸ್ಟ್, ಜಾಗೇರಿ, ಶಾಂತಿನಗರ, ಹಳೇಕೋಟೆ, ಚನ್ನಿಪುರದೊಡ್ಡಿ, ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಸದರಿ ದಿನದಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದಾಗಿ ಚೆಸ್ಕಾಂ ಇಲಾಖೆ ತಿಳಿಸಿದೆ.

25 ಮಂದಿ ಫಲಾನುಭವಿಗಳಿಗೆ ಶಾಸಕರಿಂದ ಮೀನುಗಾರಿಕೆ ಪರಿಕರಗಳ ವಿತರಣೆ



ಫಲಾನುಭವಿಗಳಿಗೆ ಮಂಜೂರಾಗಿದ್ದ ಪರಿಕರಗಳನ್ನು ಶಾಸಕ ಪುಟ್ಟರಂಗಶೆಟ್ಟಿ ವಿತರಿಸಿದರು.

ಚಾಮರಾಜನಗರ: ನಗರದ ಪ್ರವಾಸಿ ಮಂದಿರದಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ ಮಂಜೂರಾಗಿದ್ದ ರಾಜ್ಯ ವಲಯದಿಂದ 15, ಜಿಲ್ಲಾ ವಲಯದಿಂದ 10 ಸೇರಿ ಎಸ್ಸಿಪಿ, ಟಿಎಸ್‌ಪಿ ಯೋಜನೆಯ 25 ಮಂದಿ ಫಲಾನುಭವಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಮೀನುಗಾರಿಕೆ ಪರಿಕರಗಳನ್ನು ವಿತರಿಸಿದರು.

ಮೀನುಗಾರರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇಲಾಖೆಯಿಂದ ವಿವಿಧ ರೀತಿಯ ಕಿಟ್‌ಗಳು, ಮೀನು ಹಿಡಿಯುವ ಬಲೆಗಳು, ಕ್ರೇಟುಗಳನ್ನು ಉಚಿತವಾಗಿ ವಿತರಿಸುವುದರ ಜತೆಗೆ ವಾಸಿಸಲು ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಮೀನುಗಾರರು ಸರ್ಕಾರದಿಂದ ನೀಡುವ ಸವಲತ್ತುಗಳನ್ನು ಬಳಸಿ ತಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳಬೇಕು, ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕೆ ಅವರಿಗೆ ಗುಣಮಟ್ಟದ ವಿದ್ಯಾಭ್ಯಾಸ ಕೊಡಿಸಬೇಕು ಎಂದು ಶಾಸಕರು ಸಲಹೆ ನೀಡಿದರು.

ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಜೆ.ಎಂ.ಪ್ರಶಾಂತ್, ಸಹಾಯಕ ಶ್ರೀನಿವಾಸ್, ಮೀನುಗಾರರ ಸಹಕಾರ ಸಂಘದ ಸದಸ್ಯರು, ಇತರರು ಹಾಜರಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 11-05-2025

ಪುಟ 9

'ಮೈಸೂರು ಮಿತ್ರ' 46ನೇ ವಾರ್ಷಿಕೋತ್ಸವ ಕಥಾಸ್ಪರ್ಧೆಯಲ್ಲಿ ಸಮಾಧಾನಕರ ಬಹುಮಾನಿತ ಕಥೆ

ಅಮ್ಮನಿಗೆ ಪತ್ರ

ಕನ್ನಡವೇ ಬೇಕು ಕನ್ನಡವೇ ಸಾಕು!





ಮನೋಜ್ ಕುಮಾರ್.ಕೆ
ಮೊ: 9620414115

ಅಂದು ಶುಕ್ರವಾರ ಬೆಳಗ್ಗೆ ವಿಕಾಸ್ ಎದ್ದು ಅವಸರದಿಂದ ತಯಾರಾಗುತ್ತಿರುತ್ತಾನೆ. ವಿಕಾಸ್‌ನ ಅಮ್ಮ ಎಂದಿನಂತೆ ಅವನಿಗೆ ಲಂಚ್ ಬಾಕ್ಸ್ ತಯಾರು ಮಾಡುತ್ತಿರುತ್ತಾರೆ. ಇದನ್ನು ನೋಡಿ ಕುತೂಹಲದಿಂದ ವಿಕಾಸ್, ಏನು ಇದು ಇಷ್ಟು ಅವಸರ ಮಾಡ್ತಾಯಿದ್ದೀಯಾ ಎಂದು ಅವನನ್ನು ಅಮ್ಮ ಕೇಳುತ್ತಾರೆ. ವಿಕಾಸ್, ಏನಿಲ್ಲವ್ವಾ ಇವತ್ತು ಆಫೀಸ್‌ಗೆ ಸರಿಯಾದ ಸಮಯಕ್ಕೆ ಹೋಗಬೇಕು ಎಂದು ಹೇಳಿದ. ಅದಕ್ಕೆ ಅಮ್ಮಾ, ನಿನ್ನ ಬೈಕ್ ಇಲ್ಲೆ ಇದೆ, ನೀನ್ ಬಸ್ಸಿನಲ್ಲಿ ಹೋಗುವಾಗ ಸಹ ಇಷ್ಟು ಅವಸರ ಮಾಡಿಲ್ಲ. ಏನಿದು ಹೊಸದು ಎಂದಾಗ... ವಿಕಾಸ್, ಅಮ್ಮಾ, ಇಂದು ಬಹಳ ಮುಖ್ಯವಾದ ದಿನ ಆಫೀಸ್‌ನಲ್ಲಿ. ಅದನ್ನು ನಿನಗೆ ಹೇಳಿ ಅರ್ಥ ಮಾಡಿಸೋ ಅಷ್ಟು ಸಮಯವಿಲ್ಲ. ಎಂದು ಅವಸರದಲ್ಲಿ ಲಂಚ್ ಬಾಕ್ಸ್ ತಗೆದುಕೊಂಡು ಬೈಕ್‌ನಲ್ಲಿ ಹೊರಡುತ್ತಾನೆ. ಈ ಅವಸರವನ್ನು ಗಮನಿಸಿದ ಅಮ್ಮ ಅಲ್ಲೇ ನಿಂತು, ಹುಷಾರು ಮಗನೆ, ಎಂದು ಹೇಳುತ್ತಾಳೆ.

ವಿಕಾಸನ ಮನೆಯಿಂದ ಆಫೀಸ್ ಸುಮಾರು 8 ಕಿಲೋ ಮೀಟರಿದ್ದು, ಹೋಗುವ ದಾರಿ ಉದ್ದಕ್ಕೂ ಯೋಚಿಸುತ್ತ ಹೊರಡುತ್ತಾನೆ. ಆಫೀಸ್‌ನ ಒಳಗೆ ಹೋಗುತ್ತಿದ್ದಂತೆಯೇ ಎಂದೂ ಇರದ ಮೌನವನ್ನು ವಿಕಾಸ್ ಗಮನಿಸುತ್ತಾನೆ. ಇವನ ಸಹೋದ್ಯೋಗಿಗಳು ಬಹಳ ಏಕಾಗ್ರತೆಯಿಂದ ಕೆಲಸ ಮಾಡುತ್ತಿರುವಂತೆ ನಟಿಸುತ್ತಿರುವುದನ್ನು ಸಹ ವಿಕಾಸ್ ಗಮನಿಸುತ್ತಾನೆ. ಅಂದು ಕಂಪನಿಯಲ್ಲಿ ಇಪ್ಪತ್ತಾರು ಜನರ ಪೈಕಿ ಇಂಟರ್ನ್‌ಶಿಪ್‌ಗೆ ಬಂದ ಉದ್ಯೋಗಿಗಳಲ್ಲಿ ಕೇವಲ 8 ಜನರನ್ನು ಪರ್ಮನೆಂಟ್ ಉದ್ಯೋಗಿಗಳಾಗಿ ನೇಮಕಾತಿ ಮಾಡುವ ದಿನವಾಗಿರುತ್ತದೆ. ಅದು ಒಂದು ಐಟಿ ಕಂಪನಿ. ವಿಕಾಸ್ ತಾನು ವಿದ್ಯಾಭ್ಯಾಸ ಮುಗಿಸಿ ತುಂಬಾ ಬಾರಿ ಹಾಗೂ ಬಹಳಷ್ಟು ಕಡೆ ಪ್ರಯತ್ನಿಸಿದ ನಂತರ ಸಿಕ್ಕಿದ ಒಂದು ಕೆಲಸ ಅದುವೇ ಮೂರು ತಿಂಗಳ ಟ್ರೈನಿಂಗ್ ನಂತರ ಕಾರ್ಯಕ್ಷಮತೆಯ ಮೇರೆಗೆ ಪರ್ಮನೆಂಟ್ ಎಂಪ್ಲೋಯಿಯಾಗಿ ಆಗಬೇಕೆಂಬ ಕಾತುರದಿಂದ ವಿಕಾಸ್ ಕಾಯುತ್ತಿರುತ್ತಾನೆ. ಹಾಗೆ ಆ ಮೂರು ತಿಂಗಳು ಅದಕ್ಕೆ ಬೇಕಾದ ಎಲ್ಲಾ ತರಹದ ಕಾರ್ಯವೈಖರಿಗಳನ್ನು ನಿಷ್ಠೆಯಿಂದ ಮಾಡುತ್ತಿದ್ದಾನೆ. ಆದರೂ ಆತಂಕ ಇದ್ದೇ ಇರುತ್ತದೆ. ತನ್ನ ಕಂಪ್ಯೂಟರ್ ಬಳಿ ಹೋಗಿ ಕೂತ ತಕ್ಷಣ ತನ್ನ ಪಕ್ಕದಲ್ಲಿ ಸಮಯಕ್ಕಿಂತ ಬೇಗನೆ ಬಂದು ಕುಳಿತಿದ್ದ ಸಹೋದ್ಯೋಗಿ ಅನಿಶ್ ಸಿಂಗ್, Bhai "Manager has come already, and they would announce anytime" ಹೇಳುತ್ತಾನೆ. ವಿಕಾಸ್, oh, is it? ಎಂದು ಹೇಳಿ ತನ್ನ ಕಂಪ್ಯೂಟರ್ ಶುರುಮಾಡುತ್ತಾನೆ.

ವಿಕಾಸ್ ಕೆಲಸ ಮಾಡುತ್ತಲೇ ಕಾಯುತ್ತ, ಯೋಚಿಸಲು ಶುರು ಮಾಡುತ್ತಾನೆ. ವಿಕಾಸ್ ತನ್ನ ತಂದೆಯನ್ನು ಚಿಕ್ಕಂದಿನಲ್ಲಿ ಕಳೆದುಕೊಂಡಿರುತ್ತಾನೆ. ಬೆಳೆಯುವಷ್ಟು ದಿನ ಬಡತನದಲ್ಲೇ ಬೆಳೆದಿರುತ್ತಾನೆ. ವಿಕಾಸ್ ತಾನು ಕನ್ನಡ ಮಾಧ್ಯಮ ಸರ್ಕಾರಿ ಶಾಲೆಯಲ್ಲಿ ಓದಿದ್ದು, ಈ ಕೆಲಸಕ್ಕೆ ಬರಲು ಇಂಗ್ಲಿಷ್ ಭಾಷೆಯ ಬಹಳಷ್ಟು ಸವಾಲುಗಳನ್ನು ಮೀರಿ ಬಂದಿರುತ್ತಾನೆ. ಇದನ್ನೆಲ್ಲಾ ನೆನೆದು ಕುಳಿತಿರುವಾಗಲೇ ಜೋರಾಗಿ ಯಾರೋ ಕೂಗಿದಂತಾಗಿ ತಿರುಗಿದಾಗ, ಮ್ಯಾನೇಜರ್ ಹೆಸರುಗಳನ್ನು ಅನೌನ್ಸ್ ಮಾಡಲು ಬಂದಿರುವುದನ್ನು ನೋಡಿ ವಿಕಾಸ್ ಕುತೂಹಲಕ್ಕೆ ಒಳಗಾಗುತ್ತಾನೆ. ಕುತೂಹಲದಿಂದ ಎದ್ದು ನಿಲ್ಲುತ್ತಾನೆ. ಮ್ಯಾನೇಜರ್ ತನ್ನ ಕೈಯಲ್ಲಿ ಇದ್ದ ಹೆಸರು ಪಟ್ಟಿಯನ್ನು ಹಿಡಿದು, ನೋಡುತ್ತಾ, ಇಂದು ಕೆಲವರಿಗೆ ಸಂತೋಷ ಹಾಗೂ ಉಳಿದವರಿಗೆ ಬೇಸರವಾಗುವ ದಿನ? ಎಂದು ಹೇಳುತ್ತಾರೆ. ಮತ್ತು ನಿಮ್ಮೆಲ್ಲರಿಗೆ ಧನ್ಯವಾದಗಳು. ನೀವ್ರ ಎಲ್ಲರೂ ಪ್ರತಿಭಾವಂತರು. ಆದರೆ ನಮಗೆ ಮತ್ತು ಕಂಪನಿಗೆ ಅಗತ್ಯವಿರುವ ಉದ್ಯೋಗಿಗಳನ್ನು ಮಾತ್ರ ಪರಿಗಣಿಸಬೇಕಾಗುತ್ತದೆ ಎಂದು ಮ್ಯಾನೇಜರ್ ಹೇಳಿದರು. ಹಾಗೆಯೇ ನಾನು ಇಲ್ಲಿ ಹೇಳುವ ಹೆಸರುಗಳವರಷ್ಟೇ ನಮ್ಮ ಕಂಪನಿಯಲ್ಲಿ ಪರ್ಮನೆಂಟ್ ಉದ್ಯೋಗಿಗಳಾಗುತ್ತಾರೆ ಎಂದು ಹೇಳುತ್ತಾ, ಮ್ಯಾನೇಜರ್ ಮೊದಲನೆಯ ಹೆಸರಾಗಿ, ಅವಿನಾಶ್ ಖನ್ನಾ ಎಂದು ಹೇಳುತ್ತಾರೆ. ಎರಡನೆಯ ಹೆಸರೇ ವಿಕಾಸ್ ಎಂದು ಕೇಳಿದಾಗ ಬೆವರುತಿದ್ದ ಮುಖದಲ್ಲಿ ನಗು ಮೂಡುತ್ತದೆ. ಖುಷಿಯಿಂದ ಉಳಿದವರ ಹೆಸರು ಕೇಳಲು ಆಸಕ್ತಿ ಇಲ್ಲದೆ, ಕುಳಿತು ಒಂದು ದೀರ್ಘ ಸಂತೋಷದ ಉಸಿರೆಳೆದು ಕೊಳ್ಳುತ್ತಾನೆ. ಎಲ್ಲಾ ಮುಗಿದ ನಂತರ, ಎಲ್ಲರೂ ಅವನಿಗೆ ಶುಭಾಶಯಗಳನ್ನು ಹೇಳುತ್ತಾರೆ ಮತ್ತು ಇದೇ ಖುಷಿಗೆ ಅವನು ಪಾರ್ಟಿ ಕೊಡಿಸಬೇಕೆಂದು ಒತ್ತಾಯಿಸುತ್ತಾರೆ. ಇದಕ್ಕೆ ಒಪ್ಪಿದ ವಿಕಾಸ್ ಎಲ್ಲರನ್ನೂ ಶನಿವಾರ ಸಂಜೆ ತನ್ನ ಮನೆಗೆ ಊಟಕ್ಕೆ ಬರುವಂತೆ ಆಹ್ವಾನಿಸುತ್ತಾನೆ. ಆಫೀಸ್ ಮುಗಿದ ನಂತರ ಸಂಜೆ ಮನೆಗೆ ಹೋಗುವ ದಾರಿಯಲ್ಲಿ ತಾನು ಈ ಹಂತಕ್ಕೆ ಬರಲು ಬಹುಮುಖ್ಯ ಕಾರಣಳಾದ ತನ್ನ ತಾಯಿಗೆ ಬರಿಸಿಹಿ ಸುದ್ದಿ ಮಾತ್ರವಲ್ಲದೆ, ಬೇರೆ ರೀತಿಯ ಕೃತಜ್ಞತೆಯನ್ನೂ ವ್ಯಕ್ತಪಡಿಸಬೇಕೆಂದು ನಿರ್ಧರಿಸಿ ಮನೆ ಕಡೆಗೆ ಹೆಜ್ಜೆ ಹಾಕುತ್ತಾನೆ. ಮನೆಗೆ ಹೋದ ತಕ್ಷಣ ತಾನಿಂತ್ತಂತೆ ಬಂದ ಅಮ್ಮನನ್ನು ಎತ್ತಿ ಸುತ್ತಿಸಿ ಕೆಳಗಿಳಿಸಿ, ಸಂತೋಷದಿಂದ ನ್ನ ಕೆಲಸಾ ಪರ್ಮನೆಂಟ್ ಆಯ್ತುಮ್ಮಾ! ಇನ್ನು ನಂಗೆ ಕೆಲಸ ಕಾಯಂ. ನಾವು ಇದೊಂದು ಆದ ಮೇಲೆ ಏನಿಲ್ಲಾ ಮಾಡಬೇಕು ಏನಿಲ್ಲಾ ತಗೋಬೇಕು ಹಾಗೂ ನೀನ್ ಹೇಳ್ತಾ ಇದ್ದ ದೇವಸ್ಥಾನಗಳಿಗೆ ಹೋಗಲು ಇನ್ನಾವುದು ತಡೆ ಇಲ್ಲ. ಬಡತನಕ್ಕಿಂತ ಅಲ್ಪಮಟ್ಟದಲ್ಲಿ ಉತ್ತಮ ಜೀವನ ಸಿಕ್ಕಿದೆ ಎಂದು ಹೇಳುತ್ತಾನೆ. ಅಮ್ಮನಿಗೆ ಈ ಖುಷಿಗೆ ಮಾತು ಸುಲಭವಾಗಿ ಬರದಿದ್ದರೂ, ಎಲ್ಲಾ ನೀನು ಪಟ್ಟ ಪರಿಶ್ರಮ ಮಗನೇ... ಹೀಗೇ ಮುಂದುವರಿ ಎಂದು ಹೆಮ್ಮೆಪಟ್ಟು ಆಶೀರ್ವದಿಸುತ್ತಾರೆ. ವಿಕಾಸ್, ತಾನು ತನ್ನ ಮನೆಗೆ ಸಹೋದ್ಯೋಗಿಗಳಿಗೆ ಪಾರ್ಟಿ ನೀಡಬೇಕೆಂದು ಶನಿವಾರ ಸಂಜೆ ಎಲ್ಲರೂ ರಾತ್ರಿ ಊಟಕ್ಕೆ ಮನೆಗೆ ಬರುವುದಾಗಿ ತನ್ನ ಅಮ್ಮನಿಗೆ ತಿಳಿಸುತ್ತಾನೆ. ವಿಕಾಸ್ ರಾತ್ರಿ ತಡವಾದರೂ ಮಲಗದೆ, ಅಮ್ಮನಿಗಾಗಿನ ಕೃತಜ್ಞತೆ ವ್ಯಕ್ತಪಡಿಸುವ ಬಗ್ಗೆ ಯೋಚಿಸುತ್ತಾ ಹಾಗೂ ಸಹೋದ್ಯೋಗಿಗಳು ಬರುತ್ತಿರುವ ಸಂದರ್ಭದಲ್ಲೇ ಅವರ ಮುಂದೆ ಅಮ್ಮನಿಗೆ ಒಂದು ಕೃತಜ್ಞತಾ ಪತ್ರ ಓದಿ ಹೇಳಬೇಕೆಂದು ನಿರ್ಧರಿಸಿ, ಆ ಪತ್ರವನ್ನು ಬರೆಯಲು ಆರಂಭಿಸುತ್ತಾನೆ. ಬರೆಯುವಾಗ ವಿಕಾಸ್ ಹಲವಾರು ಬಾರಿ ಯೋಚಿಸಿ, ಈ ಪತ್ರವನ್ನೇ ನಾನು ಸಹೋದ್ಯೋಗಿಗಳ ಮುಂದೆ ಓದಬೇಕು ಎಂದುಕೊಂಡಿದ್ದರಿಂದ ಅದನ್ನು ಚೆನ್ನಾಗಿ ಮಾಡಲು ಆಗಾಗ ಬರೆದು ಹರಿದು ಹಾಕುತ್ತಾನೆ. ಪದಗಳನ್ನು ಆರಿಸಿಕೊಳ್ಳುತ್ತಾ, ಭಾವನೆಗಳನ್ನು ಸರಿಯಾಗಿ ವ್ಯಕ್ತಪಡಿಸಲು ಎಣಿಸುತ್ತಾ ಬರೆದದ್ದನ್ನು ತಿದ್ದುಪಡಿ ಮಾಡುತ್ತಾ ಇರುತ್ತಾನೆ. ಈ ರೀತಿಯಲ್ಲಿ ಹಲವಾರು ಪ್ರಯತ್ನಗಳ ನಂತರ ಕೊನೆಗೆ ಮನಸಿಗೆ ತೃಪ್ತಿಯಾಗುವಂತೆ ಪತ್ರವನ್ನು ಬರೆಯುತ್ತಾನೆ. ತಡರಾತ್ರಿ ಅಂತಿಮ ಪತ್ರವನ್ನು ಕೈಯಲ್ಲಿ ಹಿಡಿದು, ನಗು ಮುಖದಿಂದ ಮಲಗುತ್ತಾನೆ.

> **ಅಮ್ಮಾ, ನಿನ್ನ ಋಣಕ್ಕೆ ನಾನು ಎಂದೆಂದಿಗೂ ಚಿರಋಣಿ. ಇದನ್ನು ಕೇಳುತ್ತಿದ್ದಂತೆ ಅಮ್ಮ ಕಣ್ಣೀರಿಡುತ್ತಾ, ವಿಕಾಸನನ್ನು ಬಿಗಿಯಾಗಿ ತಬ್ಬಿಕೊಳ್ಳುತ್ತಾಳೆ. ಆ ಕ್ಷಣದಲ್ಲಿ ಮಾತುಗಳಿಗಿಂತ ಭಾವನೆಗಳು ತುಂಬಿ ಹರಿದಿದ್ದವು. ಮನೆಯಲ್ಲೆಲ್ಲಾ ಆ ತಾಯಿ-ಮಗನ ಅನುಬಂಧದ ದೃಶ್ಯವನ್ನು ನೋಡಿ ನಿಶ್ಯಬ್ದವಾಗಿದ್ದರೂ, ಹೃದಯಗಳಲ್ಲಿ ಮಾತ್ರ ಪ್ರೀತಿ, ಗೌರವ, ಹಾಗೂ ಹೆಮ್ಮೆ ತುಂಬಿರುತ್ತವೆ.**

ಬೆಳಿಗ್ಗೆ ಎದ್ದು ವಿಕಾಸ್ ಮನೆ ಸ್ವಚ್ಛಮಾಡಿ, ಅಮ್ಮ ಹೇಳಿದ್ದ ತರಕಾರಿ, ತಿಂಡಿ, ತಂಪುಪಾನೀಯಗಳು ಹಾಗೂ ಇನ್ನಿತರ ಸಾಮಗ್ರಿಗಳನ್ನು ತಂದು ಕೊಟ್ಟು ಅಮ್ಮಾ, ಇವತ್ತು ಮನೆಗೆ ಬರುತ್ತಿರುವ ಸಹೋದ್ಯೋಗಿಗಳು ಗುಜರಾತ್, ದೆಹಲಿ, ಮುಂಬೈ, ಆಂಧ್ರಪ್ರದೇಶ ಎಲ್ಲೆಡೆಯವರೂ ಆಗಿದ್ದಾರೆ. ಉಪ್ಪು-ಖಾರ ನೋಡಿಕೊಂಡು, ಅಡುಗೆ ಎಲ್ಲರಿಗೂ ರುಚಿಯಾಗಬೇಕು. ಅದಕ್ಕಾಗಿ ಏನೇ ಬೇಕಾದರೂ ಈಗಲೇ ಕೇಳಿ, ಎಂದು ಆತ್ಮೀಯತೆಯಿಂದ ಹೇಳುತ್ತಾನೆ. ಅದಕ್ಕೆ ಅಮ್ಮ, ಎಲ್ಲವೂ ತಯಾರಾಗಿದೆ. ನೀನು ಅಡುಗೆ ಮಾಡುವಾಗ ತೊಂದರೆ ಕೊಡದೆ ಇದ್ದರೆ ಸಾಕು, ಎಂದು ಹೇಳುವುದನ್ನು ಕೇಳಿ, ನಗುತ್ತಾನೆ. ವಿಕಾಸ್ ಅಡುಗೆ ಮಾಡಲು ಸಹಾಯ ಬೇಕೆ ಎಂದು ಕೇಳಿದಾಗ, ಅಮ್ಮ, ನನಗೆ ಎಲ್ಲವನ್ನೂ ಒಬ್ಬಳೇ ಮಾಡುವ ಅಭ್ಯಾಸ ವರ್ಷಗಳಿಂದ ಇದೆ. ಹಾಗೆಯೇ ಅದರಲ್ಲಿ ತೃಪ್ತಿಯೂ ಇದೆ, ಹಾಗೆ ಮಾಡಿದರೆ ಮಾತ್ರ ನನಗೆ ತೃಪ್ತಿ ಎಂದು ಅಮ್ಮ ಹೇಳುತ್ತಾರೆ. ವಿಕಾಸ್, ಹೌದಮ್ಮ, ಎಲ್ಲವನ್ನೂ ಒಬ್ಬಳೇ ಮಾಡಿ ಸಾಕಾಗಿದೆ. ಇನ್ನು ಮುಂದೆ ನಿನಗೆ ಹೆಚ್ಚು ಆಯಾಸವಾಗದಂತೆ ನೋಡಿಕೊಳ್ಳಬೇಕು ನಾನು ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾನೆ. ಪಕ್ಕದ ಮನೆಯವರನ್ನು ರಾತ್ರಿ ಊಟಕ್ಕೆ ಆಹ್ವಾನಿಸಲು ವಿಕಾಸ್‌ಗೆ ಹೇಳಿದಾಗ, ಅವನು ಕರೆಯಲು ಹೊರಡುತ್ತಾನೆ.

ಸಂಜೆ ಎಲ್ಲರೂ ಒಬ್ಬೊಬ್ಬರಾಗಿ ಬರುವಾಗ, ಬಂದವರನ್ನು ಸ್ವಾಗತಿಸಿ, ಅವರಿಗೆ ಜ್ಯೂಸ್ ನೀಡುವಂತೆ ವಿಕಾಸ್ ಮುಂದುವರಿಸುತ್ತಾನೆ. ಅದರಲ್ಲಿಯೂ ಪಕ್ಕದ ಮನೆಯ ಮಕ್ಕಳು ಸಹ ಬಂದಿರುತ್ತಾರೆ. ಆ ಮಕ್ಕಳಲ್ಲಿ ಆಕಾಶ ಎಂಬೊಬ್ಬ 3ನೇ ತರಗತಿಯಲ್ಲಿ ಓದುತ್ತಿರುತ್ತಾನೆ. ಅವನು ವಿಕಾಸ್‌ಗೆ ಬಹಳ ಆತ್ಮೀಯನಾಗಿದ್ದಾನೆ. ವಿಕಾಸನನ್ನು ನೋಡುತ್ತಾ, ಮಾಮಾ! ಎಂದು ಕೂಗುತ್ತಾ ಬರುತ್ತಾನೆ. ಅತಿಥಿಗಳು ಕೆಲವರು ವಿಕಾಸ್‌ನ ಮನೆ ನೋಡುತ್ತಾ, ಕೆಲವರು ಗೋಡೆ ಮೇಲೆ ಇಟ್ಟಿರುವ ಅವನ ಬಾಲ್ಯದ ಫೋಟೋ ನೋಡಿ ತಮಾಷೆ ಮಾಡುತ್ತಾ, ಮತ್ತಿತರರು ಮನೆಯ ಗಿಡಗಳನ್ನು ನೋಡುತ್ತಾ ಸಮಯ ಸರಿಯುತ್ತ ಹೀಗೆ ಡಿನ್ನರ್ ಟೈಮ್ ಬಂದಾಗ, ವಿಕಾಸ್ ಎದ್ದು ನಿಂತು "Attention everybody, thanks for coming to the small party, means a lot, today is a very special day, as many of you know. My life hasn't been easy. I lost my dad when I was a child, and the road was tough. But my mom was always there for me. Whatever I am today is because of her. I wrote a letter for her to say thank you and to show how truly grateful I am" ಎಂದು ಇಂಗ್ಲಿಷಲ್ಲಿ ಪತ್ರವನ್ನು ಓದಲು ಶುರು ಮಾಡುತ್ತಾನೆ. ಎಲ್ಲರು ಕೇಳಿ ಹರ್ಷಧ್ವನಿಸುತ್ತಾರೆ. ಅಮ್ಮ, ವಿಕಾಸ್ ಎಷ್ಟು ಚೆಂದವಾಗಿ ಇಂಗ್ಲಿಷ್ ಮಾತನಾಡುತ್ತಾನೆ! ಎಂದು ಆಶ್ಚರ್ಯದಿಂದ ಅವನನ್ನು ನೋಡುತ್ತಾ ಆನಂದಿಸುತ್ತಾರೆ. ವಿಕಾಸ್ ಪತ್ರ ಓದಿದ ನಂತರ ಎಲ್ಲರೂ ಖುಷಿಪಟ್ಟು ಚಪ್ಪಾಳೆ ತಟ್ಟಿ ಹೊಗಳುತ್ತಾರೆ. ಅದೆಲ್ಲಾ ಚಪ್ಪಾಳೆ ಮತ್ತು ಹೊಗಳಿಕೆ ವಿಕಾಸ್‌ಗಾಗಿ ಎಂದು ತಿಳಿಯುತ್ತಾಳೆ ಅಮ್ಮ. ಇನ್ನಷ್ಟು ಆನಂದ ಪಡುತ್ತಾಳೆ, ಜೊತೆಗೆ ತಾನು ಸಹ ಚಪ್ಪಾಳೆ ತಟ್ಟುತ್ತಾಳೆ. ಕೆಲವರು ತಮ್ಮ ತಾಯಿ ನೆನೆದು ಮಾತನಾಡುತ್ತಾ ಊಟ ಮಾಡುತ್ತಾರೆ. ಮುಗಿದ ನಂತರ, ವಿಕಾಸ್‌ಗೆ ಧನ್ಯವಾದ ಹೇಳಿ, ಎಲ್ಲರೂ ತಮ್ಮ ಮನೆಕಡೆ ಹೊರಡುತ್ತಾರೆ.

ಈ ಮಧ್ಯೆ ಆಕಾಶ್ ಬಂದು ಮಾಮಾ, Thankful ಅಂದ್ರೆ ಏನು ಎಂದು ಕೇಳುತ್ತಾನೆ. ವಿಕಾಸ್, ಯಾಕೆ ಎಂದು ಕೇಳುತ್ತಾನೆ. ಆಕಾಶ್, ನೀನು ಪತ್ರ ಓದುವಾಗ ಆ ಪದ ಕೇಳಿದೆ, ಹಾಗೆಂದರೆ ಏನು ಅರ್ಥ ಅಂತ ನನಗೆ ಗೊತ್ತಿಲ್ಲ. ಅದಕ್ಕೇ ಕೇಳಿದೆ ಎಂದು ಹೇಳುತ್ತಾನೆ. ವಿಕಾಸ್, ಮೂರನೇ ತರಗತಿ ಓದುತ್ತಿರುವ ನಿನಗೆ ಗೊತ್ತಿಲ್ಲವಾ ನೀನು ಸರಿಯಾಗಿ ಓದುತ್ತಿಲ್ಲ ಅನ್ನಿಸುತಿದೆ. Thankful ಅಂದ್ರೆ ಹೆಚ್ಚು ಕಡಿಮೆ ಧನ್ಯವಾದಗಳು ಅಂತ, ಎಂದು ಹೇಳುತ್ತಾನೆ. ಆಕಾಶ್, 'ಯಾರಿಗೆ ಧನ್ಯವಾದ ಹೇಳಿದ್ದು ನೀನು?' ಎಂದು ಕೇಳುತ್ತಾನೆ. ವಿಕಾಸ್, ಇನ್ಯಾರಿಗೆ ನನ್ನ ಅಮ್ಮನಿಗೆ ಎಂದು ನಗುತ್ತಾ ಹೇಳುತ್ತಾನೆ. ಆಕಾಶ್ ನಗುತ್ತಾ, 'ಮೂರನೇ ತರಗತಿಯಲ್ಲಿ ಓದುತ್ತಿರುವ ನನಗೆ ಅರ್ಥ ಆಗಿಲ್ಲ... ನಿನ್ನ ಅಮ್ಮ ಏನು ಓದಿಲ್ಲ, ಅವರಿಗೆ ಏನು ಅರ್ಥವಾಗಿರುತ್ತೆ?' ಎಂದು ಕೈಯಲ್ಲಿ ಇಟ್ಟಿದ್ದ ಜ್ಯೂಸ್ ಕುಡಿಯುತ್ತಾ ಹೊರಡುತ್ತಾನೆ. ಇದನ್ನು ಕೇಳಿದ ವಿಕಾಸ್, ತಾನು ಅರಿಯದೆ ಮಾಡಿದ ತಪ್ಪು ತಿಳಿದು, ತಾನು ಹೇಳಿದ ಒಂದು ಮಾತು ಸಹ ಅಮ್ಮನಿಗೆ ತಿಳಿಯಲಿಲ್ಲ ಎಂಬ ಬೇಸರದಿಂದ ಅಮ್ಮನ ಬಳಿಗೆ ಓಡುತ್ತಾನೆ. ವಿಕಾಸ್ ಅಮ್ಮನಿಗೆ, ಅಮ್ಮಾ, ಪತ್ರ ಹೇಗಿತ್ತು ಎಂದು ಕೇಳುತ್ತಾನೆ. ಅವಾಗ ಅಮ್ಮ, ಎಷ್ಟು ಚೆಂದ ಇಂಗ್ಲಿಷ್ ಮಾತಾಡ್ತೀಯಾ ಮಗನೇ. ತುಂಬಾ ಖುಷಿ ಆಯ್ತು. ನಿನ್ನ ಅಪ್ಪ ಇದ್ದಿದ್ರೆ, ನನಗಿಂತ ಜಾಸ್ತಿ ಹೆಮ್ಮೆ ಪಡುತ್ತಿದ್ದರು, ಎಂದು ಹೇಳುತ್ತಾಳೆ. ವಿಕಾಸ್ ನಿರಾಶೆಯಿಂದ ಹಾಗಲ್ಲ ಅಮ್ಮಾ ನಿನಗೆ ಏನು ಅರ್ಥ ಆಯ್ತು ನಾನೇನಾದರೂ ಹೇಳಿದ್ದು ಎಂದು ಕೇಳುತ್ತಾನೆ. ಆಗ ಅಮ್ಮ, ನನಗೆ ಎಲ್ಲೋ ಇಂಗ್ಲೀಷ್ ಬರತ್ತೆ, ಏನು ಅರ್ಥ ಆಗಿಲ್ಲ ಆದರೆ ನಿನ್ನ ಇಂಗ್ಲೀಷ್ ಮಾತಾಡೋದು ನೋಡ್ತಾ ಖುಷಿಯಾಗ್ತಾ ಇತ್ತು... ಆಕಾಶ್ ಅವರ ಅಮ್ಮನೂ ಸಹ ಹೊಗಳುತ್ತಾ ಇದ್ದರು ನಿನ್ನನು ಎಂದು ಹೇಳುತ್ತಾಳೆ. ಇದನ್ನು ಕೇಳಿ ವಿಕಾಸ್, ಕಣ್ಣಲ್ಲಿ ನೀರು ಹಾಕುತ್ತಾ ತನ್ನ ರೂಮ್‌ಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. ಅಮ್ಮ ಗಾಬರಿಗೊಂಡು, ಬಾಗಿಲಿನ ಬಳಿ ನಿಂತು ಬಾಗಿಲು ತೆಗಿ ಎಂದು ಕೂಗುತ್ತಿರುತ್ತಾಳೆ. ಬಾಗಿಲು ತೆಗಿ, ಏನಾಯಿತಪ್ಪಾ ವಿಕಾಸ್ ಎಂದು ಆತಂಕದಿಂದ ಕೇಳುತ್ತಾಳೆ. ಸ್ವಲ್ಪ ಸಮಯದ ನಂತರ ಬಾಗಿಲು ತೆರೆಯುವ ಶಬ್ದ ಆಗುತ್ತದೆ. ಕೂಗುವುದನ್ನು ನಿಲ್ಲಿಸುತ್ತಾಳೆ. ವಿಕಾಸ್ ಆಚೆ ಬರುತ್ತಾನೆ. ವಿಕಾಸ್‌ನ ಕೈಯಲ್ಲಿ ಹೊಸದೊಂದು ಪತ್ರ ಇರುತ್ತದೆ. ಅಮ್ಮನನ್ನು ನೋಡುತ್ತಾ ಅದನ್ನು ಓದುತ್ತಾನೆ

ಅಮ್ಮಾ, ನಾನು ನಿನ್ನ ದೇಹದಿಂದ ಬೇರೆ ಬಂದಿದ್ದೇನೆ ಅಷ್ಟೆ, ಆದರೆ ನಿನ್ನ ಜೀವವೇ ನಾನು. ನಾನೇ ನಿನ್ನ ಉಸಿರು. ಅಮ್ಮಾ, ಎಷ್ಟು ಕಷ್ಟ ತೆಗೆದುಕೊಂಡೆ ನೀನು!

ಸರ್ಕಾರಿ ಶಿಶುವಿಹಾರದಲ್ಲಿ ಅಡುಗೆ ಕೆಲಸ, ಮನೆ ಮನೆಗೆ ಹೋಗಿ ಹೋಟೆಲ್ ಕೆಲಸ, ಮನೆ ಕೆಲಸ... ಇದೊಂದು ಕೂಡ ನಿನ್ನ ವೈಯಕ್ತಿಕ ಸ್ವಾರ್ಥಕ್ಕಾಗಿ ಅಲ್ಲ. ಪ್ರತಿಯೊಂದು ಕೆಲಸವೂ ನನ್ನ ಬೆಳವಣಿಗೆಗಾಗಿ, ನನ್ನ ಭವಿಷ್ಯಕ್ಕಾಗಿ, ನನ್ನ ಶಿಕ್ಷಣಕ್ಕಾಗಿ ಮಾಡಿದ ಶ್ರಮ.

ನಾನು ಅಳುವಾಗ ನನಗಿತ್ತು ನೆಮ್ಮದಿ ನಿನ್ನ ಮಡಿಲಲ್ಲಿ, ಸೋತಾಗ ಸಿಕ್ಕಿದ ಪ್ರೋತ್ಸಾಹ ನಿನ್ನ ಮಾತುಗಳಲ್ಲಿ, ನಾನೊಬ್ಬಂಟನಾಗಿದ್ದಾಗ ನಿನ್ನ ಸ್ಪರ್ಶವೇ ನನಗೆ ಧೈರ್ಯವಾಯಿತು. ನಿನ್ನ ಪ್ರೀತಿಯು ನಿಸ್ವಾರ್ಥ, ನಿನ್ನ ತ್ಯಾಗವು ಅಸೀಮ. ಅಮ್ಮಾ, ನೀನು ನನಗೆ ಕೊಟ್ಟದ್ದನ್ನು ಎಣಿಸಲಾರದು, ಅವು ಶಬ್ದಕ್ಕಿಂತಲೂ ಗಂಭೀರವಾದವು.

ಇನ್ನು ಮುಂದೆ ನಿನ್ನ ಕಷ್ಟ ನಾನು ನೋಡಲಾರೆ. ಈಗ ನಾನಿದ್ದೇನೆ ನಿನ್ನ ಕಣ್ಣಲ್ಲಿ ನಗೆಯ ಹೂ ಬಿತ್ತಲು, ನಿನ್ನ ಬದುಕಿಗೆ ಅರಮನೆ ಕಟ್ಟಲು. ನೀನು ಇನ್ನು ಮುಂದೆ ಕಷ್ಟವಲ್ಲ, ಆನಂದವನ್ನೇ ಅನುಭವಿಸಬೇಕು. ನೀನು ನನಗೆ ಜೀವವನ್ನಿತ್ತೆ, ನಾನು ನಿನಗಾಗಿ ಬದುಕು ಕಟ್ಟಬೇಕೆಂದು ನನ್ನೆಲ್ಲಾ ಶಕ್ತಿ ಮೀರಿ ಶ್ರಮಿಸುತ್ತೇನೆ. ನಿನ್ನ ಈ ಅಸಾಮಾನ್ಯ ತ್ಯಾಗಕ್ಕೆ ನನ್ನ ಈ ಸಾಮಾನ್ಯ ಜೀವನವೊಂದು ಮಾತ್ರವೇ ಪ್ರತಿಫಲ. ಆದರೆ ಈ ಕಿರಿಯ ಹೃದಯದಿಂದ ಹೇಳುತ್ತೇನೆ.

ಅಮ್ಮಾ, ನಿನ್ನ ಋಣಕ್ಕೆ ನಾನು ಎಂದೆಂದಿಗೂ ಚಿರಋಣಿ. ಇದನ್ನು ಕೇಳುತ್ತಿದ್ದಂತೆ ಅಮ್ಮ ಕಣ್ಣೀರಿಡುತ್ತಾ, ವಿಕಾಸನನ್ನು ಬಿಗಿಯಾಗಿ ತಬ್ಬಿಕೊಳ್ಳುತ್ತಾಳೆ. ಆ ಕ್ಷಣದಲ್ಲಿ ಮಾತುಗಳಿಗಿಂತ ಭಾವನೆಗಳು ತುಂಬಿ ಹರಿದಿದ್ದವು. ಮನೆಯಲ್ಲೆಲ್ಲಾ ಆ ತಾಯಿ-ಮಗನ ಅನುಬಂಧದ ದೃಶ್ಯವನ್ನು ನೋಡಿ ನಿಶ್ಯಬ್ದವಾಗಿದ್ದರೂ, ಹೃದಯಗಳಲ್ಲಿ ಮಾತ್ರ ಪ್ರೀತಿ, ಗೌರವ, ಹಾಗೂ ಹೆಮ್ಮೆ ತುಂಬಿರುತ್ತವೆ

ಅಮ್ಮ ವಿಕಾಸ್‌ಗೆ,

ನನಗೆ ಹೇಳಲು ಮಾತಿಲ್ಲ ಮಗನೇ... ನೀನು ನಿಧಾನವಾಗಿ ಓದಿ ಹೇಳಿದ ಆ ಸಾಲುಗಳನ್ನು ಕೇಳಿದಾಗ ನಾನೇ ಈ ಎಲ್ಲವನ್ನೂ ಮಾಡಿದ್ದೆನಾ ಅಂತಾ ನಾನೇ ನಂಬಲಾಗದಷ್ಟು ಅನಿಸ್ತು... ಇಷ್ಟೆಲ್ಲಾ ಆಗಿದೆಯಾ ಅನ್ನೋದು ಒಂದಿಷ್ಟು ಕ್ಷಣ ನನ್ನ ಮೇಲೆ ನನಗೆ ಅನುಮಾನವಾಗಿಸಿದಂತಾಯ್ತು...

ಅವಳ ಮಾತುಗಳಲ್ಲಿ ಅಚಲ ಪ್ರೀತಿ, ತ್ಯಾಗದ ನೆನಪು, ಮತ್ತು ಮಗನಿಂದ ಬಂದ ಆದರದ ಕನಸು ತುಂಬಿರುತ್ತವೆ. ವಿಕಾಸ್ ಹೇಳುತ್ತಾನೆ, "ಅಮ್ಮಾ, ಎಲ್ಲರೂ ಇದ್ದಾಗ ಓದಿದ ಪತ್ರವನ್ನು ನಾನು ಇಂಗ್ಲಿಷ್‌ನಲ್ಲಿ ಬರೆದೆ. ಅದನ್ನು ಬರೆಯಲು ತಡರಾತ್ರಿವರೆಗೂ ಕಾಲ ಹಿಡಿದುಕೊಂಡಿದ್ದೆ... ಆದರೆ ಅದೇ ನಿನಗೆ ಅರ್ಥವಾಗಲಿಲ್ಲ. ಈ ಹೊಸ ಪತ್ರ ಬರೆಯಲು ಹೆಚ್ಚು ಸಮಯ ಬೇಕಾಗಿಲ್ಲ ಅಮ್ಮಾ ಆದರೆ ಭಾವನೆಗಳು ತುಂಬಾ ಮಾತುಗಳು" ಅವಳ ಮಾತುಗಳಲ್ಲಿ ಅಕ್ಕರೆ ಆತ್ಮೀಯತೆ, ಪಶ್ಚಾತ್ತಾಪ ಮತ್ತು ತಾಯಿಯೊಂದಿಗೆ ಹಂಚಿಕೊಳ್ಳಬೇಕೆಂಬ ಆಳವಾದ ಭಾವನೆ ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ.

ಮಕ್ಕಳ ಚಿತ್ರಕಥೆ: ನಮ್ಮ ಸೈನ್ಯ-ನಮ್ಮ ಹೆಮ್ಮೆ

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಭಯೋತ್ಪಾದಕರನ್ನು ಶಿಕ್ಷಿಸುವುದು ದೇವರ ಕೆಲಸ. ಆದರೆ ಅವರು ದೇವರನ್ನು ಭೇಟಿಯಾಗುವಂತೆ ಮಾಡುವುದು ನಮ್ಮ ಕೆಲಸ — ಭಾರತೀಯ ಸೇನೆ.



ಯೋಧರು ಹುಟ್ಟುವುದಿಲ್ಲ... ಅವರನ್ನು ಭಾರತೀಯ ಸೇನೆಯಲ್ಲಿ ತಯಾರಿಸಲಾಗುತ್ತದೆ.




ದೇವ್ರು, ಭೂತಾಯಿ, ತಂದೆ-ತಾಯಿ, ಗುರುಗಳು ಹೇಗೆ ಪ್ರಾತಃಸ್ಮರಣೀಯರೋ, ಹಾಗೆಯೇ ನಮ್ಮ ವೀರ ಯೋಧರೂ ಅದೇ ಸಾಲಿನಲ್ಲಿ ನಿಲ್ಲುವರು.




ಯೋಗ್ಯ ಭಾರತೀಯನಾಗಿ, ಏಕೆಂದರೆ ನಿಮ್ಮನ್ನು ಉಳಿಸಲು ಸೈನಿಕ ಗಡಿಯಲ್ಲಿ ಕಾದಾಡುತ್ತಿದ್ದಾನೆ...!



ನಮ್ಮ ಧ್ವಜವು ಗಾಳಿ ಬೀಸುವುದರಿಂದ ಹಾರುವುದಿಲ್ಲ, ಅದನ್ನು ರಕ್ಷಿಸಲು ತನ್ನ ಪ್ರಾಣವನ್ನು ತ್ಯಾಗ ಮಾಡುವ ಪ್ರತಿಯೊಬ್ಬ ಸೈನಿಕರ ಕೊನೆಯ ಉಸಿರಿನೊಂದಿಗೆ ಹಾರುತ್ತದೆ. – ಭಾರತೀಯ ಸೇನೆ.



ಸುಡುವ ಬಿಸಿಲಿನಲ್ಲಿಯೂ, ಕೊರೆವ ಮಂಜಿನಲ್ಲಿಯೂ ಸೇವೆ ಸಲ್ಲಿಸುತ್ತ "ನಾನು ಆರಾಮವಾಗಿದ್ದೇನೆ" ಎನ್ನುವವ ಸೈನಿಕ ಮಾತ್ರ..!



ವಾರಭವಿಷ್ಯ

11.05.2025 ರಿಂದ 17.05.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ವೃಷಭ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಕುಜ-ಕಟಕ, ಬುಧ - ಮೇಷ, ಗುರು-ವೃಷಭ, ಮಿಥುನ, ಶುಕ್ರ-ಮೀನ, ಶನಿ-ಮೀನ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಈ ವಾರ ನಿಮ್ಮ ಚಿಂತನಶೀಲತೆಯ ಅವಶ್ಯಕತೆ ಇದೆ. ಹಿಂದೆ ಮಾಡಿದ್ದ ಹೂಡಿಕೆಗಳು ಈಗ ಪ್ರತಿಫಲ ನೀಡುವುವು. ಇತರರ ಅನಗತ್ಯ ಬೇಡಿಕೆಗಳನ್ನು ಪೂರೈಸಿ ನಷ್ಟವನ್ನು ಹೊಂದುವಿರಿ. ನಿಮ್ಮ ವಿರೋಧಿಗಳು ಮೇಲುಗೈ ಸಾಧಿಸುವರು. ವೃತ್ತಿ ಮತ್ತು ಉದ್ಯೋಗಗಳ ವಿಷಯದಲ್ಲಿ ತೃಪ್ತಿದಾಯಕ ಫಲವನ್ನು ಅನುಭವಿಸುವಿರಿ. ಸ್ಥಿರಾಸ್ತಿ ಮಾರಾಟದ ವಿಚಾರವನ್ನು ಮುಂದೂಡುವುದು ಉಚಿತ.
ಶ್ರೀ ದೇವೀ ಖಡ್ಗಮಾಲ ಸ್ತೋತ್ರ ಪಠಿಸಿ, ಶುಭ ಸಂಖ್ಯೆ-5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಉದ್ಯೋಗ ವ್ಯವಹಾರಗಳಲ್ಲಿ ಧನಲಾಭ, ಮನೋ ವಾಂಛಿತ ಇಚ್ಛೆಗಳು ಈಡೇರುವುವು. 'ಮಾತು ಬಲ್ಲವ ಮಾಣಿಕ್ಯ ತಂದ' ಎಂಬಂತೆ ಸವಿಮಾತಿನಿಂದ ಕಾರ್ಯ ಸಾಧಿಸಿಕೊಳ್ಳುವಿರಿ. ವನಿತಾ ಮಣಿಯರು ಅಲಂಕಾರಿಕ ವಸ್ತುಗಳಿಗೆ ಹೇರಳ ಧನ ವ್ಯಯಿಸುವರು. ಯಾರ ಸಾಲಕ್ಕೂ ಜಾಮೀನು ಸಹಿ ಹಾಕಬೇಡಿ. ವಾರಾಂತ್ಯಕ್ಕೆ ಅನಿರೀಕ್ಷಿತ ಖರ್ಚುಗಳು ಎದುರಾಗುವುವು.
ಶ್ರೀ ಚಾಮುಂಡೇಶ್ವರಿ ಪ್ರಾರ್ಥನೆ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರ ಸ್ವಲ್ಪ ಒತ್ತಡಭರಿತವಾಗಿರುತ್ತದೆ. ಧನಾತ್ಮಕವಾಗಿ ಚಿಂತಿಸಿ ಸಾಧನೆಯ ಮಾರ್ಗ ತೆರೆದುಕೊಳ್ಳುತ್ತದೆ. ಹೊಸ ಮಿತ್ರರ ಪರಿಚಯವಾಗುವುದು. ಮರವುಟ್ಟು ವ್ಯಾಪಾರದಿಂದ, ಸಾಮಿಲ್ ವ್ಯವಹಾರದಿಂದ ಹೆಚ್ಚಿನ ಲಾಭವನ್ನು ಗಳಿಸುವಿರಿ. ಕೃಷಿ ಯಂತ್ರೋಪಕರಣ ಏಜೆನ್ಸಿಗಳಿಗೆ ಲಾಭದಾಯಕ ಗಿರಾಕಿಗಳು ದೊರಕುವರು. ದಾಯಾದಿ ಕಲಹಗಳಿಂದ ಮಾನಸಿಕ ಕ್ಷೋಭೆ ಉಂಟಾಗುವುದು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ, ಶುಭ ಸಂಖ್ಯೆ-3

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ವಾರದಾರಂಭಕ್ಕೆ ಕಾರ್ಯಸಿದ್ಧಿ. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಸಮಾಜದಲ್ಲಿ ನಿಮ್ಮ ಗೌರವ, ಪ್ರತಿಷ್ಠೆಗಳು ಹೆಚ್ಚುವುದು. ಗೃಹದಲ್ಲಿ ಮಂಗಳ ಕಾರ್ಯ ಜರುಗಲಿದೆ. ಶ್ರೀಮತಿಯ ಸಹಕಾರದಿಂದ ಕಷ್ಟ ನಿವಾರಣೆ. ಲೆಕ್ಕ ಪರಿಶೋಧಕರಿಗೆ ದೊಡ್ಡ ಕಕ್ಷಿಗಾರರು ದೊರಕುವರು. ಅಗ್ನಿ ಅವಘಡಗಳಿಂದ ಜಾಗೃತರಾಗಿರಿ. ಅನಾರೋಗ್ಯದಿಂದ ಪ್ರತಿಕೂಲ ಪರಿಣಾಮ.
ಶ್ರೀ ದುರ್ಗಾ ಪರಮೇಶ್ವರಿ ಸ್ತುತಿ. ಶುಭ ಸಂಖ್ಯೆ-9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಹಲವು ರೀತಿಯಿಂದ ದ್ರವ್ಯಲಾಭ. ಗುರು-ಹಿರಿಯರ ಭೇಟಿ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಯುವಕರಿಗೆ ಉನ್ನತ ಶಿಕ್ಷಣದಿಂದ ಕೀರ್ತಿ, ಶುಭ ಸುದ್ದಿ ಬಂದು ಮನಸ್ಸಿಗೆ ಸಮಾಧಾನ. ಅಷ್ಟಮ ಶನಿದೇವನ ಕಾರಣ ಜೀವನದ ಬದಲಾವಣೆಗಳಿಗೆ ಸಿದ್ಧರಾಗಿರಿ. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. ನೀರಿನ ಹತ್ತಿರ ಹೋದಾಗ ಹುಡುಗಾಟ ಸಲ್ಲದು.
ಶ್ರೀ ಸುಬ್ರಹ್ಮಣ್ಯ ಪೂಜಿಸಿ. ಶುಭ ಸಂಖ್ಯೆ-4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದ ಆದಿಗೆ ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರಕವಾಗಿ ಪೂರೈಸಿಕೊಳ್ಳಿ. ಕೈಯಲ್ಲಿ ಇದ್ದ ಹಣ ವ್ಯಯವಾದರೂ ಸತ್ಕಾರ್ಯಕ್ಕೆ ಬಳಕೆಯಾಗುವುದು. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಲಭ್ಯವಾಗಲಿದೆ. ಸಾರಿಗೆ ವ್ಯವಸ್ಥೆ ನಡೆಸುವವರಿಗೆ ಉತ್ತಮ ವರಮಾನವಾಗಲಿದೆ. ತಂದೆಯಿಂದ ಸಹಾಯ, ಸಹಕಾರಗಳು ದೊರೆಯುವುದು. ರಾಹು-ಕೇತುಗಳು ಅಶುಭರಿದ್ದು ಸಿಟ್ಟು-ಕೋಪ ತ್ಯಜಿಸಿ.
ಶ್ರೀ ರಾಮತಾರಕ ಮಂತ್ರ ಜಪಿಸಿ. ಶುಭ ಸಂಖ್ಯೆ-9

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಮನೋಕಾರಕ ಚಂದ್ರ ಮೈ ಮನಗಳಲ್ಲಿ ಉತ್ಸಾಹ, ಉಲ್ಲಾಸಗಳನ್ನು ನೀಡಲಿದ್ದಾನೆ. ಮಾತೃಶ್ರೀಯರ ಆಶೀರ್ವಾದದಿಂದ ನೂತನ ಸ್ಥಾನಮಾನಗಳು ಲಭ್ಯವಾಗಲಿದೆ. ಕಳೆದುಕೊಂಡಿದ್ದ ಆರೋಗ್ಯವನ್ನು ಮರಳಿ ಪಡೆಯುವಿರಿ. ಪ್ರೀತಿ-ಪ್ರಣಯ ವಿಷಯಗಳು ಬ್ರಹ್ಮಗಂಟಿನಲ್ಲಿ ಮುಕ್ತಾಯವಾಗಬಹುದು. ಯಾವುದಕ್ಕೂ ಮನೆಯಲ್ಲಿ ಹಿರಿಯರ ಸಹಮತ ಪಡೆಯಿರಿ.
ಶ್ರೀ ದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ
'ಶ್ರದ್ಧಾವಾನ್ ಲಭತೇ ಫಲಂ' ಎಂಬಂತೆ ಮಾಡುವ ಕೆಲಸದಲ್ಲಿ ಶ್ರದ್ಧೆ ಇದ್ದಲ್ಲಿ ಗುರಿ ಮುಟ್ಟುವಿರಿ. ಗ್ರಹಗಳು ಫಲ ನೀಡುವ ಸಮಯದಲ್ಲಿ ಕಾರ್ಯತತ್ಪರರಾಗಿ. ಗೃಹ ನಿರ್ಮಾಣ ಪ್ರಯತ್ನಗಳು ಮುಂದುವರೆಯಲಿ. ಸಂಶೋಧಕರಿಗೆ ಪ್ರಶಸ್ತಿ, ಬಹುಮಾನಗಳು ದೊರೆಯಲಿದೆ. ಸಮಾಜದಲ್ಲಿ ಗೌರವ ಪ್ರಾಪ್ತಿ. ಹೈನುಗಾರಿಕೆ ವೃತ್ತಿಯವರಿಗೆ ಭರಪೂರ ಧನಾದಾಯವಾಗುವುದು. ಪುಣ್ಯಕ್ಷೇತ್ರ ಭೇಟಿಯೊಂದಿಗೆ ವಾರಕ್ಕೆ ತೆರೆ.
ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ-4

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಮುಖ್ಯ ಕೆಲಸಗಳನ್ನು ಆದ್ಯತೆಯ ಆಧಾರದ ಮೇಲೆ ಕೈಗೆತ್ತಿಕೊಳ್ಳಿ. ಪುಸ್ತಕ ಮತ್ತು ಫ್ಯಾನ್ಸಿ ಐಟಂ ಅಂಗಡಿಯವರಿಗೆ ಭರಪೂರ ವ್ಯಾಪಾರ ಹಾಗೂ ಲಾಭ ಆಗುವುದು. ಸತಿ-ಪತಿಯರು ಪರಸ್ಪರ ಸೋತು ಗೆದ್ದರೆ ಗೃಹಶಾಂತಿಗೆ ಭಂಗ ಬರದು. ನೆರೆಹೊರೆಯಲ್ಲೂ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಚತುರ್ಥದಲ್ಲಿ ಶನಿ-ರಾಹು ಸಂಯೋಜನೆ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದು.
ಶ್ರೀ ರಾಘವೇಂದ್ರಸ್ವಾಮಿ ಆರಾಧನೆ. ಶುಭ ಸಂಖ್ಯೆ-1

ಮಕರ (ಜೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಈ ಸಪ್ತಾಹದಲ್ಲಿ ಕೆಲವೊಂದು ಮಹತ್ತದ ಬದಲಾವಣೆಗಳು ನಿಮ್ಮ ಜೀವನದಲ್ಲಿ ಆಗುವುದು. ಗುರುಕೃಪೆಯಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆ ಏನೂ ಆಗದು. ಹಲವರಿಗೆ ಉದ್ಯೋಗದಲ್ಲಿ ಬಡ್ತಿ ದೊರೆಯುವ ಅವಕಾಶವಿದೆ. ಆಸ್ತಿ ವಿಭಾಗ ವಿಚಾರಗಳು ಇತ್ಯರ್ಥವಾಗುವುದು. ವಾಹನ ವ್ಯವಹಾರದಲ್ಲಿ ನಷ್ಟ ಉಂಟಾಗುವುದು. ವಾರಾಂತ್ಯಕ್ಕೆ ಕುಟುಂಬ ಸಮೇತ ಧರ್ಮಕ್ಷೇತ್ರ ಸಂದರ್ಶನ.
ಶ್ರೀ ಮಾರುತಿ ಉಪಾಸನೆ. ಶುಭ ಸಂಖ್ಯೆ-6

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಉದ್ಯೋಗದಲ್ಲಿ ಅಧಿಕಾರಿಗಳ ಸಹಾಯ ದೊರೆಯುವುದು. ಆದರೆ ಯತ್ನ ಕಾರ್ಯಗಳು ನಿಧಾನ ಗತಿಯಲ್ಲಿ ಸಾಗುವುದು. ಕೊಟ್ಟ ಮಾತಿನಂತೆ ನಡೆದು ಪ್ರಶಂಸೆಗೆ ಪಾತ್ರರಾಗುವಿರಿ. ಗೃಹ ನಿರ್ಮಾಣ ಪ್ರಯತ್ನಗಳು ಮುಂದುವರೆಯಲಿ. ಸರ್ಕಾರಿ ನೌಕರರಿಗೆ ಕೆಲಸದ ಒತ್ತಡ, ಮೇಲು ಅಧಿಕಾರಿಗಳ ಅವಕೃಪೆ. ದೇಹದಲ್ಲಿ ಅಸಮತೋಲನ, ವೈದ್ಯರ ಭೇಟಿ ಅನಿವಾರ್ಯ. ಔಷಧೋಪಚಾರಕ್ಕೆ ಹಣ ವ್ಯಯ.
ಶ್ರೀ ಶನಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದ ಆದಿಗೆ ಆರೋಗ್ಯ ಭಾಗ್ಯ, ಮನೆಯಲ್ಲಿ ಸಂತಸದ ವಾತಾವರಣ. ಋಣಬಾಧೆಗಳು ತೀರಬಹುದು. ಕೈಗೆ ಧಾರಾಳವಾಗಿ ಹಣ ಸೇರಿತೆಂದು ಧಾರಾಳವಾಗಿ ಖರ್ಚು ಮಾಡದೆ ಆಪತ್ಕಾಲಕ್ಕೆ ಉಳಿಸಿ. ಲೆಕ್ಕ ಪರಿಶೋಧಕರಿಗೆ ಹೊಸ ಕಕ್ಷಿದಾರರು ದೊರಕುವರು. ಸರ್ಕಾರಿ ಅಧಿಕಾರಿಗಳು ಕಾನೂನುಬಾಹಿರ ಕೆಲಸ ಮಾಡಿ ತೊಂದರೆಗೆ ಗುರಿಯಾಗುವರು. ಸಾಫ್ಟ್‌ವೇರ್ ಮಂದಿಗೆ ಕೆಲಸದ ಸ್ಥಳ ಬದಲಾವಣೆ.
ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8

ಹೈರಿಗೆ ಕೆರೆ ಎಡ, ಬಲದಂಡೆ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್ ಗೌಡ ಗುದ್ದಲಿ ಪೂಜೆ

ಹಾರಂಗಿ ಜಲಾಶಯದ ಕಾಲುವೆ, ಉಪ ಕಾಲುವೆಗಳ ನಿರ್ಮಾಣ ಕಾಮಗಾರಿ ಬಗ್ಗೆ ಅಸಮಾಧಾನ



ತಾಲೂಕಿನ ಹೈರಿಗೆ ಕೆರೆ, ಎಡದಂಡೆ, ಬಲದಂಡೆ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಹುಣಸೂರು, ಮೇ 10– ಎರಡು ಕೋಟಿ ರೂ ವೆಚ್ಚದಲ್ಲಿ ತಾಲೂಕಿನ ಹೈರಿಗೆ ಕೆರೆ, ಎಡದಂಡೆ, ಬಲದಂಡೆ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು ಹಾರಂಗಿ ಬಲದಂಡೆ ಮತ್ತು ಎಡದಂಡೆ ಜಮೀನುಗಳಿಗೆ ನೀರು ಒದಗಿಸುವ ಹಾರಂಗಿ ಜಲಾಶಯ ಯೋಜನೆಯ ಕಾಲುವೆ, ಉಪ ಕಾಲುವೆಗಳ ನಿರ್ಮಾಣ ಕಾಮಗಾರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಹೈರಿಗೆ ಕೆರೆಯಲ್ಲಿ ನೂರಾರು ಅಡಿ ನೀರು ಸಂಗ್ರಹಿಸಲಾಗುತ್ತಿದ್ದು, ಎರಡು ಜಿಲ್ಲೆ ಸಾವಿರಾರು ಹೆಕ್ಟೇರ್ ಜಮೀನುಗಳಿಗೆ ಈ ಅಣೆಕಟ್ಟಿನ ನೀರೇ ಜೀವಾಳ. ಆದರೆ, ಕಾಲುವೆಗಳ ನಿರ್ವಹಣೆ ಕಾರ್ಯ ಸಮರ್ಪಕವಾಗಿ ನಡೆಯದ ಕಾರಣ, ಸಾಕಷ್ಟು ನೀರು ಪೋಲಾಗಿ ಕೊನೆಯ ಹಂತದ ಜಮೀನುಗಳಿಗೆ ನೀರು ದಕ್ಕುತ್ತಿಲ್ಲ ಎಂದು ಶಾಸಕ ಜಿ.ಡಿ. ಹರೀಶ್ ಗೌಡರು ಬೇಸರ ವ್ಯಕ್ತಪಡಿಸಿದರು.

ಯೋಜನೆಯ ನೀಲನಕ್ಷೆಯಂತೆ ಬಲದಂಡೆ ಕಾಲುವೆ ಹಾಗೂ ಎಡದಂಡೆ ಕಾಲುವೆ ನಿರ್ಮಿಸಲಾಗಿದೆ. ಕಾಲುವೆಗಳ ನಿರ್ವಹಣೆಗೆಂದು ಪ್ರತಿವರ್ಷ ಸರ್ಕಾರವು ಕೋಟ್ಯಂತರ ರೂ. ಹಣ ಬಿಡುಗಡೆ ಮಾಡುತ್ತಿದ್ದರೂ ನಿರ್ವಹಣೆ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ರೈತರು ದೂರುತ್ತಾರೆ ಎಂದು ಅವರು ಹೇಳಿದರು.

ಹಾರಂಗಿಯ ಮುಖ್ಯ ಕಾಲುವೆಯನ್ನು 2–3 ವರ್ಷಗಳ ಹಿಂದೆಯಷ್ಟೇ ದುರಸ್ತಿ ಮಾಡಲಾಗಿತ್ತು. ಆದರೆ, ಈಗ ಹಲವೆಡೆ ಕಾಂಕ್ರೀಟ್ ಲೈನಿಂಗ್ ಬಿದ್ದುಹೋಗಿವೆ. ಇದಲ್ಲದೇ, ಕಾಂಕ್ರೀಟ್‌ಗಾಗಿ ಬಳಸಲಾದ ಕಬ್ಬಿಣದ ಸಲಾಕೆಗಳು ಸಹ ಮೇಲೆದ್ದು ಕಾಣುತ್ತಿವೆ. ಕಾಮಗಾರಿಯ ಗುಣಮಟ್ಟಕ್ಕೆ ಇನ್ನೆಂಥ ಸಾಕ್ಷಿ ಬೇಕು. ಇದನ್ನು ಸರಿಪಡಿಸಲು ಸಾಕಷ್ಟು ಹಣ ಬೇಕು ಎಂದರು.

ಇಲ್ಲಿನ ಕಾಮಗಾರಿ ಟೆಂಡರ್‌ಗಳನ್ನು ಹೊರಜಿಲ್ಲೆಯ ಗುತ್ತಿಗೆದಾರರು ಪಡೆಯುತ್ತಾರೆ. ನಂತರ ಅದನ್ನು ತುಂಡುಗುತ್ತಿಗೆಯನ್ನಾಗಿ ಕೆಲವು ಜನರಲ್ಲಿ ಹಂಚಿಕೊಳ್ಳುತ್ತಾರೆ. ಕಾಮಗಾರಿಯ ಗುಣಮಟ್ಟದ ಬಗ್ಗೆ ಯಾರನ್ನಾದರೂ ಪ್ರಶ್ನಿಸಿದರೆ ಎಲ್ಲರದ್ದೂ ಹಾರಿಕೆ ಉತ್ತರ ಬರುತ್ತದೆ. ಈ ರೀತಿ ಈ ಅವಧಿಯಲ್ಲಿ ಆಗಬಾರದು. ಗುಣಮಟ್ಟದ ಕೆಲಸವಾಗಬೇಕು ಎಂದು ಇಂಜಿನಿಯರ್ ಗಳಿಗೆ ಸೂಚಿಸಿದರು.

ಕಾಮಗಾರಿಯ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಬೇಕಾದ ಎಂಜಿನಿಯರ್‌ಗಳು ಸ್ಥಳದಲ್ಲಿಯೇ ಇರುವುದಿಲ್ಲ. ಕಾಲುವೆಗಳ ಲೈನಿಂಗ್ ಹಾಳಾಗಿ ಹೋಗಿದೆ ಇನ್ನೂ ಮುಂದೆ ಸಂಭವಿಸಿದ ಇಂಜಿನಿಯರ್‌ಗಳೆ ಹೊಣೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು

ಮತ್ತೊಂದೆಡೆ ಅಕ್ಕಪಕ್ಕ ಬೆಳೆದಿದ್ದ ಹಲವಾರು ಮರಗಿಡಗಳು ಉರುಳಿ ಕಾಲುವೆಯಲ್ಲಿ ಬಿದ್ದಿವೆ. ಎಲೆಗಳು, ಮರದ ಕೊಂಬೆ ತುಂಡುಗಳು ಗೇಟ್‌ನಲ್ಲಿ ಸಿಲುಕಿ ಮತ್ತೊಂದು ಸಮಸ್ಯೆ ಸೃಷ್ಟಿಸುತ್ತಿದೆ. ಇದರ ಬಗ್ಗೆ ಜಾಗ್ರತೆ ಇರಲಿ ಎಂದು ಹೇಳಿದರು.

ಸಮಾರಂಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ ರವಿ, ಎಇಇ ಮೋಹನ್ ಕುಮಾರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಶ್ರೀನಿವಾಸ ಗೌಡ ರಾಜೇಗೌಡ, ಹೆಗ್ಗಂದೂರು ಶಿವಕುಮಾರ್, ತಟ್ಟೆಕೆರೆ ಶ್ರೀನಿವಾಸ್ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು

ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದೇನೆ



ಹಲ್ಲರೆ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ಮಲ್ಕುಂಡಿ: ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ಶಾಸಕ ದರ್ಶನ್ ತಿಳಿಸಿದ್ದಾರೆ. ಸಮೀಪದ ಹಲ್ಲರೆ ಗ್ರಾಮದಲ್ಲಿ ಮುಸ್ಲಿಂ ಸಮುದಾಯದ ಬೀದಿಯಲ್ಲಿ 25 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಹಗಿನವಾಳು ಗ್ರಾಮದಲ್ಲಿ ಮುಸ್ಲಿಂ ಸಮುದಾಯದ ಬೀದಿಯಲ್ಲಿ 25 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಸರ್ಕಾರದ ವಿವಿಧ ಇಲಾಖೆಗಳಿಂದ ಹಣ ಬಿಡುಗಡೆಗೊಳಿಸಿ ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಸಮರ್ಪಕವಾಗಿ ಅನುದಾನ ನೀಡಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಹಲವು ವರ್ಷಗಳಿಂದ ಆಗಬೇಕಾಗಿದ್ದ ಕಾಮಗಾರಿಗಳು ನನ್ನ ಅವಧಿಯಲ್ಲಿ ಅಭಿವೃದ್ಧಿಯಾಗುತ್ತಿವೆ. ಚುನಾವಣಾ ಸಂದರ್ಭದಲ್ಲಿ ಅನೇಕ ಗ್ರಾಮಗಳಲ್ಲಿ ರಸ್ತೆ ಚರಂಡಿ ಕಾಮಗಾರಿಗಳನ್ನು ಮಾಡಿಸಿಕೊಡುವಂತೆ ಮನವಿ ಮಾಡಿದ ಮೇರೆಗೆ ಕಳೆದ 2 ವರ್ಷಗಳಿಂದ ನಮ್ಮ ಸರ್ಕಾರ ಗ್ಯಾರಂಟಿ ಜೊತೆಗೆ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದೆ. ನಮ್ಮ ಸರ್ಕಾರ ನುಡಿದಂತೆ ನಡೆದ ಸರ್ಕಾರವಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಶ್ರೀಕಂಠನಾಯಕ, ದೇವಮ್ಮ, ರೆಹಮತ್, ನಾಗರಾಜು, ಅಭಿನಂದನ್ ಪಾಟೀಲ್, ಬಸವಣ್ಣ, ಸುರೇಶ್ ಹಾಜರಿದ್ದರು.

ಭಾಷೆ, ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸಲು ಕಸಾಪ ಸ್ಥಾಪನೆ



ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟನಾ ಸಂದರ್ಭ.

ಹೆಚ್.ಡಿ.ಕೋಟೆ: ರಾಜ್ಯದಲ್ಲಿ ಭಾಷೆಯ ವೈವಿಧ್ಯತೆ, ಕರ್ನಾಟಕ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಮತ್ತು ಅದರ ಪರಂಪರೆಯನ್ನು ಯುವ ಪೀಳಿಗೆಗೆ ಪರಿಚಯಿಸುವ ಕೆಲಸವನ್ನು ಮಾಡಲಿಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪನೆ ಮಾಡಲಾಯಿತು ಎಂದು ನಿಕಟ ಪೂರ್ವ ಜಿಲ್ಲಾಧ್ಯಕ್ಷ ಡಾ. ವೈ.ಡಿ.ರಾಜಣ್ಣ ತಿಳಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದಲ್ಲಿರುವ ಎಂ.ಎಂ.ಕೆ. ಸ್ವತಂತ್ರ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾರಣದಿಂದಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡದ ಗರ್ಭಗುಡಿ ಎಂದು ಹೇಳಲಾಗುತ್ತದೆ, ಅಲ್ಲದೇ ಕನ್ನಡದ ಶಕ್ತಿ ಕೇಂದ್ರ ಎಂದೂ ಸಹ ಕರೆಯಲಾಗುತ್ತದೆ. ಏಳು ಕೋಟಿ ಕನ್ನಡಿಗರ ಪ್ರಾತಿ ನಿಧಿಕ ಸಂಸ್ಥೆಯಾಗಿಯೂ ಸಹ ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಕೆಲಸ ಮಾಡುತ್ತಿದೆ, ಇಷ್ಟೆಲ್ಲಾ ದೂರದೃಷ್ಟಿಯನ್ನು ಇಟ್ಟು ಕೊಂಡು ಅಂದಿನ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು 111 ವರ್ಷಗಳು ಹಿಂದೆ ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ಎಂದು ತಿಳಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಕೃಪಾ ಗಣೇಶ್ ಮಾತನಾಡಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಅನನ್ಯ ಮತ್ತು ಅಸ್ಮಿತೆಯ ಸಂಸ್ಥೆಯಾಗಿದೆ. ಕನ್ನಡನಾಡಿನ ಸರ್ವಾಂಗೀಣ ಬೆಳವಣಿಗೆ, ಕನ್ನಡಿಗರ ಸರ್ವತೋಮುಖ ಏಳಿಗೆಗಾಗಿ ಸಂಸ್ಥೆ ಕೆಲಸ ಮಾಡುತ್ತಿದೆ ಎಂದರು.

ಎಂಎಂಕೆ ಸ್ವತಂತ್ರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಸ್.ಪಿ.ಪ್ರಕಾಶ್, ಹೆಚ್.ಡಿ. ಕೋಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕನ್ನಡ ಪ್ರಮೋದ, ಗಾಯಕ ಸಿದ್ದರಾಜು, ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ರವಿಕುಮಾರ್, ಖಜಾಂಚಿ ಪರಮೇಶ್‌ಗೌಡ, ಉಪನ್ಯಾಸಕ ಸಿದ್ದಾರ್ಥ ಇದ್ದರು.

ಒಳ ಮೀಸಲಾತಿ ಜಾತಿ ಸಮೀಕ್ಷೆಯಲ್ಲಿ ಉಪ ಜಾತಿಗಳ ಮಾಹಿತಿ ನೀಡಲು ಮನವಿ

ತಿ.ನರಸೀಪುರ ಮೇ 10–ಒಳ ಮೀಸಲಾತಿ ಸಂಬಂಧ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆಯ ವೇಳೆ ಸಮುದಾಯಗಳ ಜನರು ತಮ್ಮ ತಮ್ಮ ಮೂಲ ಉಪ ಜಾತಿ ಹೆಸರು ಹಾಗೂ ಇನ್ನಿತರ ಮಾಹಿತಿಯನ್ನು ಸ್ಪಷ್ಟತೆಯಿಂದ ಕಡ್ಡಾಯವಾಗಿ ನೀಡಬೇಕು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮನವಿ ಮಾಡಿದ್ದಾರೆ.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನ್ಯಾಯಮೂರ್ತಿ ಎಚ್. ಎನ್.ನಾಗಮೋಹನ್ ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ಮೇ.5 ರಿಂದ ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯಗಳ ಜಾತಿ ಜನಗಣತಿಯ ಸಮೀಕ್ಷೆ ಪ್ರಾರಂಭವಾಗಿದೆ. ಈ ಸಮೀಕ್ಷೆಯು 3 ಹಂತಗಳಲ್ಲಿ ನಡೆಯಲ್ಲಿದ್ದು ಮೊದಲು ಮೇ 5 ರಿಂದ 17ರ ವರೆಗೆ ಸಮೀಕ್ಷೆದಾರರಿಂದ ಮನೆ–ಮನೆ ಭೇಟಿ ಸಮೀಕ್ಷೆ ನಡೆಯುತ್ತದೆ. ಎರಡನೆಯದಾಗಿ ಮೇ.19 ರಿಂದ 21ರ ವರೆಗೆ ತಮ್ಮ ತಮ್ಮ ಏರಿಯಾದ ಬೂತ್ ಮಟ್ಟದ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ನಡೆಯುತ್ತದೆ ಹಾಗೂ ಮೂರನೆಯದಾಗಿ ಮೇ. 19 ರಿಂದ 23ರ ವರೆಗೆ ತಮ್ಮ ತಮ್ಮ ಮೊಬೈಲ್‌ನಿಂದ ಆನ್ ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿಕೊಂಡು ಈ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದಾದ ಅವಕಾಶವಿರುತ್ತದೆ ಎಂದಿದ್ದಾರೆ.

ಹಾಗಾಗಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಹೊಲೆಯ, ಮಾದಿಗ, ಕೊರಮ, ಕೊರಚ, ಭೋವಿ, ಲಂಬಾಣಿ, ಅರುಂದುತಿಯಾರ್ ಇನ್ನೂ ಮುಂತಾದ ಪರಿಶಿಷ್ಟ ಜಾತಿ–ಸಮುದಾಯಗಳ ಜನರು ತಮ್ಮ ತಮ್ಮ ಮೂಲ ಉಪಜಾತಿಗಳ ಹೆಸರನ್ನು ಕಡ್ಡಾಯವಾಗಿ ಯಾವುದೇ ಹಿಂಜರಿಕೆ ಪಡದೆ ಸಮೀಕ್ಷೆದಾರರಿಗೆ ನೀಡಬೇಕು ಎಂದರು.

ಮೂಗೂರಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ



ಮೂಗೂರಿನಲ್ಲಿ ನಡೆದ ಗಿರಿಜಾ ಕಲ್ಯಾಣ ಮಹೋತ್ಸವದ ನಿಮಿತ್ತ ತೀರ್ಥ ಸ್ನಾನದಲ್ಲಿ ಪಾಲ್ಗೊಂಡ ಭಕ್ತ ಸಮೂಹ

ಮೂಗೂರು: ಗ್ರಾಮದ ಶ್ರೀ ದೇಶೇಶ್ವರ ಸ್ವಾಮಿ ಹಾಗೂ ಶ್ರೀ ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ನಡೆದ ಶಯನೋತ್ಸವವನ್ನು ನೂರಾರು ಮಂದಿ ಕಣ್ತುಂಬಿಕೊಂಡರು.

ಜನತೆಯ ಒಳಿತಿಗಾಗಿ ಪ್ರಾರ್ಥಿಸಿ ಪ್ರತಿ ವರ್ಷ ಜರುಗಲಿರುವ ಗಿರಿಜಾ ಕಲ್ಯಾಣ ಮಹೋತ್ಸವ ಕಾರ್ಯಕ್ರಮವು 5 ದಿನಗಳಿಂದ ನಿರ್ವಿಘ್ನವಾಗಿ ನಡೆಯುತ್ತಿದ್ದು ಶುಕ್ರವಾರ ಸಂಜೆ ಶ್ರೀ ಪಾರ್ವತಿ ಅಮ್ಮನವರ ದೇಗುಲದಲ್ಲಿ ಶ್ರೀ ದೇಶೇಶ್ವರ ಸ್ವಾಮಿ ಹಾಗೂ ಶ್ರೀ ಪಾರ್ವತಿ ಅಮ್ಮನವರ ಉತ್ಸವ ಮೂರ್ತಿಗೆ ವಿವಿಧ ಬಗೆಯ ಹೂ ತಳಿರು ತೋರಣಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಶ್ರೀ ಪಾರ್ವತಿ ಅಮ್ಮನವರ ದರ್ಶನ ಪಡೆಯಲು ಭಕ್ತರಿಗೆ ಅನುವು ಮಾಡಿಕೊಡಲಾಯಿತು.

ಇದೇ ವೇಳೆ ಸಂತಾನ ಭಾಗ್ಯ ಲಭಿಸಲೆಂದು ನವದಂಪತಿಗಳು ಅಮ್ಮನವರಿಗೆ ಅಕ್ಷತೆ ಅರ್ಪಿಸಿ ಪ್ರಾರ್ಥಿಸಿದರು. ಗಿರಿಜಾ ಕಲ್ಯಾಣ ಮಹೋತ್ಸವದ ನಿಮಿತ್ತ ಯಾಗಶಾಲೆಯಲ್ಲಿ 26 ಕಳಸಗಳನ್ನು ಪ್ರತಿಷ್ಠಾಪನೆ ಮಾಡಿ ಪೂರ್ಣಾಭಿಷೇಕ ನಂತರ ಶ್ರೀ ಪಾರ್ವತಿ ಅಮ್ಮನವರಿಗೆ ಶನಿವಾರ ಮಧ್ಯಾಹ್ನ ಆಗಮಿಕರಾದ ಆನಂದ್ ದೀಕ್ಷಿತ್, ಅಜೇಯ್ ಶಾಸ್ತ್ರೀ ಅವರು ವಸಂತ ಪೂಜೆ ನೆರವೇರಿಸಿದರು. ನೆರೆದಿದ್ದ ನೂರಾರು ಮಂದಿ ಭಕ್ತರು ತೀರ್ಥ ಸ್ನಾನದಲ್ಲಿ ಪಾಲ್ಗೊಂಡರು. ರಾತ್ರಿ ದೇವಾಲಯದಲ್ಲಿ ಶ್ರೀ ಪಾರ್ವತಿ ಅಮ್ಮ ನವರ ಹೂವಿನ ಅಲಂಕಾರದೊಂದಿಗೆ ಮಹಾಮಂಗಳಾರತಿ ನಡೆಯಿತು. ನಂತರ ಸೇವಾರ್ಥದಾರರಿಂದ ಪ್ರಸಾದ ವಿತರಣೆ ಮಾಡಿದರು.

ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಸಾಧನೆ



ಹೆಚ್.ಡಿ ಕೋಟೆ: ತಾಲೂಕಿನ ಕೆ.ಬೆಳತೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಪುಷ್ಪ 581, ಚೈತ್ರ ಎಂ. ಆರ್. 564 ಕೆ ಸಿಸ್ಲಾಹಿಂದ್ಯಾ 541, ಸಾಗರ್, 541, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ 13 ವಿದ್ಯಾರ್ಥಿಗಳನ್ನು ಮುಖ್ಯ ಶಿಕ್ಷಕರು ಸಹ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದರು.

ಸರ್ಕಾರಿ ಕಾಲೇಜಿನಲ್ಲಿ ಮಹಿಳೆ, ಮಕ್ಕಳಿಗೆ ಸುರಕ್ಷತೆಯ ಬಗ್ಗೆ ಅರಿವು ಕಾರ್ಯಕ್ರಮ



ತಿ.ನರಸೀಪುರ ಮೇ 10– ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಸುರಕ್ಷಿತ ಹಾಗೂ ಗೌರವಯುತ ಪರಿಸರವನ್ನು ಕಲ್ಪಿಸುವ ಉದ್ದೇಶದಿಂದ ಸಂಸ್ಥೆಯ ಮಹಿಳಾ ಲೈಂಗಿಕ ಕಿರುಕುಳ ನಿವಾರಣಾ ಸಮಿತಿ ಹಾಗೂ ಐ.ಕ್ಯೂ.ಎಸ್ಸಿ ವತಿಯಿಂದ ನಿಮ್ಮ ಹಕ್ಕುಗಳನ್ನು ತಿಳಿದುಕೊಳ್ಳಿ ಮತ್ತು ಕಾರ್ಯಪದ್ಧತಿಗಳ ಅರಿವು ಕಾರ್ಯಕ್ರಮ ನಡೆಸಲಾಯಿತು.

ಕಾಲೇಜಿನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವು ಮಹಿಳೆಯರ ಮೇಲೆ ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳ ತಡೆಗಟ್ಟುವ ಕಾನೂನು ಮತ್ತು –ಮಕ್ಕಳ ವಿರುದ್ಧ ನಡೆಯುವ ಲೈಂಗಿಕ ಅಪರಾಧಗಳ ವಿರುದ್ಧದ ಕಾನೂನು ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಯಿತು.

ಕಾನೂನು ತಜ್ಞರು, ಮಾನವ ಹಕ್ಕುಗಳ ಕಾರ್ಯಕರ್ತರು ಮತ್ತು ಮಕ್ಕಳ ಸುರಕ್ಷತೆ ವಿಷಯದಲ್ಲಿ ಪರಿಣಿತರರೂ ಸಾವಂತ್ ಬಿ.ಎಸ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಈ ಕಾನೂನುಗಳ ಅಡಿಯಲ್ಲಿ ಇರುವ ಹಕ್ಕುಗಳು, ಅಧಿಕಾರಗಳು ಮತ್ತು ವರದಿ ಮಾಡುವ ವಿಧಾನಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.

ವಿದ್ಯಾರ್ಥಿಗಳು ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಲೈಂಗಿಕ ಹಲ್ಲೆ ವಿರುದ್ಧದ ಕಾನೂನು ಅರಿವು ಮೂಡಿಸಿ, ಶೋಷಿತರು ನ್ಯಾಯವನ್ನು ಪಡೆಯಲು ಪ್ರೇರಣೆ ನೀಡಿ ಈ ಕಾರ್ಯಕ್ರಮದ ಗುರಿಯನ್ನು ಯಶಸ್ಸುಗೊಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಉದಯ್ ಕುಮಾರ್, ಕಾಲೇಜಿನ ಐಕ್ಯೂಎಸಿ ಸಂಚಾಲಕ ಡಾ. ಅಮೀತ್, ಮಹಿಳಾ ಲೈಂಗಿಕ ಕಿರುಕುಳ ನಿವಾರಣಾ ಸಮಿತಿಯ ಸಂಚಾಲಕ ಡಾ.ರೇಷ್ಮಾ ಚಂಗಪ್ಪ, ಸದಸ್ಯೆ ಡಾ.ಕವಿತಾ, ಎನ್‌ಜಿಒ ಪ್ರತಿನಿಧಿ ಮಹೇಶ್, ವಕೀಲೆ ಲಾವಣ್ಯ, ಸಿಡಿಸಿ ಸದಸ್ಯ ಸುಧಾ ಗುರುಮಲ್ಲು, ಸ್ಥಳೀಯ ಮಹಿಳಾ ಸದಸ್ಯ ಪುಷ್ಪ, ಅಧ್ಯಾಪಕ ಡಾ.ಕವಿತಾ, ಡಾ.ಮುತ್ತಮ್ಮ, ಸತ್ಯಶ್ರೀ, ನೌಕರರಾದ ಮೀನಾ, ಪ್ರಮೀಳಾ, ಭವ್ಯಶ್ರೀ, ಶಾಂತಲಾ, ಹರ್ಷಿತ, ಅಂಬಿಕಾ ಇನ್ನಿತರರಿದ್ದರು.

ಇಂದು ಡಣಾಯಕನಪುರದಲ್ಲಿ ಶ್ರೀ ಬಸವೇಶ್ವರ ಜಯಂತಿ, ಶರಣ ಸಾಹಿತ್ಯೋತ್ಸವ



ತಿ.ನರಸೀಪುರ, ಮೇ 10– ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಶ್ರೀ ಶಿವಕುಮಾರ ಸ್ವಾಮಿಗಳವರ ಸೇವಾ ಟ್ರಸ್ಟ್, ಶ್ರೀ ಜಗಜ್ಯೋತಿ ಬಸವೇಶ್ವರ ಯುವಕರ ಸಂಘ, ಗ್ರಾಮಸ್ಥರು ಹಾಗೂ ಮುಖಂಡರ ಸಹಯೋಗದಲ್ಲಿ ಮೇ 11 ರಂದು ಸಂಜೆ 4ಕ್ಕೆ ತಾಲೂಕಿನ ಡಣಾಯಕನಪುರದಲ್ಲಿ ಶ್ರೀಬಸವೇಶ್ವರ ಜಯಂತಿ ಹಾಗೂ ಶರಣ ಸಾಹಿತ್ಯೋತ್ಸವ ಏರ್ಪಡಿಸಲಾಗಿದೆ. ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿ ಸುವರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಅಧ್ಯಕ್ಷತೆ ವಹಿಸುವರು. ಎಂ.ಚಂದ್ರಶೇಖರ್ ಆಶಯ ಭಾಷಣ ಮಾಡುವರು.

ಕೊಳ್ಳೇಗಾಲ ತಾ. ಮುಡಿಗುಂಡ ಮಠದ ಶ್ರೀ ಶ್ರೀಕಂಠ ಸ್ವಾಮೀಜಿ– ಸಾಂಸ್ಕೃತಿಕ ನಾಯಕ ಬಸವಣ್ಣ, ಮುಡುಕನಪುರ ಶ್ರೀ ಹಲವಾರು ಮಠದ ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ –ಬಸವಣ್ಣನವರ ಸಾಮಾಜಿಕ ಚಿಂತನೆಗಳು ಉಪನ್ಯಾಸ ನೀಡುವರು. ಕುರಿತು ವಿಶ್ರಾಂತ ಪ್ರಾಂಶುಪಾಲ ಪ್ರೊ.ಚಂದ್ರಶೇಖರಯ್ಯ, ಸಮಾಜ ಸೇವಕ ಕೀಳನಪುರ ಕೆ.ಎಸ್. ಮಾದಪ್ಪ ಅವರನ್ನು ಅಭಿನಂದಿಸಲಾಗುವುದು. ತಾ.ಶಸಾಪ ಅಧ್ಯಕ್ಷ ಸೋಮಶೇಖರಪ್ಪ ಕೆಬ್ಬೆಹುಂಡಿ, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಸಿ.ಎಂ. ಪ್ರಕಾಶ್, ಶ್ರೀ ಶಿವಕುಮಾರ ಸ್ವಾಮಿಗಳವರ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ, ಎಂ. ತೊಟ್ಟವಾಡಿ, ತಾಲೂಕಿನ ಎಲ್ಲಾ ಮಠಾಧೀಶರು ಉಪಸ್ಥಿತರಿರುವರು. ಸಂಜೆ 7.30ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾನಪದ ಕಲಾತಂಡಗಳೊಂದಿಗೆ ಬೆಳ್ಳಿ ರಥದಲ್ಲಿ ಶ್ರೀ ಬಸವೇಶ್ವರ ಪುತ್ಥಳಿಯ ಮೆರವಣಿಗೆ ನಡೆಯಲಿದೆ.

ಸಾಲ ಸೌಲಭ್ಯ ಪಡೆದು ಆರ್ಥಿಕವಾಗಿ ಸಬಲರಾಗಿ



ಒಕ್ಕಲಿಗರ ಸಂಘದ ನಿರ್ದೇಶಕ ಮಂಜುಗೌಡರಿಂದ ನಂಜಪ್ಪನವರ ಪುತ್ಥಳಿಗೆ ಮಾಲಾರ್ಪಣೆ.

ಕೆ.ಆರ್.ನಗರ, ಮೇ 10– ಮಾಜಿ ಸಚಿವ ದಿ.ಎಸ್.ನಂಜಪ್ಪನವರು ಆರಂಭಿಸಿದ ನವನಗರ ಅರ್ಬನ್ ಬ್ಯಾಂಕ್ ಈ ಭಾಗದ ಜನತೆಯ ಸಂಜೀವಿನಿಯಾಗಿದ್ದು, ಜನತೆ ಬ್ಯಾಂಕ್‌ನೊಂದಿಗೆ ವ್ಯವಹಾರ ನಡೆಸಿ ಸಾಲ ಸೌಲಭ್ಯ ಪಡೆದು ಆರ್ಥಿಕವಾಗಿ ಸಬಲರಾಗಬೇಕು ಎಂದು ಒಕ್ಕಲಿಗರ ಸಂಘದ ನಿರ್ದೇಶಕ ಮಂಜುಗೌಡ ಹೇಳಿದರು.

ಪಟ್ಟಣದ ನವನಗರ ಅರ್ಬನ್ ಬ್ಯಾಂಕ್ ಕೇಂದ್ರ ಕಚೇರಿಯಲ್ಲಿರುವ ಎಸ್.ನಂಜಪ್ಪನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಬ್ಯಾಂಕ್ ಆರಂಭದಿಂದ ಖಾಸಗಿ ಹಣಕಾಸು ಸಂಸ್ಥೆ ಮತ್ತು ಲೇವಾದೇವಿದಾರರಿಂದ ಬಡ ಮತ್ತು ಸಣ್ಣ ವ್ಯಾಪಾರಸ್ಥರಿಗೆ ಕಿರುಕುಳ ತಪ್ಪಿದಂತಾಗಿದೆ ಎಂದರು.

6 ಲಕ್ಷ ಷೇರು ಬಂಡವಾಳದೊಂದಿಗೆ 1998ರಲ್ಲಿ ಆರಂಭಗೊಂಡ ಬ್ಯಾಂಕ್ ಇಂದು 750 ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಮೂಲಕ ಬೃಹದಾಕರವಾಗಿ ಬೆಳೆದಿದೆ. ಎಸ್.ನಂಜಪ್ಪನವರ ಕಾಲವಾದ ನಂತರ ಅವರ ಪುತ್ರ ಕೆ.ಎನ್.ಬಸಂತ್ ಅವರು ಕಳೆದ 10 ವರ್ಷಗಳಿಂದ ಬ್ಯಾಂಕ್ ಅಧ್ಯಕ್ಷರಾಗಿ ಗ್ರಾಹಕರ ವಿಶ್ವಾಸಗಳಿಸಿ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೇವಲ 5 ಸಿಬ್ಬಂದಿಯೊಂದಿಗೆ ಪ್ರಾರಂಭವಾದ ಬ್ಯಾಂಕ್ ಹಲವು ಶಾಖೆಗಳನ್ನು ಆರಂಭಿಸಿ 41 ಸಿಬ್ಬಂದಿ ಮತ್ತು 20 ಪಿಗ್ಮಿ ಸಂಗ್ರಾಹಕರು ಹಾಗೂ 10 ಉಪ ಸಿಬ್ಬಂದಿಗಳ ಜೊತೆಗೆ ಹಲವರು ಸೆಕ್ಯೂರಿಟಿ ಗಾರ್ಡ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 4 ಎಟಿಎಂಗಳನ್ನು ಹೊಂದಿರುವ ಬ್ಯಾಂಕ್ 325 ಕೋಟಿ ಸಾಲ ವಿತರಿಸಿದ್ದು, 433 ಕೋಟಿ ಠೇವಣಿ ಹೊಂದಿದೆ ಒಟ್ಟು 758 ಕೋಟಿ ವ್ಯವಹಾರ ನಡೆಸುತ್ತಿರುವ ಬ್ಯಾಂಕ್ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಈ ವೇಳೆ ಮಂಜುಗೌಡ ಅವರನ್ನು ಬ್ಯಾಂಕ್ ವತಿಯಿಂದ ಅಭಿನಂದಿಸಲಾಯಿತು.

ಸರಗೂರು ಸುತ್ತ–ಮುತ್ತ ಭಾರೀ ಗಾಳಿ ಮಳೆಗೆ ಬಾಳೆ ಫಸಲು ನಾಶ



ಸರಗೂರು: ತಾಲೂಕಿನ ಕಿತ್ತೂರು ಗ್ರಾಮದಲ್ಲಿ ಗಾಳಿ ಮಳೆಗೆ ರೈತ ಸೀತಾರಾಂ ಅವರಿಗೆ ಸೇರಿದ ಹೊಲದಲ್ಲಿ ಬಾಳೆ ಗಿಡಗಳು ನಾಶವಾಗಿ, ಅಪಾರ ಹಾನಿ ಸಂಭವಿಸಿದೆ. ಸೀತಾರಾಂ ಸರ್ವೇ ನಂ 194\3 ರ 2.23 ಗುಂಟೆ ಹೊಲದಲ್ಲಿ ಬೆಳೆ ದಿದ್ದ ನೇಂದ್ರ ಬಾಳೆ ಮಳೆ ಗಾಳಿಗೆ ನೆಲಕ್ಕುರುಳಿವೆ. ಬ್ಯಾಂಕ್ ಹಾಗೂ ಕೈಸಾಲ ಮಾಡಿ ಬಾಳೆ ಬೆಳೆದಿದ್ದು, ಗೊನೆ ಬಿಡುವಾಗ ಸುರಿದ ಗಾಳಿ ಮಳೆಗೆ ಬಾಳೆ ನೆಲ ಸಮವಾಗಿರುವುದನ್ನು ಕಂಡು ರೈತ ಸೀತಾರಾಂ ಆತಂಕಗೊಂಡಿದ್ದಾರೆ.

ವಿದ್ಯಾರ್ಥಿಗಳ ಆಲೋಚನಾ ಶಕ್ತಿ ಹೆಚ್ಚಿಸಲು ಚರ್ಚಾ ಸ್ಪರ್ಧೆ



ಚರ್ಚಾಸ್ಪರ್ಧೆಯ ವಿಜೇತ ಮಕ್ಕಳಿಗೆ ಶಾಸಕ ದರ್ಶನ್ ದ್ರುವನಾರಾಯಣ್ ಪ್ರಮಾಣ ಪತ್ರ ವಿತರಿಸಿದರು.

ನಂಜನಗೂಡು: ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಆಲೋಚನೆ ಶಕ್ತಿಯನ್ನು ಬೆಳೆಸುವ ಸದುದ್ದೇಶದಿಂದ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಯುವಕ ಸಂಘಗಳ ಒಕ್ಕೂಟ ಸಂಯುಕ್ತಾಶ್ರಯದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯ ಅಂಗವಾಗಿ ನಗರದ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದ್ದ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ "ಆರ್ಥಿಕ ಸಬಲೀಕರಣದಿಂದ ಸಾಮಾಜಿಕ ಸಮಾನತೆ ಸಾಧ್ಯವೇ? ಎಂಬ ವಿಷಯ ಕುರಿತು ಜಿಲ್ಲಾ ಮಟ್ಟದ ಚರ್ಚಾಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಮಾತನಾಡಿದರು.

ಸಮಾಜದಲ್ಲಿ ಸಮಾನತೆ ತರಲು ಅಂಬೇಡ್ಕರ್ ಅವರ ಚಿಂತನೆಗಳು ಇಂದಿಗೂ ಪ್ರಸ್ತುತ, ಅವರ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಾದರೆ ಶಿಕ್ಷಣವೇ ಪ್ರಮುಖ ಅಸ್ತ್ರ. ಅಲ್ಲದೆ ಇಂತಹ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುವ ವೇದಿಕೆಯಾಗಿದ್ದು, ಸಾಮಾಜಿಕ ಸುಧಾರಣೆ ತರಲು ವಿದ್ಯಾರ್ಥಿಗಳಲ್ಲಿ ಆಲೋಚಿಸುವ, ಗುಣಗಳನ್ನು ಬೆಳೆಸಬೇಕು, ಇದರಿಂದ ಸಮಾಜದಲ್ಲಿ ಘಟಿಸುವ ಸನ್ನಿವೇಶಗಳಿಗೆ ಪ್ರತಿಕ್ರಿಯೆ ನೀಡುವ, ಸರಿ ತಪ್ಪುಗಳನ್ನು ಪ್ರಶ್ನಿಸುವ ಚಿಂತನೆಗಳನ್ನು ಬೆಳೆಸಲು ಸಾಧ್ಯವಾಗುತ್ತದೆ. ಜೊತೆಗೆ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಹಲವಾರು ಪುಸ್ತಕಗಳನ್ನು ಮತ್ತು ಚಿಂತಕರ ಬರವಣಿಗೆಗಳನ್ನು ಓದುವ ಮೂಲಕ ವಿಷಯವನ್ನು ಗ್ರಹಿಸಿ ಮಾತನಾಡಬೇಕಾಗುತ್ತದೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲೂ ಕೂಡ ವ್ಯಾಸಂಗದಲ್ಲಿ ತೊಡಗಿಕೊಳ್ಳುವ ಆಸಕ್ತಿಯನ್ನು ಮೂಡಿಸಬಹುದಾಗಿದೆ. ಬಾಬಾ ಸಾಹೇಬರು ಹೇಳಿದಂತೆ 'ಜ್ಞಾನವೇ ಶಕ್ತಿಯ ಮೂಲ' ಆ ಜ್ಞಾನವನ್ನು ಹಕ್ಕು ಬದ್ಧವಾಗಿ ಅನ್ವಯಿಸಿ, ಬೆಳವಣಿಗೆಯ ಮಾರ್ಗದಲ್ಲಿ ಸಾಗವ ಮೂಲಕ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಬೇಕಾಗಿದೆ ಎಂದರು.

ಸಮಾರಂಭದಲ್ಲಿ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ದಸಂಸ ಸಂಚಾಲಕರಾದ ಮಲ್ಲಹಳ್ಳಿ ನಾರಾಯಣ, ಶಂಕರಪುರ ಸುರೇಶ್, ಕಾರ್ಯ ಬಸವಣ್ಣ, ಚುಂಚನಹಳ್ಳಿ ಮಲ್ಲೇಶ್, ಅಭಿನಾಗಭೂಷಣ್, ಪ್ರೊ.ಡಿ.ಆನಂದ್, ಮಲ್ಲಿಕಾರ್ಜುನಸ್ವಾಮಿ, ನವಿತಾ, ತಿಮ್ಮಯ್ಯ, ಸೇರಿದಂತೆ ವಿದ್ಯಾರ್ಥಿಗಳು ಮತ್ತು ಹಲವಾರು ಮುಖಂಡರು ಉಪಸ್ಥಿತರಿದ್ದರು.

ಆಂಜನೇಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ನಾಗರೀಕರು ಮತ್ತು ಬಿಜೆಪಿ ಮುಖಂಡರು ಯುದ್ಧದಲ್ಲಿ ಭಾರತಕ್ಕೆ ಜಯ ಸಿಗಲಿ ಹಾಗೂ ನಮ್ಮ ಸೈನಿಕರಿಗೆ ಅಪಾಯವಾಗದಂತೆ ಆರೋಗ್ಯ ಮತ್ತು ಧೈರ್ಯದಿಂದ ಯುದ್ಧದಲ್ಲಿ ಹೋರಾಡಲಿ ಎಂದು ಬೆಟ್ಟದಪುರದ ಏಣಿ ಆಂಜನೇಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿದರು.

ರವಿ ನಿಧನ



ಹುಣಸೂರು, ಮೇ 10– ತಾಲೂಕಿನ ಮೊದೂರು ಸಮೀಪದ ಚಿಟ್ಟಕ್ಯಾತನಹಳ್ಳಿ ಗ್ರಾಮದ ಬಳಿ ಜಮೀನಿನಲ್ಲಿ ವಾಸವಾಗಿರುವ ತೋಟಗಾರಿಕೆ ಇಲಾಖೆಯ ನಿವೃತ್ತ ಲೆಕ್ಕಾಧಿಕಾರಿ ಶಿವಣ್ಣೆಗೌಡರ ಮಗ ಹಾಗೂ ನಂಜನಗೂಡಿನ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದ ರವಿ(32) ಇಂದು ಬೆಳಿಗ್ಗೆ ಹೃದಯಘಾತದಿಂದ ನಿದನರಾದರು.

ಮೃತರು ಪತ್ನಿ, ಒರ್ವ ಪುತ್ರಿ, ತಂದೆ, ತಾಯಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಇಂದು ಮದ್ಯಾಹ್ನ ಮೃತರ ಜಮಿನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಾ.ಅಂಬೇಡ್ಕರ್ ಹೋರಾಟದ ಹಿಂದಿನ ಆಶಯ ಅರ್ಥ ಮಾಡಿಕೊಳ್ಳಬೇಕು

● ಸಾಹಿತಿ ಪ್ರೊ. ಕೆ.ಎಸ್.ಭಗವಾನ್ ಸಲಹೆ ● ದಲಿತಪರ ಹೋರಾಟಗಾರರಾದ ಚಿಕ್ಕಂದಾನಿ, ಹರಿಹರ ಆನಂದಸ್ವಾಮಿ ಅವರಿಗೆ ಅಭಿನಂದನಾ ಸಮಾರಂಭ

ಮೈಸೂರು, ಮೇ 10(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯವನ್ನು ಎಲ್ಲರೂ ಅರ್ಥ ಮಾಡಿಕೊಂಡು, ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಾಹಿತಿ ಪ್ರೊ. ಕೆ.ಎಸ್.ಭಗವಾನ್ ಸಲಹೆ ನೀಡಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ದಿಗಂತ ಭವನದಲ್ಲಿ ಮೈಸೂರು ವಿಭಾಗೀಯ ರಾಜ್ಯ ಮತ್ತು ಕೇಂದ್ರ ಸರ್ಕಾರಿ, ಅರೆ ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳ ಪ.ಜಾತಿ, ವರ್ಗದ ಅಧಿಕಾರಿಗಳ, ನೌಕರರ ಪರಿಷತ್ ಕಾರ್ಯದರ್ಶಿ ಚಿಕ್ಕಂದಾನಿ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ಭಾಜನರಾದ ಹಿರಿಯ ದಲಿತ ಪರ ಹೋರಾಟಗಾರ ಹರಿಹರ ಆನಂದ ಸ್ವಾಮಿ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಕೃತಿಗಳನ್ನು ಹೆಚ್ಚು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಹೆಚ್ಚಿನ ಜ್ಞಾನ ಸಂಪಾದಿಸಬಹುದಾಗಿದೆ. ಅಂಬೇಡ್ಕರ್ ಅವರ ಹೋರಾಟ, ಅವರು ಅಸಮಾನತೆ ಹೋಗಲಾಡಿಸಲು ಪಟ್ಟ ಶ್ರಮ ಕುರಿತು ತಿಳಿದುಕೊಳ್ಳಬಹುದು. ಅಂಬೇಡ್ಕರ್ ಅವರ ಹೋರಾಟದ ಹಿಂದಿನ ಆಶಯವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಧ್ವನಿ ಇಲ್ಲದವರಿಗೆ ಧ್ವನಿಯಾಗಲು, ಅಸ್ಪೃಶ್ಯತೆ ಹೋಗಲಾಡಿಸಿ, ಎಲ್ಲರಲ್ಲೂ ಸಮಾನತೆ ಸಾಧಿಸಲು ಹೋರಾಟ ನಡೆಸಿದ ಧೀಮಂತ ನಾಯಕರೆನಿಸಿರುವ ಅಂಬೇಡ್ಕರ್ ಅವರ ಆಶಯ ಸರ್ವಕಾಲಿಕ ಎಂದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ದಿಗಂತ ಭವನದಲ್ಲಿ ದಲಿತ ಪರ ಹಿರಿಯ ಹೋರಾಟಗಾರರಾದ ಚಿಕ್ಕಂದಾನಿ, ಹರಿಹರ ಆನಂದಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ 'ದಲಿತ ಸಂಘಟನೆಗಳ ಮುಂದಿರುವ ಸವಾಲುಗಳು' ವಿಷಯ ಕುರಿತು ಮಾತನಾಡಿ, ಈ ಹಿಂದೆಯೇ ದಲಿತ ಸಂಘರ್ಷ ಸಮಿತಿ ಹಾಗೂ ಬಹುಜನ ಚಳವಳಿ ಬಹುದೊಡ್ಡ ಹೋರಾಟವನ್ನು ರೂಪಿಸಿವೆ. ಆದರೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಹೋರಾಟಗಳಿಗೆ ವಿಶ್ವಾಸಾರ್ಹತೆಯ ಕೊರತೆ ಕಾಡುತ್ತಿದೆ. ಜಾತಿ ದೌರ್ಜನ್ಯ ಹೆಚ್ಚಿರುವ ಪ್ರಸ್ತುತದಲ್ಲಿ ಹೋರಾಟದ ಸ್ವರೂಪ ಬದಲಾಗಬೇಕಾದ ಅನಿವಾರ್ಯತೆ ಇದೆ ಎಂದರು.

ಸನ್ಮಾನ ಸ್ವೀಕರಿಸಿ, ದಲಿತ ಹೋರಾಟಗಾರ ಹರಿಹರ ಆನಂದಸ್ವಾಮಿ ಮಾತನಾಡಿ, ಎಲ್ಲಾ ಚಳವಳಿಗಳ ತಾಯಿಯಾದ ದಲಿತ ಹೋರಾಟದಿಂದ ಪರ್ಯಾಯ ವ್ಯವಸ್ಥೆ ಆಗಬೇಕಾಗಿತ್ತು. ಆದರೆ ಕೆಲ ನಾಯಕರಿಂದಾಗಿ ಚಳವಳಿ ದಿಕ್ಕು ತಪ್ಪಿದ್ದರಿಂದ ಪರ್ಯಾಯ ವ್ಯವಸ್ಥೆಯ ಕೆಲಸ ಆಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮತ್ತೋರ್ವ ಸನ್ಮಾನಿತ ಚಿಕ್ಕಂದಾನಿ ಮಾತನಾಡಿ, ಅಂಬೇಡ್ಕರ್ ಅವರ ಆಶಯಗಳಂತೆ ದಲಿತ ವರ್ಗದ ನೌಕರರಿಗೆ ಸಂವಿಧಾನ ಬದ್ಧವಾದ ಹಕ್ಕುಗಳನ್ನು ಕೊಡಿಸುವುದಕ್ಕಾಗಿ ಪರಿಶ್ರಮ ಮತ್ತು ಶಿಸ್ತಿನಿಂದ ಹೋರಾಟ ಮಾಡಿದ್ದರಿಂದ ಸಂಘಟನೆ ಈ ಸಾಧನೆ ಮಾಡಲು ಕಾರಣವಾಯಿತು ಎಂದರು.

ದಲಿತ ವೆಲ್ಫೇರ್ ಟ್ರಸ್ಟ್ ಸಂಸ್ಥಾಪಕ ಕೋಶಾಧ್ಯಕ್ಷರಾಗಿದ್ದ ಸಾಮಾಜಿಕ ಹೋರಾಟಗಾರ್ತಿ ಪ್ರೇಮಾ ಬೋಧಿ ಮಾತನಾಡಿ, ಈ ಹಿಂದೆ ದಲಿತ ವೆಲ್ಫೇರ್ ಟ್ರಸ್ಟ್ ಹುಟ್ಟು ಹಾಕಿ, ರಾಜ್ಯದಾದ್ಯಂತ ಶೈಕ್ಷಣಿಕ, ಸಾಮಾಜಿಕವಾಗಿ ಕೆಲಸ ಮಾಡಿ ಶೋಷಿತರಿಗೆ ನೆರವಾಗುವ ಕಾರ್ಯಕ್ರಮ ನಡೆಸಲಾಗಿತ್ತು. ಆರೋಗ್ಯ, ನೈರ್ಮಲ್ಯ ಕ್ಷೇತ್ರದಲ್ಲಿ ಹೆಚ್ಚಿನ ಕಾರ್ಯಕ್ರಮ ನಡೆಸಿ, ಆರೋಗ್ಯ ಶಿಬಿರ ಆಯೋಜಿಸುವ ಮೂಲಕ ಸೇವೆ ಸಲ್ಲಿಸಲಾಗಿತ್ತು. ಹೆಣ್ಣು ಮಕ್ಕಳು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಈ ಹಿಂದೆಯೇ ಅಂಬೇಡ್ಕರ್ ಅವರು ಹೇಳಿದ್ದಾರೆ. ಪುರುಷರು, ಮಹಿಳೆಯರು ಪರಸ್ಪರ ಸಹಭಾಗಿತ್ವ ಆದಾಗ ಮಾತ್ರ ದೊಡ್ಡ ಮಟ್ಟದ ಸಾಧನೆ ಸಾಧ್ಯ. ಎಷ್ಟೇ ಕಷ್ಟದ ಸಂದರ್ಭದಲ್ಲೂ ಅಂಬೇಡ್ಕರ್ ಅವರಿಗೆ ಪತ್ನಿ ನೀಡಿದ ಸಹಕಾರದಿಂದ ಇಂದು ದೊಡ್ಡಮಟ್ಟದಲ್ಲಿ ಅವರು ಬೆಳೆಯಲು ಸಾಧ್ಯವಾಯಿತು ಎಂದರು.

ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಹೆಚ್. ರಾಜು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಯಕುಮಾರ್, ಸಾಮಾಜಿಕ ಹೋರಾಟಗಾರ್ತಿ ಪ್ರೇಮಾ ಬೋಧಿ, ಪಾಲ್ಗೊಂಡಿದ್ದರು. ಪರಿಷತ್ ಅಧ್ಯಕ್ಷ ಡಾ.ಟಿ.ಎಂ. ಮಹೇಶ್ ಪ್ರಾಸ್ತಾವಿಕ ಭಾಷಣ ಮಾಡಿದರೆ, ಪುರುಷೋತ್ತಮ್ ಬುದ್ಧವಂದನೆ ಮೂಲಕ ಪ್ರಾರ್ಥಿಸಿದರು. ಡಾ.ಎಂ.ನಾಗರಾಜು ಸ್ವಾಗತಿಸಿದರು. ಸನ್ಮಾನಿತರನ್ನು ಡಿ.ಟಿ.ಸಿದ್ದಸ್ವಾಮಿ, ನಂಜುಂಡಸ್ವಾಮಿ ಪರಿಚಯಿಸಿದರು. ಶಿವಸ್ವಾಮಿ ವಂದಿಸಿದರು. ಸುರೇಂದ್ರ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಸುಳ್ಳು ಸುದ್ದಿಗಳಿಗೆ ಮೊದಲು ಕಡಿವಾಣ ಹಾಕಿ: ಸಿಎಂ

ಬೆಂಗಳೂರು, ಮೇ 10(ಕೆಎಂಶಿ)– ರಾಜ್ಯದಲ್ಲಿ ಸುಳ್ಳು ಸುದ್ದಿಗಳಿಗೆ ಕಡ್ಡಾಯವಾಗಿ ಕಡಿವಾಣ ಹಾಕಬೇಕು. ಅನಿವಾರ್ಯವಾದರೆ ಸುಳ್ಳು ಸುದ್ದಿ ಹರಡಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ



ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿಯನ್ನು ಹರಡುವುದನ್ನು ತಪ್ಪಿಸಲು ಕಟ್ಟೆಚ್ಚರ ವಹಿಸಬೇಕು. ಫ್ಯಾಕ್ಟ್ ಚೆಕ್ ನಿರಂತರವಾಗಿ ಮಾಡಬೇಕು. ಸುಳ್ಳು ಸುದ್ದಿ ಬಗ್ಗೆ ಮೂಲದಲ್ಲೇ ಅಧಿಕೃತ ಸ್ಪಷ್ಟೀಕರಣ ನೀಡಬೇಕು. ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗಿಂತ ಯಾವುದೂ ದೊಡ್ಡದಲ್ಲ. ರಾಜ್ಯದ ಜನರ ರಕ್ಷಣೆಗೆ ಮೊದಲ ಆದ್ಯತೆ ನೀಡಿ ಅವರು ನಿರ್ದೇಶನ ನೀಡಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆಯೊಂದಿಗೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲು ಈಗಾಗಲೇ ಸೂಚನೆ ನೀಡಲಾಗಿದೆ. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗಿರಬೇಕು. ಈ ಕುರಿತು ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು. ಪ್ರಮುಖ ಸ್ಥಳಗಳಲ್ಲಿ ಮಾಕ್ ಡ್ರಿಲ್ ಮಾಡಲು ಸೂಚನೆ ನೀಡಲಾಗಿದೆ ಎಂದು ಹೇಳಿದ್ದಾರೆ.

ಗುಪ್ತಚರ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು. ಸಾರ್ವಜನಿಕ ಸೇವೆ ಒದಗಿಸುವ ತಾಣಗಳಲ್ಲಿ ಹೆಚ್ಚಿನ ಸುರಕ್ಷತೆಯನ್ನು ಖಾತ್ರಿಪಡಿಸಬೇಕು. ಅಕ್ರಮ ದಾಸ್ತಾನು ಮತ್ತು ಕಾಳಸಂತೆಯ ಮೇಲೆ ನಿರಂತರ ನಿಗಾ ವಹಿಸಿ, ಅನಗತ್ಯವಾಗಿ ಸಾಮಗ್ರಿಗಳ ಬೆಲೆ ಹೆಚ್ಚು ಮಾಡುವ ಪ್ರಯತ್ನಗಳನ್ನು ತಡೆಯಬೇಕು. ಅಗ್ನಿಶಾಮಕ ದಳದ ಕೇಂದ್ರಗಳು ದಿನದ 24ಗಂಟೆ ಸನ್ನದ್ಧ ಸ್ಥಿತಿಯಲ್ಲಿರಬೇಕು. ಎಲ್ಲಾ ಜಿಲ್ಲೆಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆದು, ಸಹಾಯವಾಣಿ ಆರಂಭಿಸಬೇಕು.

ಕರಾವಳಿಯಲ್ಲಿ ಭದ್ರತೆಯನ್ನು ಬಿಗಿಗೊಳಿಸಬೇಕು. ಎಲ್ಲಾ ಪ್ರಮುಖ ಸ್ಥಳಗಳಲ್ಲಿ ನಿರಂತರ ಗಸ್ತು ವ್ಯವಸ್ಥೆ ಮಾಡಬೇಕು. ಪರಿಸ್ಥಿತಿ ಯನ್ನು ದುರುಪಯೋಗಪಡಿಸಿಕೊಂಡು ದೇಶದ ರಾಜ್ಯದ ಸಹಬಾಳ್ವೆಗೆ ಧಕ್ಕೆ ತರುವ, ಕೋಮುಭಾವನೆ ಕೆರಳಿಸಿ, ಕೋಮು ವಿಭಜನೆ ತರಲು, ದೇಶದ ಭದ್ರತೆಗೆ ಅಪಾಯ ತರಲು ಷಡ್ಯಂತ್ರ ನಡೆಸುತ್ತಿರುವ ಎಲ್ಲರ ಪಟ್ಟಿ ಸಿದ್ಧಪಡಿಸಿ ಕಾನೂನು ಕ್ರಮಕ್ಕೆ ಒಳಪಡಿಸಲು ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದ್ದಾರೆ.

ಭಾರತವನ್ನು ದುರ್ಬಲಗೊಳಿಸುವ ನೆರೆ ರಾಷ್ಟ್ರಗಳ ಪ್ರಭಾವ ಮೆಟ್ಟಿ ನಿಲ್ಲಬೇಕು

ಕೆಪಿಸಿಸಿ ರೈತ ವಿಭಾಗದ ರಾಜ್ಯಾಧ್ಯಕ್ಷ ಸಚಿನ್ ಮೀಗಾ ಸಲಹೆ

ಮೈಸೂರು, ಮೇ 10(ಬಿಎಲ್‌ಯು)– ರಕ್ಷಣಾ, ತಂತ್ರಜ್ಞಾನ, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಬಲಿಷ್ಠವಾಗಿರುವ ಭಾರತವನ್ನು ದುರ್ಬಲಗೊಳಿಸಲು ನಮ್ಮ ನೆರೆಹೊರೆ ರಾಷ್ಟ್ರಗಳು ಮುಂದಾಗಿದ್ದು, ಇದನ್ನು ಮೆಟ್ಟಿ ನಿಲ್ಲಲು ಭಾರತೀಯರೆಲ್ಲರೂ ಒಟ್ಟಾಗಬೇಕು ಎಂದು ಕೆಪಿಸಿಸಿ ರೈತ ವಿಭಾಗದ ರಾಜ್ಯಾಧ್ಯಕ್ಷ ಸಚಿನ್ ಮೀಗಾ ಸಲಹೆ ನೀಡಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಮೈಸೂರು ಜಿಲ್ಲಾ ಕಾಂಗ್ರೆಸ್ ರೈತ ಘಟಕ ಆಯೋಜಿಸಿದ್ದ ರೈತ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮಲ್ಲಿ ಒಗ್ಗಟ್ಟಿದ್ದರೆ ಭಾರತವನ್ನು ಯಾರೂ ಮಣಿಸಲು ಸಾಧ್ಯವಿಲ್ಲ ಎಂಬುದನ್ನು ಎಲ್ಲರೂ ಮನದಟ್ಟು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಭಾರತ ಮತ್ತು ಪಾಕಿಸ್ತಾನದ ನಡುವಿನ ಸಮರ ಹಾಗೂ ವಿಶ್ವದ ಪ್ರಸ್ತುತ ಸ್ಥಿತಿಗತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಭಾರತ ರಕ್ಷಣಾ ಮತ್ತು ಕೃಷಿ ಕ್ಷೇತ್ರವನ್ನು ಮತ್ತಷ್ಟು ಬಲವರ್ಧನೆಗೊಳಿಸುವ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ನಂತರದಲ್ಲಿ ದೇಶದ ಕೃಷಿ ಮತ್ತು ರಕ್ಷಣಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವಲ್ಲಿ ಕಾಂಗ್ರೆಸ್ ಪಾತ್ರ ದೊಡ್ಡದಿದೆ. ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ನಮ್ಮ ಪಕ್ಷ ಹಾಕಿಕೊಟ್ಟ ಯೋಜನೆ ಮುಂದುವರೆಸಿಕೊಂಡು ಬಂದಿವೆ ಎಂದು ಸಚಿನ್ ಮೀಗಾ ಹೇಳಿದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಜಿಲ್ಲಾ ಕಾಂಗ್ರೆಸ್ ರೈತ ಘಟಕ ಆಯೋಜಿಸಿದ್ದ ರೈತ ಸಮ್ಮೇಳನವನ್ನು ಕೆಪಿಸಿಸಿ ರೈತ ವಿಭಾಗದ ರಾಜ್ಯಾಧ್ಯಕ್ಷ ಸಚಿನ್ ಮೀಗಾ ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ವಿಶ್ವದಲ್ಲಿ ಯಾರು ಯಾವುದೇ ವೃತ್ತಿ ತೊರೆಯಬಹುದು. ಆದರೆ ಕೃಷಿ ಕಾಯಕವನ್ನು ಬಿಡಲು ಸಾಧ್ಯವಿಲ್ಲ. ರೈತ ಹಾಗೂ ಕೃಷಿಗೆ ಅಷ್ಟೊಂದು ಅವಿನಾಭಾವ ಸಂಬಂಧವಿದೆ ಎಂದು ಹೇಳಿದರು.

ಕೃಷಿ ಕ್ಷೇತ್ರದಲ್ಲಿ ಕಾಂಗ್ರೆಸ್ ಬಹಳಷ್ಟು ಕಾರ್ಯಕ್ರಮ ಜಾರಿಗೊಳಿಸಿದೆ. ಸ್ವತಂತ್ರ್ಯ ನಂತರದಲ್ಲಿ ಕಾಂಗ್ರೆಸ್ ರೂಪಿಸಿದ 20 ಅಂಶಗಳ ಕಾರ್ಯಕ್ರಮ ಇದರಲ್ಲಿ ಪ್ರಮುಖವಾಗಿದೆ. ಈ ಮೂಲಕ ರೈತರಿಗೆ ಹೆಚ್ಚು ಕೊಡುಗೆ ನೀಡಿದ ಪಕ್ಷವೆಂದರೆ ಅದು ಕಾಂಗ್ರೆಸ್ ಎಂದು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ರೈತ ಪರ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಲವು ಬದಲಾವಣೆಗೆ ಕಾರಣರಾದ ಪ್ರೊ.ನಂಜುಂಡಸ್ವಾಮಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಮೈಸೂರು ಮೂಲದವರು ಎಂಬುದು ಹೆಮ್ಮೆ ವಿಷಯ ಎಂದರು.

ಈ ವೇಳೆ ಮೈಸೂರು ಜಿಲ್ಲಾ ಕಾಂಗ್ರೆಸ್ ರೈತ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿರುವ ಜಿ.ಮಹದೇವ್ ಅವರಿಗೆ ಕಾಂಗ್ರೆಸ್ ಧ್ವಜ ನೀಡಿ ಪ್ರತಿಷ್ಠಾಪಿಸಲಾಯಿತು.

ಭಾರತ ಮತ್ತು ಪಾಕಿಸ್ತಾನ ಕದನದಲ್ಲಿ ಹುತಾತ್ಮರಾದ ಭಾರತದ ಯೋಧರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಶುಸಂಗೋಪನಾ ಸಚಿವ ಹೆಚ್. ಎ. ವೆಂಕಟೇಶ್, ಕೆಪಿಸಿಸಿ ಕಾರ್ಯದರ್ಶಿ ಶಿವನಾಗಪ್ಪ ಎಸ್. ಭಾಸ್ಕರ್, ಲೋಕೇಶ್ ರಾವ್, ಎಡತಲೆ ಮಂಜುನಾಥ್, ಉತ್ತನಹಳ್ಳಿ ಮಂಜುನಾಥ್, ನಾಗೇಶ್, ಚರಣ್ ರಾವ್, ಚಂದ್ರಶೇಖರ್, ಪ್ರೇಮ್, ಸತೀಶ್, ಕೊಟ್ರೇಶ್ ಕೋಟೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕರಾಟೆ ಶಿಸ್ತು, ಸಮರ್ಪಣೆ, ಪರಿಶ್ರಮ ಒಳಗೊಂಡ ಜೀವನ ವಿಧಾನ

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮತ

ಮೈಸೂರು, ಮೇ 10–ಶೋ ಟೋಕನ್ ಸ್ಕೂಲ್ ಆಫ್ ಮಾರ್ಷಲ್ ಆರ್ಟ್ಸ್ ಇಂಡಿಯಾ ವತಿಯಿಂದ ಮೈಸೂರು ವಿಶ್ವವಿದ್ಯಾಲಯದ ಯುವರಾಜ ಮತ್ತು ಮಹಾರಾಜ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ 1ನೇ ಆಲ್ ಇಂಡಿಯಾ ಆಲ್ ಸ್ಟೈಲ್ ಓಪನ್ ಫುಲ್ ಕಾಂಟ್ಯಾಕ್ಟ್ ಮಾರ್ಷಲ್ ಆರ್ಟ್ಸ್ ಟೂರ್ನಮೆಂಟ್ ಜರುಗಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಕರಾಟೆ ಕೇವಲ ದೈಹಿಕ ಕಸರತ್ತನ್ನು ಒಳಗೊಂಡ ಸಮರ ಕಲೆ ಮಾತ್ರವಲ್ಲ. ಕರಾಟೆ ಒಂದು ಸಮರ್ಪಣೆ, ಶಿಸ್ತು ಮತ್ತು ಪರಿಶ್ರಮವನ್ನು ಬಯಸುವ ಜೀವನ ವಿಧಾನ ಎಂದರೆ ತಪ್ಪಾಗಲಾರದು. ಸಮಾಜದಲ್ಲಿ ಹೆಣ್ಣು, ಗಂಡು ಸಮಾನತೆ ಕಾಣಬೇಕು ಎಂದರೆ ದೈಹಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ ಸಮಾನವಾಗಿ ಬೆಳೆಯಬೇಕು. ವಿಶೇಷವಾಗಿ ಹೆಣ್ಣು ಮಕ್ಕಳು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ನಿರ್ವಹಣೆ ಮಾಡುವ ಸ್ಥಳಗಳಲ್ಲಿ ಹೆಚ್ಚು ಹೆಚ್ಚು ಲೈಂಗಿಕ, ಮಾನಸಿಕ, ದೈಹಿಕ ಹಿಂಸೆ ಗಳಿಗೆ ಗುರಿಯಾಗುತ್ತಿರುವುದನ್ನು ನಾವು ದಿನನಿತ್ಯ ದೈನಂದಿನ ಬದುಕಿನಲ್ಲಿ ಕಾಣುತ್ತಿದ್ದೇವೆ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ತಮ್ಮ ಸ್ವಯಂ ರಕ್ಷಣೆಗಾಗಿ ಈ ಕಲೆ ಅತ್ಯಂತ ಉಪಯುಕ್ತವಾಗುತ್ತದೆ. ಕರಾಟೆಯಿಂದ ಕೇವಲ ದೈಹಿಕ ಸಾಮರ್ಥ್ಯ ಹೆಚ್ಚುವುದಲ್ಲದೆ ಬೌದ್ಧಿಕ ಮಟ್ಟವನ್ನು ಉತ್ತೇಜಿಸುತ್ತದೆ. ಅಷ್ಟೇ ಅಲ್ಲದೇ ಈ ಒಂದು ಕಲೆಯನ್ನು ಕರಗತ ಮಾಡಿಕೊಂಡರೆ ಸಮಾಜದಲ್ಲಿ ಭಿನ್ನವಾಗಿರಲು ಸಾಧ್ಯವಾಗುತ್ತದೆ ಎಂದರು.



ಆಲ್ ಇಂಡಿಯಾ ಆಲ್ ಸ್ಟೈಲ್ ಓಪನ್ ಫುಲ್ ಕಾಂಟ್ಯಾಕ್ಟ್ ಮಾರ್ಷಲ್ ಆರ್ಟ್ಸ್ ಟೂರ್ನಮೆಂಟ್‌ಗೆ ಚಾಲನೆ ನೀಡಲಾಯಿತು.

ಈ ವೇಳೆ ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಮೈಸೂರು ವಿವಿಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಮುಖ್ಯ ನಿಯಂತ್ರಕ–ಗ್ರ್ಯಾಂಡ್ ಮಾಸ್ಟರ್‌ಗಳಾದ ವಿ.ನಾಗರಾಜು, ಎಂ.ದಿಲೀಪ್‌ಕುಮಾರ್, ಮೈಸೂರು ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಸೆನ್ಸಯ್ ಸುನಿಲ್‌ಕುಮಾರ್, ಕಾರ್ಯದರ್ಶಿಗಳಾದ ಭಾರತಿ ಆನಂದ್, ಶಂಕರ್, ಪ್ರಸನ್ನ, ಗಣೇಶ್, ಕೃಷ್ಣಮೂರ್ತಿ, ಸುರೇಶ್, ಅಬ್ದುಲ್, ಸಿದ್ದರಾಜು, ಜಯಂತ್ ಇದ್ದರು.

ಆತ್ಮಸಾಕ್ಷಿ ಇಲ್ಲದ ಕವಿತೆ ಮನಸ್ಸಿಗೆ ತಟ್ಟುವುದಿಲ್ಲ


ಪ್ರೊ.ಅರವಿಂದ ಮಾಲಗತ್ತಿಯವರ 'ಖಂಡ ಕಾವ್ಯ' ಕೃತಿ ಬಿಡುಗಡೆ

ಮೈಸೂರು, ಮೇ10(ಜಿಎ)–ಎಲ್ಲರಂತೆ ಕವಿತೆಗೂ ಆತ್ಮಸಾಕ್ಷಿ ಇದೆ. ಆತ್ಮಸಾಕ್ಷಿ ಇಲ್ಲದ ಕವಿತೆ ಮನಸ್ಸಿಗೆ ತಟ್ಟುವುದಿಲ್ಲ ಎಂದು ಐಪಿಎಸ್ ಅಧಿಕಾರಿ ಡಾ.ಧರಣಿದೇವಿ ಮಾಲಗತ್ತಿ ಅಭಿಪ್ರಾಯಪಟ್ಟರು.

ನಗರದ ಮಾನಸ ಗಂಗೋತ್ರಿ ಬಿಎಂಶ್ರೀ ಸಭಾಂಗಣದಲ್ಲಿ ಮಾಲಗತ್ತಿ ದಶಬಲ ಟ್ರಸ್ಟ್, ರೈಟರ್ಸ್ ಅಕಾಡೆಮಿ ಮತ್ತು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ನಡೆದ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ರಚಿತ 'ಖಂಡಕಾವ್ಯ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಸಾಮಾಜಿಕ ಜಾಲತಾಣಗಳಲ್ಲಿ ಈಚೆಗೆ ಕವಿತೆ ಹುಟ್ಟಿನ ಚರ್ಚೆ ನಡೆಯುತ್ತಿದೆ. ಕವಿಯ ಆಶಯಗಳು ಕವಿತೆಯ ಮೂಲಕ ಹೊರಬರಲಿವೆ. ಸಮಾನತೆ ಬದುಕಿಗೆ ಶಾಂತಿಯಿಂದ ಬದುಕು ನಡೆಸಲು ಕವಿತೆಗಳು ಪ್ರೇರೇಪಿಸಬೇಕು. ಕವಿ ಬರೆದಂತೆ ಬದುಕಬೇಕು. ಇಲ್ಲವಾದರೆ ಕವಿತೆಗಳು ಮೌಲ್ಯಯುತವಾಗುವುದಿಲ್ಲ ಎಂದರು.

ಸುಮ್ಮನೇ ವರ್ಣನೆ ಮಾಡುತ್ತ ಹೋದರೆ ಕಾವ್ಯ ಆಗುವುದಿಲ್ಲ. ಭಾರತೀಯ ಮೀಮಾಂಸೆಯಲ್ಲಿ ವರ್ಣನೆಯಿಂದ ಕಾವ್ಯ ಆಗುವುದಿಲ್ಲ ಎಂದು ಭಾಮ ಹೇಳಿದ್ದಾನೆ. ವರ್ಣನೆ ಕಾವ್ಯವಾಗಿದ್ದರೆ ನೂರಾರು ಮಂದಿ ಲೇಖಕರಾಗುತ್ತಿದ್ದರು ಎಂದು ತಿಳಿಸಿದರು.



ಮೈಸೂರಿನ ಮಾನಸ ಗಂಗೋತ್ರಿ ಬಿಎಂಶ್ರೀ ಸಭಾಂಗಣದಲ್ಲಿ ಮಾಲಗತ್ತಿ ದಶಬಲ ಟ್ರಸ್ಟ್, ರೈಟರ್ಸ್ ಅಕಾಡೆಮಿ ಮತ್ತು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ರಚಿತ 'ಖಂಡಕಾವ್ಯ' ಕೃತಿಯನ್ನು ಐಪಿಎಸ್ ಅಧಿಕಾರಿ ಡಾ.ಧರಣಿದೇವಿ ಮಾಲಗತ್ತಿ ಬಿಡುಗಡೆಗೊಳಿಸಿದರು.

ವಿಮರ್ಶಕಿ ಡಾ.ಎಂ.ಎಸ್.ಆಶಾದೇವಿ ಮಾತನಾಡಿ, ಸಾಹಿತ್ಯ ಎನ್ನುವುದು ದೊಡ್ಡ ಹುಚ್ಚು. ಆದರೆ, ಆ ಹುಚ್ಚಿಗೆ ಮನುಷ್ಯನೇ ಬೇಕು. ಏಕೆಂದರೆ ಅಸ್ವಸ್ಥಗೊಂಡ ಮನಸ್ಸನ್ನು ಶುದ್ಧಗೊಳಿಸುವ ಶಕ್ತಿ ಸಾಹಿತ್ಯಕ್ಕಿದೆ. 'ಸುತ್ತಮುತ್ತ ಮನೆ–ಮಠಗಳ ಹೊತ್ತುಕೊಂಡು ಉರಿಯುವಾಗ, ಯಾವ ಹಾಡ ಹಾಡಲಿ, ಯಾವ ಹಾಡಿನಿಂದ ನಿಮಗೆ ನೆಮ್ಮದಿ ನೀಡಲಿ' ಎಂಬ ಜಿ.ಎಸ್. ಶಿವರುದ್ರಪ್ಪ ಅವರು ಕವಿತೆ ಸಾಲುಗಳು. ಪ್ರಸ್ತುತ ಸಮಯದಲ್ಲಿ ಕಲೆಯ ಮೂಲಭೂತ ಸವಾಲುಗಳನ್ನು ಗಂಭೀರವಾಗಿ ಎತ್ತುತ್ತಿವೆ. ತನ್ನ ನೈತಿಕ ಹೊಣೆಗಾರಿಕೆ ಕಲೆ, ಸಾಹಿತ್ಯ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.

ಪ್ರಸ್ತುತ ಇಡೀ ನಾಗರಿಕತೆ ತಾತ್ವಿಕವಾದ ಅರಾಜಕತೆಯನ್ನು ಎದುರಿಸುತ್ತಿದೆ. ಹಿಂಸೆ ಎನ್ನುವುದು ಹಿಂದೆಂದ ಕಾಣದ ರೀತಿಯಲ್ಲಿ ನಮ್ಮೆಲ್ಲರ ಎದುರಿಗೆ ತಾಂಡವಾಡುತ್ತಿದೆ. ಇದನ್ನು ನಿವಾರಿಸಲು ತಾಯ್ತನದ ಅಂತಃಕರಣ ಮುಖ್ಯವಾಗಲಿದೆ ಎಂದರು.

ಹಿಂಸೆ ಎನ್ನುವುದು ಹಿಂದೆಂದೂ ಕಾಣದ ರೀತಿಯಲ್ಲಿ ನಮ್ಮೆಲ್ಲರ ಎದುರಿಗೆ ತಾಂಡವಾಡುತ್ತಿದೆ. ಈ ಹಿಂಸೆಯಿಂದ ಮಾನವ ಕುಲವನ್ನು ಪಾರು ಮಾಡುವ ಭವ ಸ್ಥಿತಿ ಹುಡುಕಾಟದಲ್ಲಿ ಜಗತ್ತಿದೆ. ಹಿಂಸಾತ್ಮಕ ಮನಸ್ಥಿತಿಯಲ್ಲಿ ಮನುಕುಲವನ್ನು ಪಾರು ಮಾಡುವ ಶಕ್ತಿ ತಾಯ್ತನದ ಅಂತಃಕರಣಕ್ಕಿದೆ. ಹೀಗಾಗಿ ತಾಯ್ತನ ಅಂತಃಕರಣವನ್ನು ಮುನ್ನೆಲೆಗೆ ತರಬೇಕು. ಈ ತಾಯ್ತನವನ್ನು ಅರವಿಂದ ಮಾಲಗತ್ತಿ ಅವರ 'ಯವ್ವ ತಾಯವ್ವ ಮಾತೆ ಮಹಾ ಗೀತೆ' ಕೃತಿ ಎತ್ತಿ ಹಿಡಿಯುತ್ತಿದೆ ಎಂದು ತಿಳಿಸಿದರು.

ತಾತ್ವಿಕ ಅರಾಜಕತೆಯನ್ನು ಮೀರಬಲ್ಲ ಶಕ್ತಿ ಸ್ತ್ರೀವಾದಕ್ಕಿದೆ. ಸ್ತ್ರೀವಾದವೇ ಸರ್ವಕಾಲಿಕ ತಾತ್ವಿಕ ಆಯ್ಕೆ. ಜಗತ್ತಿಗೆ ಬೇಡ ಎನಿಸಿದರು ಅನಿವಾರ್ಯ ಆಯ್ಕೆ ಸ್ತ್ರೀವಾದ. ಸ್ತ್ರೀವಾದಕ್ಕೆ ಯಾವುದರ ಬಗ್ಗೆಯೂ ವಿರೋಧವಿಲ್ಲ. ದ್ವೇಷವಂತು ಇಲ್ಲವೇ ಇಲ್ಲ. ಮಾನವೀಯತೆ ಸ್ಪರ್ಶದಿಂದ ಎಲ್ಲರನ್ನು ಒಳಗೊಳ್ಳಲು ಪ್ರಯತ್ನಪಡುತ್ತಿದೆ. ಗಂಡಾಳ್ವಿಕೆಯ ವಿರುದ್ಧ ನಡೆಸುತ್ತಿರುವ ಪ್ರಯತ್ನ ಹೊರತು ಗಂಡಿನ ವಿರುದ್ಧವಲ್ಲ ಎಂದರು.

ಕೃತಿ ಬಿಡುಗಡೆ ಕಾರ್ಯಕ್ರಮದ ನಂತರ ಕವಿ ಬಿ.ಆರ್.ಲಕ್ಷ್ಮಣರಾವ್ ಅಧ್ಯಕ್ಷತೆಯಲ್ಲಿ ಕಾವ್ಯ ಧಮರುಗ ಕವಿಗೋಷ್ಠಿಯಲ್ಲಿ ಹಲವಾರು ಮಂದಿ ಕವಿಗಳು ತಮ್ಮ ಕವನ ವಾಚಿಸಿದರು. ಕಾರ್ಯಕ್ರಮದಲ್ಲಿ ದಶಬಲ ಟ್ರಸ್ಟ್‌ನ ಉಪಾಧ್ಯಕ್ಷ ಡಾ.ಡಿ.ಕೆ.ರಾಜೇಂದ್ರ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ.ಎನ್.ಕೆ.ಲೋಲಾಕ್ಷಿ, ಡಾ.ನೀ.ಗೂ.ರಮೇಶ್, ಮಾರುತಿ ನುಡಿವಿಮನೆ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ದಿ ಭೂತ್‌ನಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ರೆಟ್ರೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ನಗರದಾದ್ಯಂತ ರೌಡಿಶೀಟರ್ ಮನೆಗಳಲ್ಲಿ ಶೋಧ

ಶನಿವಾರ ಹೆಬ್ಬಾಳು ಠಾಣೆಯಲ್ಲಿ ರೌಡಿಗಳ ಪರೇಡ್; ಪೋಲೀಸರ ಎಚ್ಚರಿಕಾ ಪಾಠ



ಡಿಸಿಪಿಗಳಾದ ಎಂ.ಮುತ್ತುರಾಜ್, ಕೆ.ಎಸ್. ಸುಂದರಾಜ್ ಶನಿವಾರ ರೌಡಿಗಳ ಪರೇಡ್ ನಡೆಸಿದರು.

ಮೈಸೂರು, ಮೇ 10(ಆರ್‌ಕೆ)– ಮೈಸೂರು ನಗರದಾದ್ಯಂತ ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿನ ರೌಡಿಶೀಟರ್‌ಗಳ ಮನೆ ಮೇಲೆ ದಾಳಿ ಮಾಡಿದ ಪೊಲೀಸರು, ರಾತ್ರಿಯಿಡೀ ಶೋಧ ಕಾರ್ಯ ನಡೆಸಿದರು.

ಉಪವಿಭಾಗದ ಎಸಿಪಿಗಳ ನೇತೃತ್ವದಲ್ಲಿ ಆಯಾ ಠಾಣಾ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ತಮ್ಮ ಠಾಣೆಗಳಲ್ಲಿ ರೌಡಿಶೀಟ್ ತೆರೆದಿರುವ ಆಸಾಮಿಗಳ ಮನೆಗಳಿಗೆ ದಾಳಿ ಮಾಡಿ ಶೋಧ ನಡೆಸಿದರಾದರೂ, ಯಾವುದೇ ಮಾರಕಾಸ್ತ್ರ, ಹಣಕಾಸು ವ್ಯವಹಾರದ ದಾಖಲೆ, ಚೆಕ್ ಲೀವ್ಸ್‌ಗಳು ಪತ್ತೆಯಾಗಲಿಲ್ಲ ಎಂದು ಡಿಸಿಪಿ ಮುತ್ತುರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಂದು ಬೆಳಗ್ಗೆ ಹೆಬ್ಬಾಳು ಠಾಣೆಗೆ 60 ಸಕ್ರಿಯ ರೌಡಿಶೀಟರ್‌ಗಳನ್ನು ಕರೆತಂದು ಪರೇಡ್ ನಡೆಸಿದ ಅವರು, ರಿಯಲ್ ಎಸ್ಟೇಟ್, ಬಡ್ಡಿ ಲೇವಾದೇವಿ, ಇನ್ನಾವುದೇ ಉದ್ದಿಮೆ ಸಂಬಂಧ ಅಮಾಯಕರನ್ನು ಬೆದರಿಸಿ ಹಣ ಪೀಕುವುದು, ಸೆಟಲ್‌ಮೆಂಟ್ ನೆಪದಲ್ಲಿ ತೊಂದರೆ ಕೊಡುವುದು, ಗುಂಪು ಘರ್ಷಣೆ, ಗಲಭೆ, ಗೊಂದಲ ಸೃಷ್ಟಿಸಿ ಸಮಾಜದ ಶಾಂತಿಗೆ ಭಂಗ ತರುವಂತಹ ಕೃತ್ಯಗಳು ಕಂಡುಬಂದಲ್ಲಿ ಪ್ರಕರಣ ದಾಖಲಿಸಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ರಾತ್ರಿ ವೇಳೆ ಕುಡಿದು ಗಲಾಟೆ ಮಾಡುವುದು, ಮಾರಕಾಸ್ತ್ರ ಹಿಡಿದು ಸಂಚರಿಸುವುದು, ಇನ್ನಿತರ ಸಮಾಜಘಾತುಕ ಕೃತ್ಯದಲ್ಲಿ ಪಾಲ್ಗೊಂಡರೆ ಗೂಂಡಾ ಕಾಯ್ದೆಯಡಿ ಕೇಸು ದಾಖಲಿಸಿ ಜೈಲಿಗೆ ಕಳುಹಿಸಲಾಗುತ್ತದೆ ಎಂದು ಅವರು ರೌಡಿಶೀಟರ್‌ಗಳಿಗೆ ಎಚ್ಚರಿಕೆ ನೀಡಿದರು.

PUBLIC NOTICE

This is to inform the public in general that our client **Mr. MOHAMMED ABDUL RAHAMAN,** S/o. Mr. Mohammed Maqthar Pasha, is purchasing the Schedule property from Smt. Geetha Sai. C. S. and others.

If any person has any kind of Right, Title, interest, objection, claim or Enforceable charge over the schedule Property or to the proposed Sale by them they may lodge their claim/ objection with the undersigned within 5 days from the notification with supporting documents, Due failing which my client will take it for granted that there are no claims/charges/objections whatsoever from whomsoever. Any claims/objections received after stipulation period of 5 days will be dated have no claim and the same will be ignored.

SCHEDULE PROPERTY

All the piece and parcel of the Property Khatha bearing No. 302/189, as per Rammanahalli Pattana Panchayath E-Khatha Property **No. 2727552412**, Nirdarana No. Old Khatha No. 302/289, **New khatha No. 302/189**, Situated at Hanchya Village, Kasaba Hobli, Mysore Taluk, Mysore, East by : Sy No. 297, West by: Sy No. 293, North by Road, South by Sy No. 293/2A. (Layout formed and carved in alienated land vide No.ALN 27/1999-2000, dated 11-06-1999, in Survey No. 293/1 an extent of 0-20 Guntas, of Hanchya Village, Kasaba Hobli, Mysore Taluk Mysore) The extent Measuring East to West 30.9829 Meters and North to South 65.3796 Meters in total 2025.65 Square Meters of Vacant site only.

Issued by:

Roshan Hussain Asadulla Khan Saifuddin, Padmashree, Advocates
No.13, Sadiq-Ul-Ameen Complex,
Mahadevpura Main Road, Udayagiri,
Mysore-570019

Date: 10.5.2025

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಹುಂಡಿ ಗ್ರಾಮದ ದಿ. ಚಿಕ್ಕಹೈದೆಗೌಡ ಮತ್ತು ನಾಗಮ್ಮರವರ ಪುತ್ರಿ ಸುಮಾರು 47 ವರ್ಷ ವಯಸ್ಸಿನ ಶ್ರೀಮತಿ ಸಣ್ಣಮ್ಮ ಕೋಂ ಮಹದೇವರವರು ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಭಾಗಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಗೌರವಾನ್ವಿತ 7ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಮೈಸೂರು ಇಲ್ಲಿ ಅಸಲು ದಾವಾ ಸಂಖ್ಯೆ 805/2024ನ್ನು ಅವರ ತಾಯಿ ನಾಗಮ್ಮ ಮತ್ತು ತಮ್ಮ ಬೀರಪ್ಪ (ವಾಸ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಹುಂಡಿ ಗ್ರಾಮ) ಹಾಗೂ ತಂಗಿಯರಾದ ಗೌರಮ್ಮ (ವಾಸ ಮೈಸೂರು ತಾಲ್ಲೂಕು, ವರುಣ ಹೋಬಳಿ, ಸಜ್ಜೆಹುಂಡಿ ಗ್ರಾಮ) ಮತ್ತು ಮಂಜುಳ (ವಾಸ ನಂಜನಗೂಡು ತಾಲ್ಲೂಕು, ಈಶ್ವರೇಗೌಡನ ಹಳ್ಳಿ ಗ್ರಾಮ) ರವರ ವಿರುದ್ಧ ದಾಖಲಿಸಿರುತ್ತಾರೆ ಸದರಿ ದಾವೆಯು ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ. ಈ ನಡುವೆ ಈ ಮೇಲೆ ತಿಳಿಸಿದ ನಮ್ಮ ಕಕ್ಷಿದಾರರ ತಾಯಿ ನಾಗಮ್ಮ ಮತ್ತು ತಮ್ಮ ಬೀರಪ್ಪ ಹಾಗೂ ತಂಗಿಯರಾದ ಗೌರಮ್ಮ ಮತ್ತು ಮಂಜುಳರವರುಗಳು ಒಬ್ಬರಿಗೊಬ್ಬರು ಷರೀಕ್ಕಾಗಿ ಷೆಡ್ಯೂಲ್ ಸ್ವತ್ತುಗಳನ್ನು 3ನೇ ವ್ಯಕ್ತಿಗಳಿಗೆ ಮಾರಾಟ ಮಾಡುವ ಪ್ರಯತ್ನ ಮಾಡುತ್ತಿದ್ದಾರೆಂದು ನಮ್ಮ ಕಕ್ಷಿದಾರರು ತಿಳಿಸಿರುತ್ತಾರೆ ಆದ ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಈಗಾಗಲೇ ಈ ಮೇಲ್ಕಂಡಂತೆ ದಾವೆ ಹೂಡಿರುವುದರಿಂದ ಸಾರ್ವಜನಿಕರ್‍ಯಾರೊಬ್ಬರು ಸಹ ಈ ಕೆಳಕಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕ್ರಯ, ಕ್ರಯದ ಕರಾರು ಇತ್ಯಾದಿ ವ್ಯವಹಾರಗಳನ್ನು ಮಾಡಬಾರದೆಂದು ಒಂದು ವೇಳೆ ಮಾಡಿದರೆ ಅಂತ ವ್ಯವಹಾರಗಳು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲವೆಂದು ಮತ್ತು ನಮ್ಮ ಕಕ್ಷಿದಾರರ ಹಕ್ಕು ಬಾಧ್ಯತೆಗಳನ್ನು ಬದ್ಧ ಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ.

ಷೆಡ್ಯೂಲ್ ಸ್ವತ್ತು

1. ಮೈಸೂರು ತಾಲ್ಲೂಕು, ವರುಣ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಸರ್ವೇ ನಂ. 62 ವಿಸ್ತೀರ್ಣ 5 ಎಕರೆಗೆ ಸಂಬಂಧಿಸಿದಂತೆ ಮಾನ್ಯ ಮೈಸೂರಿನ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದ ಎಫ್.ಡಿ.ಪಿ ನಂ. 16/2010 (ಓ.ಎಸ್. ನಂ. 807/2006) ರಲ್ಲಿ ನೀಡಲಾಗಿರುವ ನ್ಯಾಯಾಲಯದ ಆಯುಕ್ತರ ವರದಿಯಲ್ಲಿ ಆ ಕೇಸಿನ ವಾದಿಗಳಿಗೆ ತೋರಿಸಲಾಗಿರುವ 'ಎ' ಭಾಗದ ಸ್ವತ್ತು ಇದಕ್ಕೆ ಚಕ್ಕುಬಂಧಿ: ಪೂರ್ವಕ್ಕೆ: ರಾಮಯ್ಯ ಮತ್ತು ಇತರರ ಜಮೀನು ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ : ಸುಬ್ಬಯ್ಯ ಮತ್ತು ಇತರರ ಜಮೀನು ; ದಕ್ಷಿಣಕ್ಕೆ: ಬಿ. ಪಾಪಯ್ಯ ಮತ್ತು ಇತರರ ಜಮೀನು.

2. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬಂಡಿಪಾಳ್ಯ ಗ್ರಾಮದ ಸರ್ವೇ ನಂ. 52 ವಿಸ್ತೀರ್ಣ 3 ಎಕರೆ 16 ಗುಂಟೆ ಪೈಕಿ ಮಾನ್ಯ ಮೈಸೂರಿನ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದ ಎಫ್.ಡಿ.ಪಿ ನಂ. 16/2010 (ಓ.ಎಸ್. ನಂ. 807/2006) ರಲ್ಲಿ ನೀಡಲಾಗಿರುವ ನ್ಯಾಯಾಲಯದ ಆಯುಕ್ತರ ಸರ್ವೇ ಸ್ಕೆಚ್ಚಿನ 'ಬಿ' ವಿಭಾಗದಲ್ಲಿ ತೋರಿಸಿರುವ ವಾದಿಗಳ ಭಾಗದ ವಿಸ್ತೀರ್ಣ 1 ಎಕರೆ 28 ಗುಂಟೆ ಸ್ವತ್ತು ಇದಕ್ಕೆ ಚಕ್ಕುಬಂಧಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಶಿರಯ್ಯನ ಚಿಕ್ಕಮಾದನ ಜಮೀನು ; ಉತ್ತರಕ್ಕೆ : ಇ. ಈರಯ್ಯನ ಜಮೀನು ; ದಕ್ಷಿಣಕ್ಕೆ: ರಸ್ತೆ.

3. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಎಲಿಗೆಹುಂಡಿ ಗ್ರಾಮದಲ್ಲಿರುವ 12 ಕಂಬದ ತೊಟ್ಟಿಮನೆಯ ವಿಸ್ತೀರ್ಣ ಪೂರ್ವ ಪಶ್ಚಿಮ 42 ಅಡಿ ದಕ್ಷಿಣೋತ್ತರ 40 ಅಡಿಗಳು ಇದರಲ್ಲಿ ಮಾನ್ಯ ಮೈಸೂರಿನ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದ ಎಫ್.ಡಿ.ಪಿ ನಂ. 16/2010 (ಓ.ಎಸ್. ನಂ. 807/2006) ರಲ್ಲಿ ನೀಡಲಾಗಿರುವ ನ್ಯಾಯಾಲಯದ ಆಯುಕ್ತರ ಸ್ಕೆಚ್ಚಿನಲ್ಲಿ ವಾದಿಗಳ ಭಾಗಕ್ಕೆ ಉತ್ತರದಲ್ಲಿ ತೋರಿಸಲಾಗಿರುವ ಪೂರ್ವ ಪಶ್ಚಿಮ 42 ಅಡಿ ಉತ್ತರ ದಕ್ಷಿಣ 20 ಅಡಿ ಇದಕ್ಕೆ ಚಕ್ಕುಬಂಧಿ: ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ; ವಾದಿ ಮತ್ತು ಪ್ರತಿವಾದಿಗಳ ನಿವೇಶನ; ಉತ್ತರಕ್ಕೆ: ಚಿಕ್ಕಬೀರೆಗೌಡರ ಆಸ್ತಿ ; ದಕ್ಷಿಣಕ್ಕೆ : ಚಿಕ್ಕೇಗೌಡರ ಆಸ್ತಿ

4. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಎಲಿಗೆಹುಂಡಿ ಗ್ರಾಮದಲ್ಲಿರುವ ನಿವೇಶನದ ವಿಸ್ತೀರ್ಣ 100 ಅಡಿ ಮತ್ತು 50 ಅಡಿಗಳ ಪೈಕಿ ಲಭ್ಯತೆ ಇರುವ ವಿಸ್ತೀರ್ಣ ಪೂರ್ವ ಪಶ್ಚಿಮ 50 ದಕ್ಷಿಣೋತ್ತರ 35 ಅಡಿಗಳನ್ನು ವಾದಿಗಳ ಭಾಗಕ್ಕೆ ಮಾನ್ಯ ಮೈಸೂರಿನ 4ನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದ ಎಫ್.ಡಿ.ಪಿ ನಂ. 16/2010 (ಓ.ಎಸ್. ನಂ. 807/2006) ರಲ್ಲಿ ನೀಡಲಾಗಿರುತ್ತದೆ ಇದಕ್ಕೆ ಚಕ್ಕುಬಂಧಿ: ಪೂರ್ವಕ್ಕೆ: ವಾದಿ ಮತ್ತು ಪ್ರತಿವಾದಿಗಳ ಮನೆ ; ಪಶ್ಚಿಮಕ್ಕೆ ರಸ್ತೆ ; ಉತ್ತರಕ್ಕೆ: ಕೆಂಚೇಗೌಡರ ಆಸ್ತಿ ; ದಕ್ಷಿಣಕ್ಕೆ : ಜವರೇಗೌಡರ ಆಸ್ತಿ.

Sd/- Ravichandra. S, Advocate, KAR No. 1743/08.
Office: #856-857, 2nd Floor, R.R. Complex, Near 'Male Mahadeshwara Temple', Next to City Union Bank, Narayana Shastri Road, K.R. Mohalla, Mysuru-570 024.